ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರೋಪನ್ಯಾಸಮಾಲೆ—೨

ಸಮಾಜದ ರೋಗರುಜಿನಗಳು

ಜಿ. ಹನುಮಂತರಾವ್, ಎಂ.ಎ.

ವೆಸ್ಲಿ ಪ್ರೆಸ್, ಮೈಸೂರು ಸಿಟಿ
೧೯೩೯

ಬೆಲೆ: ೨ ಆಣೆ.

ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರೋಪನ್ಯಾಸಮಾಲೆ—೨

ಸಮಾಜದ ರೋಗರುಜಿನಗಳು

ಜಿ. ಹನುಮಂತರಾವ್, ಎಂ.ಎ.

ಮೈಸೂರು:
ವೆಸ್ಲಿ ಪ್ರೆಸ್ ಮತ್ತು ಪಬ್ಲಿಷಿಂಗ್ ಹೌಸಿನಲ್ಲಿ ಮುದ್ರಿಸಲ್ಪಟ್ಟಿತು
೧೯೩೯

ಮುನ್ನುಡಿ

೩

ಮೈಸೂರು ವಿಶ್ವವಿದ್ಯಾನಿಲಯದ ಛಾನ್ಸೆಲರವರಾದ ಶ್ರೀಮನ್ಮಹಾರಾಜರವರು ಈ ವಿಶ್ವವಿದ್ಯಾನಿಲಯದ ಮೊದಲನೆಯ ಸೆನೆಟ್ ಸಭೆಯ ಆರಂಭೋತ್ಸವವನ್ನು ನೆರವೇರಿಸುವಾಗ ಮಾಡಿದ ಭಾಷಣದಲ್ಲಿಯೂ ಇದರ ಮೊದಲನೆಯ ಪಟ್ಟಪ್ರದಾನೋತ್ಸವದ ಕಾಲದಲ್ಲಿ ಮಾಡಿದ ಭಾಷಣದಲ್ಲಿಯೂ ವಿಶ್ವವಿದ್ಯಾನಿಲಯದ ಇತರ ಕರ್ತವ್ಯಗಳ ಜೊತೆಗೆ ವಿಶೇಷವಾಗಿ ಈ ಎರಡರ ನಿರ್ವಾಹವನ್ನು ಅದಕ್ಕೆ ವಹಿಸಿಕೊಟ್ಟರು: (೧) ಲಲಿತವಾದ ಕನ್ನಡದಲ್ಲಿ ಗ್ರಂಥಗಳನ್ನು ಬರಸಿ ಪ್ರಕಟಿಸುವುದು, ಮತ್ತು ಕನ್ನಡ ಸಾಹಿತ್ಯಕ್ಕೆ ಉತ್ತೇಜನ ಕೊಡುವುದು, (೨) ಮಹಾಸ್ವಾಮಿಯವರ ಪ್ರಜೆಗಳಲ್ಲಿ, ವಿಶ್ವವಿದ್ಯಾನಿಲಯದ ನಿಯತಪರೀಕ್ಷೆಗಳಿಗಾಗಿ ಏರ್ಪಟ್ಟ ಪಾಠಪ್ರವಚನಗಳಲ್ಲಿ ಭಾಗಿಗಳಾಗಲು ಹಲವಾರು ಕಾರಣಗಳಿಂದ ಅನುಕೂಲ ಹೊಂದದವರಿಗೆ ಜ್ಞಾನಪ್ರಚಾರ ಮಾಡುವುದು, ಮತ್ತು ಸಂಸ್ಥಾನದ ಎರಡು ಮುಖ್ಯ ನಗರಗಳ ವಿದ್ಯಾಭ್ಯಾಸ ಸೌಕರ್ಯವನ್ನು ಪಡೆಯಲಾರದ ಗ್ರಾಮಾಂತರಗಳವರಿಗೆ ಮೇಲುಮಟ್ಟದ ಸಂಸ್ಕೃತಿಯ ಪರಿಚಯವನ್ನು ಒದಗಿಸಿಕೊಡುವುದು.

ನಮ್ಮ ವಿಶ್ವವಿದ್ಯಾನಿಲಯವು ಉದ್ದಕ್ಕೂ ಈ ಎರಡು ಘನೋದ್ದೇಶಗಳನ್ನೂ ಸಂತತವಾಗಿ ತನ್ನ ದೃಷ್ಟಿಯಲ್ಲಿಟ್ಟುಕೊಂಡೇ ಕೆಲಸಮಾಡುತ್ತಿದೆ. ವಿಶ್ವವಿದ್ಯಾನಿಲಯದ ಗ್ರಂಥಪ್ರಕಟನ ಸಮಿತಿಯವರು ಕನ್ನಡದ ಪ್ರಾಚೀನ ಮಹಾಕಾವ್ಯ

ಸಂಗ್ರಹಗಳನ್ನು ಸಂಶೋಧಿಸಿಯೂ, ಸಾಹಿತ್ಯ ವಿಜ್ಞಾನಗಳಿಗೆ ಸಂಬಂಧಪಟ್ಟ ಸ್ವತಂತ್ರ ಗ್ರಂಥಗಳನ್ನು ಬರಸಿಯೂ ಪ್ರಕಾಶ ಗೊಳಿಸಿದ್ದಾರೆ. ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸ ಸಮಿತಿಯವರು ಸಂಸ್ಥಾನದ ಬೇರೆ ಬೇರೆ ಕಡೆಗಳಲ್ಲಿ ಉಪನ್ಯಾಸ ಗಳನ್ನು ಪ್ರಧಾನವಾಗಿ ಕನ್ನಡದ ಮೂಲಕ ಕೊಡಿಸುವ ಏರ್ಪಾಡು ಮಾಡಿದ್ದಾರೆ.

ಕೆಲವು ವರ್ಷಗಳಿಂದ ಈಚೆಗೆ ಇನ್ನೊಂದು ಮುಖ್ಯವಾದ ರೀತಿಯಲ್ಲಿ ಕಾರ್ಯಕ್ರಮವು ಬೆಳೆದಿದೆ. ವಿವಿಧ ವಿಷಯಗಳ ಮೇಲೆ ಒಂದೊಂದೇ ಉಪನ್ಯಾಸಕೊಟ್ಟು ಮುಗಿಸುವುದರ ಜೊತೆಗೆ, ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘದವರ ಸಹಕಾರದಿಂದ, 'ಉಪನ್ಯಾಸ ಸಪ್ತಾಹ'ವೆಂದು ಈಗ ಕರೆಯುತ್ತಿರುವ ಉಪನ್ಯಾಸಮಾಲೆಗಳನ್ನು ಏರ್ಪಡಿಸಲಾಗಿದೆ. ಒಂದೊಂದು ಕೇಂದ್ರದಲ್ಲೂ ಐದಾರು ದಿನಗಳ ತನಕ ಭಾಷಣ ಕಾವ್ಯವಾಚನ ಗಾಯನಗಳನ್ನು ನಡಸಲಾಗಿದೆ; ಉಪನ್ಯಾಸ ಗಳು ಸಾಹಿತ್ಯ ವಿಜ್ಞಾನ ಸಾಮಾಜಿಕ ಮೊದಲಾದ ಎಲ್ಲ ವಿಷಯ ಗಳನ್ನೂ ಒಳಕೊಳ್ಳುತ್ತವೆ. ದೊಡ್ಡಬಳ್ಳಾಪುರ, ದಾವಣಗೆರೆ, ಕೋಲಾರ, ಈ ಮೊದಲಾದ ಕಡೆಗಳಲ್ಲೆಲ್ಲಾ ಈ ಉಪನ್ಯಾಸ ಸಪ್ತಾಹಗಳು ನಡೆದು ಜನರ ಮೆಚ್ಚಿಕೆಯನ್ನು ವಿಶೇಷವಾಗಿ ಪಡೆದಿವೆ.

ನಮ್ಮ ಕಾರ್ಯಕ್ರಮದಲ್ಲಿ ಇನ್ನೂ ಈಚೆಯ ವಿಸ್ತರಣ ವೇನೆಂದರೆ—ಕೆಲವು ಕೇಂದ್ರಗಳನ್ನು ಆರಿಸಿಕೊಂಡು ಆ ಸ್ಥಳ ಗಳಿಗೆ ಒಂದು ವರ್ಷದಲ್ಲಿ ಹಲವು ಬಾರಿ ಹೋಗಿ, ಬೇರೆ ಬೇರೆ ವಿಷಯಗಳನ್ನು ಕುರಿತು ಒಂದೊಂದರ ಮೇಲೂ ಉಪನ್ಯಾಸ ಮಾಲೆಯನ್ನು ಕೊಡಿಸುವುದು. ಹೀಗೆ ಮಾಡುವುದರಿಂದ, ಒಂದು ಸ್ಥಳದ ಜನಗಳು ತಕ್ಕಮಟ್ಟಿಗೆ ದೀರ್ಘವಾದ ಕಾಲಾ

ವಧಿಯಲ್ಲಿ ಉದ್ದಕ್ಕೂ ಆ ವಿಷಯಗಳ ಮೇಲೆ ಹಲವು ಪ್ರವಚನಗಳನ್ನು ಕೇಳಲು ಸಾಧ್ಯವಾಗಿದೆ. ಉಪನ್ಯಾಸಗಳನ್ನು ಯಾವ ಸ್ಥಳದ ಉಪಯೋಗಕ್ಕಾಗಿ ಮೊದಲು ಏರ್ಪಡಿಸಿತ್ತೋ ಅಲ್ಲಿಯವರು ಮಾತ್ರವೇ ಅಲ್ಲದೆ ಹೊರಗಿನವರು ಕೂಡ ಅವುಗಳ ಲಾಭವನ್ನು ಪಡೆಯಲೆಂದು ಈ ಉಪನ್ಯಾಸಗಳನ್ನು ಜೊತೆಗೂಡಿಸಿ ಚಿಕ್ಕ ಕೈಪಿಡಿಗಳ ರೂಪದಲ್ಲಿ ಈಗ ಪ್ರಕಟಿಸಲಾಗಿದೆ.

ಈ ಉಪನ್ಯಾಸಗಳನ್ನು ಕೊಟ್ಟು ಈ ಕೈಪಿಡಿಗಳನ್ನು ರಚಿಸಿದವರ ಹಾರೈಕೆ ಹೆಬ್ಬಯಕೆಗಳು ಇಷ್ಟೇ: ದಯಾಳುಗಳಾದ ಮಹಾಸ್ವಾಮಿಯವರು ವಿಶ್ವವಿದ್ಯಾನಿಲಯಕ್ಕೆ ವಹಿಸಿಕೊಟ್ಟ ಮುಖ್ಯ ಕಾರ್ಯಗಳೆರಡೂ, ಎಂದರೆ ಲಲಿತವೂ ಸರಳವೂ ಆದ ಕನ್ನಡದಲ್ಲಿ ಪುಸ್ತಕಗಳನ್ನು ಬರಸಿ ಪ್ರಕಟಿಸುವುದು ಮತ್ತು ಜನಸಾಮಾನ್ಯದಲ್ಲಿ ಮೇಲುಮಟ್ಟದ ಸಂಸ್ಕೃತಿಯನ್ನು ಹರಡುವುದು—ಈ ಎರಡೂ ಈ ಗ್ರಂಥಗಳ ಮೂಲಕ ಜೊತೆಜೊತೆಗೇ ಕೈಗೂಡಲಿ.

ವಿಶ್ವವಿದ್ಯಾನಿಲಯ, ಮೈಸೂರು,
೨೯—೫—೧೯೩೯. } ಎಂ. ಎಸ್. ಸುಬ್ಬರಾವ್.

ಪೀಠಿಕೆ

ವಿಜ್ಞಾನವು ಭೌತವಿಷಯಗಳಲ್ಲಿ ವಿಶೇಷವಾಗಿ ಬೆಳೆದಿದೆ; ಜೀವನ ವಿಚಾರಗಳಲ್ಲಿ ಬಹಳ ಹಿಂದೆ ಬಿದ್ದಿದೆ. ಈ ವ್ಯತ್ಯಾಸ ದಿಂದ ಇಂದಿನ ಜೀವನದಲ್ಲಿ ಭಯಂಕರವಾದ ಒಂದು ವಿಷಮ ಸ್ಥಿತಿ ಉಂಟಾಗಿದೆ. ಪ್ರಚಂಡತರವಾದ ಭೌತಶಕ್ತಿಗಳೂ ಯಂತ್ರ ಗಳೂ ಶಸ್ತ್ರಗಳೂ ಮನುಷ್ಯನ ವಶವಾಗಿವೆ. ಅವನು ಅವನ್ನು ಹೆಚ್ಚಾಗಿ ಲೋಕಸಂಗ್ರಾಮಕ್ಕಾಗಿ ಉಪಯೋಗಿಸುತ್ತಿರುವನೇ ಹೊರತು ಲೋಕಸಂಗ್ರಹಕ್ಕಾಗಿ ಉಪಯೋಗಿಸುತ್ತಿಲ್ಲ. ಆದುದ ರಿಂದ ಅವನನ್ನೂ ಅವನ ಸಂಸ್ಥೆಗಳನ್ನೂ ಹತೋಟಿಯಲ್ಲಿಡಲು ಸಾಧಕಗಳಾದ ಜೀವ ವಿಜ್ಞಾನ, ಮಾನಸಿಕ ವಿಜ್ಞಾನ, ಸಾಮಾ ಜಿಕ ವಿಜ್ಞಾನ—ಇವು ಬೆಳೆದಲ್ಲದೆ ನಾಗರಿಕ ಜೀವನಕ್ಕೆ ಉಳಿ ಗಾಲವಿಲ್ಲ.

ಪಾಶ್ಚಾತ್ಯ ದೇಶದವರಿಗೆ ಈ ಭಯದ ಬಿಸಿ ತಾಕಿ ಅವರು ಸ್ವಲ್ಪ ಎಚ್ಚರಗೊಳ್ಳುತ್ತಿದ್ದಾರೆ. ಎಷ್ಟು ಜನ ಹುಟ್ಟಿದರೆ ಸಮಾ ಜಕ್ಕೆ ಕ್ಷೇಮ; ಎಂಥವರಿಗೆ ಮಕ್ಕಳಾದರೆ ಒಳ್ಳೆಯದು; ಯಾರುಯಾರಿಗೆ ಎಷ್ಟೆಷ್ಟು ಆದಾಯವಿರಬೇಕು; ಜನರ ಸಾಮಾ ಜಿಕ ಶೀಲಸ್ವಭಾವಗಳು ಹೊರಹೊಮ್ಮುವುದಕ್ಕೂ ಅವರಿಗೆ ಸುಖಶಾಂತಿಗಳು ದೊರೆಯುವುದಕ್ಕೂ ಎಂಥೆಂಥಾ ಸಮಾಜ ಸಂಸ್ಥೆಗಳು ಹುಟ್ಟಬೇಕು; ಸಮಾಜಕ್ಕೆ ಸಮಾಜವೇ ಬೇರೆಯ ರೀತಿಯಲ್ಲಿ ಪುನಃ ರಚನೆಯಾಗಬೇಕೇ ಎಂಬೀ ವಿಚಾರಗಳನ್ನು ಆಲೋಚಿಸತೊಡಗಿರುವರು.

ಇಂತಹ ಸಮಸ್ಯೆಗಳನ್ನು ವಿಚಾರಮಾಡುವ ಶಾಸ್ತ್ರಕ್ಕೆ

ಸಮಾಜಶಾಸ್ತ್ರವೆಂದು ಹೆಸರು; ಸಮಾಜ ರೋಗವಿಜ್ಞಾನವು (Social Pathology) ಅದರ ಒಂದು ಭಾಗ. ಈಗ ಸಮಾಜದ ಆರೋಗ್ಯ ಕೆಟ್ಟಿರುವುದು ಎಲ್ಲರ ಅನುಭವಕ್ಕೂ ಬಂದಿದೆ. ಆದುದರಿಂದ ಸಮಾಜದ ರೋಗರುಜಿನಗಳನ್ನು ವಿವರಿಸಿ, ಅವುಗಳ ಕಾರಣಗಳನ್ನೂ ಪರಿಹಾರೋಪಾಯಗಳನ್ನೂ ಸೂಚಿಸಿದರೆ ಜನರಿಗೆ ಸಮಾಜ ವಿಜ್ಞಾನದಲ್ಲಿ ಹೆಚ್ಚು ಕುತೂಹಲ ಮತ್ತು ಆಸಕ್ತಿ ಹುಟ್ಟಬಹುದೆಂಬ ಭಾವನೆಯಿಂದ ಆ ವಿಷಯವನ್ನು ಮೊದಲು ಆಯ್ದುಕೊಂಡಿದೆ.

ಈ ಪುಸ್ತಕದ ವಿಷಯವು ಈಗಾಗಲೇ ಪ್ರಚಾರೋಪನ್ಯಾಸಗಳ ಮೂಲಕ ತುಮಕೂರು, ತಿಪಟೂರು ಮತ್ತು ಮಧುಗಿರಿಯ ಮಹಾ ಜನರಿಗೆ ಪರಿಚಿತವಾಗಿದೆ. ಅವನ್ನು ಸ್ವಲ್ಪ ಬೆಳೆಸಿ ಈಗ ಪುಸ್ತಕರೂಪಕ್ಕೆ ತಂದಿರುತ್ತೇನೆ. ಕೈ ಬರಹದ ಪ್ರತಿಯನ್ನು ಮುದ್ರಣಕ್ಕಾಗಿ ಅಣಿಮಾಡಿದುದಕ್ಕೂ ಅದನ್ನು ಪರಿಷ್ಕರಿಸಲು ಸಮಯೋಚಿತವಾದ ಸಲಹೆಗಳನ್ನು ಕೊಟ್ಟದ್ದಕ್ಕೂ ನನ್ನ ಮಿತ್ರರಾದ ಶ್ರೀಮಾನ್ ಡಿ. ಎಲ್. ನರಸಿಂಹಚಾರ್ ಅವರಿಗೂ ಶ್ರೀಮಾನ್ ತೀ. ನಂ. ಶ್ರೀಕಂಠಯ್ಯನವರಿಗೂ ನನ್ನ ಪ್ರೀತಿಪೂರ್ವಕವಾದ ವಂದನೆಗಳು.

ಪುಸ್ತಕ ಬರೆಯಲು ಉತ್ತೇಜನಕೊಟ್ಟು ಅದನ್ನು ಪ್ರಕಟಪಡಿಸಿದುದಕ್ಕಾಗಿ ವಿಶ್ವವಿದ್ಯಾನಿಲಯದ ಮುಖ್ಯ ಅಧಿಕಾರಿಗಳಿಗೆ ಬಹಳ ಕೃತಜ್ಞನಾಗಿರುತ್ತೇನೆ.

ಜಿ. ಹನುಮಂತರಾವ್.

ವಿಷಯಾನುಕ್ರಮಣಿಕೆ

ಲೋಕಾಸ್ಸಮಸ್ತಾಸ್ಸುಖಿನೋಭವಂತು

ಪ್ರವೇಶ

ದೇಹದ ಒಂದೊಂದು ಅಂಗವೂ ಸರಿಯಾಗಿ ಕೆಲಸ ಮಾಡುತ್ತಿದ್ದಾಗ ದೇಹವು ಆರೋಗ್ಯವಾಗಿದೆಯೆಂದೂ, ಅದರ ಯಾವ ಒಂದು ಅಂಗವು ಸರಿಯಾಗಿ ಕೆಲಸಮಾಡದಿದ್ದರೂ ಅದಕ್ಕೆ ರೋಗಬಂದಿದೆಯೆಂದೂ ಹೇಳುವುದು ವಾಡಿಕೆಯಾಗಿದೆ. ಹಾಗೆಯೇ ಸಮಾಜದ ಯಾವ ಒಂದು ಸಂಸ್ಥೆಯ ಕೆಲಸವು ಕೆಟ್ಟುಹೋದರೂ ಅದಕ್ಕೆ ರೋಗಬಂದಿದೆಯೆಂದು ಸಮಾಜ ಶಾಸ್ತ್ರಜ್ಞರು ಹೇಳುವುದುಂಟು. ಕೂಲಿಯಿಂದ ಜೀವನ ಮಾಡು ವವರು ಕೆಲಸಮಾಡುವುದನ್ನು ನಿಲ್ಲಿಸಿದರೆ ಅಥವಾ ನಿರುದ್ಯೋಗಿ ಗಳಾದರೆ ಬಡತನವು ಬರುವುದು: ಕೋಮುಕೋಮುಗಳಿಗೆ ವೈಷಮ್ಯ ಹುಟ್ಟಿದರೆ ಸಮಾಜದ ಶಾಂತಿಭಂಗವಾಗುವುದು. ಶರೀರದಲ್ಲಿ ಹುಟ್ಟಿದ ರೋಗವು ಸಾಂಕ್ರಾಮಿಕವಾಗುವಂತೆಯೇ, ಒಂದು ಸಮಾಜದಲ್ಲಿ ಹುಟ್ಟಿದ ರೋಗವು ಇತರ ಸಮಾಜ ಗಳಿಗೂ ಹರಡಬಹುದು. ಒಬ್ಬನಿಗೆ ಪ್ಲೇಗು ಕಾಲರಗಳು ತಗಲಿ ದರೆ ಅವು ಕಾಲಕ್ರಮದಲ್ಲಿ ಊರಿಗೆಲ್ಲಾ ಹಬ್ಬುವಂತೆ, ಒಂದು ಕಡೆ ರಾಜಕೀಯ ಚಳುವಳಿ ಹುಟ್ಟಿದರೆ ಅದು ಇತರ ಕಡೆಗಳಿಗೂ ಹರಡುತ್ತದೆ. ಒಂದು ಕಡೆ ಕೂಲಿಗಾರರ ಮುಷ್ಕರ ಪ್ರಾರಂಭ ವಾದರೆ ಅದರ ಸೋಂಕು ಇತರ ಕಡೆಗಳಿಗೂ ಅಂಟುತ್ತದೆ. ಸಾವಿರಾರು ಜನರು ಸೇರಿರುವ ಗುಂಪಿನಲ್ಲಿ ಒಂದು ಕಡೆ ಆಗ್ರಹದ ಕೂಗು ಹೊರಟರೆ ವಿದ್ಯುದ್ವೇಗದಲ್ಲಿ ಅದು ಗುಂಪ ನ್ನೆಲ್ಲಾ ಆವರಿಸಿಬಿಡುತ್ತದೆ. ದೇಹದಲ್ಲಿ ಒಂದು ರೋಗ

ದಿಂದ ಮತ್ತೊಂದು ರೋಗ ಹುಟ್ಟುವಂತೆ ಸಮಾಜದಲ್ಲೂ ಒಂದು ಅವ್ಯವಸ್ಥೆಯಿಂದ ಇನ್ನೊಂದು ಅವ್ಯವಸ್ಥೆ ಹುಟ್ಟು ವುದು. ಪದೇ ಪದೇ ಮಲೇರಿಯಾ ಜ್ವರ ಬಂದು ಅದು ಕ್ಷಯಕ್ಕೆ ತಿರುಗುವಂತೆ ಸಮಾಜದಲ್ಲಿ ಬಡತನ ಕುಡುಕತನಗಳು ಹೆಚ್ಚಿದರೆ ಅವು ಕಳ್ಳತನ ಕೊಲೆಪಾತಕತನಗಳ ಕಡೆಗೆ ತಿರುಗು ವುವು. ಶರೀರದಲ್ಲಿ ಅನೇಕ ರೋಗಗಳು ಸೇರಿ ಕೊನೆಯಲ್ಲಿ ಪಾರ್ಶ್ವವಾಯು ಹುಟ್ಟುವಂತೆ, ಸಮಾಜದಲ್ಲಿ ಬಡತನ, ಕೋಮು ವಾರು ವೈಷಮ್ಯ, ಅನಕ್ಷರ ಸ್ಥಿತಿ, ರಾಜಕೀಯ ಅನಾಯಕತ್ವ ಇವೆಲ್ಲಾ ಸೇರಿ ದೇಶಾಭಿಮಾನ ಸಂಪೂರ್ಣವಾಗಿ ತೊಲಗಿ ಸಮಾಜ ಸಮಾಜಕ್ಕೇ ದಾಸತ್ವ ಪ್ರಾಪ್ತವಾಗಬಹುದು.

ಹೀಗೆ ಶರೀರಕ್ಕೂ ಸಮಾಜಕ್ಕೂ ಸಾಮ್ಯವನ್ನು ಹೇಳಿದರೂ ಅವೆರಡಕ್ಕೂ ಇರುವ ವ್ಯತ್ಯಾಸಗಳನ್ನು ಮರೆಯಬಾರದು. ಶರೀರದ ಭಾಗಗಳು ಬರಿಯ ಅಂಗಗಳು; ಅವಕ್ಕೆ ಪ್ರತ್ಯೇಕ ಜೀವನವಿಲ್ಲ; ಅವಕ್ಕೆ ಪ್ರತ್ಯೇಕವಾದ ಮನಸ್ಸಿಲ್ಲ. ಆದರೆ ಸಮಾಜದ ಭಾಗಗಳು ವ್ಯಕ್ತಿಗಳು; ಒಬ್ಬೊಬ್ಬನಿಗೂ ಬೇರೆ ಬೇರೆ ಜೀವನವಿದೆ, ಬೇರೆ ಬೇರೆ ಮನಸ್ಸಿದೆ. ಶರೀರದ ಅಂಗಗಳಿಗೆ ಸ್ವಾತಂತ್ರ್ಯವಿಲ್ಲ; ಆದರೆ ಸಮಾಜದ ಅಂಗಗಳಿಗೆ ಸ್ವಲ್ಪ ಮಟ್ಟಿ ಗಾದರೂ ಸ್ವಾತಂತ್ರ್ಯವಿದೆ. ಶರೀರದಲ್ಲಿ ಒಂದು ಅಂಗವು ಇನ್ನೊಂದು ಅಂಗದ ಕೆಲಸ ಮಾಡುವುದಕ್ಕಾಗುವುದಿಲ್ಲ; ಆದರೆ ಸಮಾಜದಲ್ಲಿ, ಸ್ವಲ್ಪ ಶ್ರಮಪಟ್ಟರೆ ಒಂದು ಕಸಬನ್ನು ಮಾಡು ತ್ತಿರುವವನು ಅದನ್ನು ಬಿಟ್ಟು ಇನ್ನೊಂದು ಕಸಬನ್ನು ಹಿಡಿಯ ಬಹುದು.

ಆದುದರಿಂದ ಶರೀರದ ಅವ್ಯವಸ್ಥೆಯನ್ನು ಸಮಾಜದ ಅವ್ಯವಸ್ಥೆಗೆ ಅಕ್ಷರಶಃ ಹೋಲಿಸಬಾರದು. ಸಮಾಜದ ವ್ಯವಸ್ಥೆ

ಕೆಟ್ಟಾಗ ಅದಕ್ಕೆ ರೋಗ ತಗುಲಿದೆ ಎಂದು ಹೇಳುವುದು ಕೇವಲ ರೂಪಕರೀತಿ ಎಂದು ಭಾವಿಸಬೇಕು. ಶರೀರವು ಒಂದು ಜೀವಿಯ ಅಂಗವ್ಯವಸ್ಥೆ, ಸಮಾಜವು ಹಲವು ಜೀವಿಗಳ ಸಂಸ್ಥೆ ಎಂಬುದನ್ನು ಮರೆಯಬಾರದು.

ಸಮಾಜದಲ್ಲಿ ಹುಟ್ಟಿದ ಪ್ರತಿಯೊಬ್ಬನೂ ಚೆನ್ನಾಗಿ ಬದುಕಿ ಬಾಳಬೇಕಾದರೆ ಅವನು ನಾಲ್ಕು ಜನರಲ್ಲಿ ಸೇರಿ ಜೀವಿಸುವುದು ಆವಶ್ಯಕ. ಶೈಶವದಲ್ಲಿ ತಾಯಿತಂದೆಗಳೊಡನೆ ಅಕ್ಕತಂಗಿಯರೊಡನೆ, ಬಾಲ್ಯದಲ್ಲಿ ನೆರೆಹೊರೆಯ ಹುಡುಗರೊಡನೆ ಪಾಠಶಾಲೆಯ ಸಹಪಾಠಿಗಳೊಡನೆ, ಪ್ರಾಯದಲ್ಲಿ ಹೆಂಡತಿ ಮಕ್ಕಳೊಡನೆ ತನ್ನ ಕಸಬಿನವರೊಡನೆ ತನ್ನ ಹಳ್ಳಿಯವರೊಡನೆ ಕಲೆತು ಅವರೊಂದಿಗೆ ಹೊಂದಿಕೊಂಡು ಹೋಗುವುದನ್ನು ಕಲಿಯಬೇಕು. ನಾವು ಇತರರೊಡನೆ ಹೊಂದಿಕೊಂಡು ಹೋಗುವುದನ್ನು ಕಲಿತ ಮಾತ್ರಕ್ಕೆ ನಮ್ಮ ಪುರುಷಾರ್ಥ ಸಿದ್ಧಿಯಾಗುವುದಿಲ್ಲ. ನಮ್ಮ ಜೀವನವು ಉತ್ತಮಗೊಳ್ಳಬೇಕಾದರೆ ಯೋಗ್ಯವಾದ ಸಮಾಜ ಸಂಸ್ಥೆಗಳೂ ಇರಬೇಕು; ವಿದ್ಯಾಭ್ಯಾಸಕ್ಕಾಗಿ ಒಳ್ಳೆಯ ಪಾಠಶಾಲೆಗಳಿರಬೇಕು; ಜೀವನೋಪಾಯಸಾಧನೆಗೆ ಸರಿಯಾದ ಔದ್ಯೋಗಿಕ ಶ್ರೇಣಿಗಳಿರಬೇಕು; ಮನೆ, ಮಠ, ದೇವಾಲಯ ಕ್ರೀಡಾವಿನೋದ ವಸತಿಗಳನ್ನು ಸರಿಯಾಗಿ ವ್ಯವಸ್ಥೆಗೊಳಿಸುವ ಪಂಚಾಯಿತಿಗಳು, ಮುನಿಸಿಪಾಲಿಟಿಗಳು ಇರಬೇಕು; ನಮ್ಮ ಹಕ್ಕುಬಾಧ್ಯತೆಗಳನ್ನು ಕಾಪಾಡುವ ಸರ್ಕಾರವಿರಬೇಕು. ಸಮಾಜ ಸಂಸ್ಥೆಗಳು ನಮ್ಮ ಅಭ್ಯುದಯಕ್ಕಾಗಿ ಕೆಲಸಮಾಡುವಂತೆಯೇ, ನಾವು ಕೂಡ ಸಮಾಜ ಸಂಸ್ಥೆಗಳಲ್ಲಿ ಸೇರಿ ಅವುಗಳ ಕೆಲಸವನ್ನು ನಡಸಬೇಕು. ಇವುಗಳಲ್ಲಿ ಯಾವು

ದೊಂದು ಲೋಪವಾದರೂ ಸಮಾಜಸ್ಥಿತಿಯು ಹದಕೆಟ್ಟು ರೋಗರುಜಿನಗಳಿಗೆ ಒಳಗಾಗುವುದು.

ಸಮಾಜದಲ್ಲಿ ಅವ್ಯವಸ್ಥೆ ಹುಟ್ಟಬೇಕಾದರೆ ಮುಖ್ಯವಾಗಿ ಎರಡು ವಿಧವಾದ ಕಾರಣಗಳುಂಟು: (೧) ಮಾನಸಿಕ, (೨) ಸಾಮಾಜಿಕ.

(೧) ಹುಟ್ಟುವವರೆಲ್ಲರಿಗೂ ಬುದ್ಧಿಶಕ್ತಿ ಒಂದೇ ಸಮನಾಗಿರುವುದಿಲ್ಲ. ಕೆಲವರಿಗೆ ಬುದ್ಧಿ ಚುರುಕಾಗಿರುತ್ತದೆ. ಇನ್ನು ಕೆಲವರಿಗೆ ಮಂದವಾಗಿರುತ್ತದೆ. ಬುದ್ಧಿ ಚುರುಕಾಗಿರುವವರು ಎಷ್ಟು ತೊಡಕಾದ ಸನ್ನಿವೇಶದಲ್ಲಿ ಸಿಕ್ಕಿದರೂ ಸುಲಭವಾಗಿ ಬಚಾಯಿಸಿಕೊಳ್ಳುತ್ತಾರೆ. ಆದರೆ ಬುದ್ಧಿಮಾಂದ್ಯವುಳ್ಳವರು ತಾವಿರುವ ಸನ್ನಿವೇಶದಲ್ಲಿ ಸ್ವಲ್ಪ ಬದಲಾವಣೆಯಾದರೂ ಒದುಕಿ ಬಾಳುವುದು ದುಸ್ತರವಾಗುವುದು. ಸರಳವಾದ ಹಳ್ಳಿಯ ಸನ್ನಿವೇಶದಲ್ಲಿ, ಬೇಸಾಯದ ಜೀವನದ ಆವರಣದಲ್ಲಿ, ಬುದ್ಧಿ ಮಂಕಾಗಿದ್ದರೂ ಜೀವನಮಾಡುವುದು ಸುಲಭ. ಆದರೆ ಅವನಿರುವ ಸನ್ನಿವೇಶ ಬದಲಾಯಿಸಿದರೆ, ಹಳ್ಳಿ ಪಟ್ಟಣವಾದರೆ, ಕೃಷಿಯ ಸನ್ನಿವೇಶ ಹೋಗಿ ಕಾರ್ಖಾನೆಗಳ ಸನ್ನಿವೇಶ ಬಂದರೆ, ಅವನಿಗೆ ಬಹಳ ಮುಗ್ಗಟ್ಟುಂಟಾಗುವುದು. ಮೂಢನಂಬಿಕೆಯಿಂದ ಜೀವಿಸುತ್ತಿರುವವನನ್ನು ವಿಚಾರ ಜೀವನದ ಸನ್ನಿವೇಶಕ್ಕೆಳೆದರೆ, ಅವನ ಮನಸ್ಸು ಅಲ್ಲೋಲಕಲ್ಲೋಲವಾಗಿ ಅವನಿಗೆ ದಿಕ್ಕುತೋಚದಂತಾಗುವುದು. ಮತದ ಮತ್ತು ರಾಜಕೀಯದ ಕಟ್ಟುಕಾಯಿದೆಗಳನ್ನು ಭಯಭಕ್ತಿಯಿಂದ ಆಚರಿಸುತ್ತಿದ್ದವನಿಗೆ ವಿಮರ್ಶೆ ಮಾಡಿ ಜೀವಿಸುವ ಅಧಿಕಾರವನ್ನು ತಟಕ್ಕನೆ ಕೊಟ್ಟರೆ, ಅವನು ಯಾವುದನ್ನೂ ನಂಬುವುದಿಲ್ಲ; ಯಾವ ಕಟ್ಟಿಗೂ ಸಿಕ್ಕುವುದಿಲ್ಲ; ಕ್ರಾಂತಿಕಾರನಾಗುತ್ತಾನೆ.

(೨) ಸಮಾಜದ ಸಂಸ್ಥೆಗಳಲ್ಲಿ ಆಗುವ ಬದಲಾವಣೆಗಳು ಮಾನಸಿಕ ಕಾರಣಗಳಿಗಿಂತಲೂ ಹೆಚ್ಚು ಪ್ರಮಾದಕರವಾದುವು. ಪದಾರ್ಥಗಳನ್ನು ಅದಲು ಬದಲು ಮಾಡಿ ಕೊಟ್ಟು ಕೊಳ್ಳುವ ಸಮಾಜದಲ್ಲಿ ಇದ್ದಕ್ಕಿದ್ದ ಹಾಗೆ ಬ್ಯಾಂಕುಗಳೂ ಬಂಡವಾಳ ಗಾರರೂ ಬಂದು ಬಿಟ್ಟರೆ, ಆಧುನಿಕ ಆರ್ಥಿಕ ಜೀವನದ ರೀತಿ ನೀತಿಯನ್ನು ತಿಳಿಯದ ಹಳ್ಳಿಯವರು ಬಹಳ ನಷ್ಟಕ್ಕೆ ಗುರಿ ಯಾಗುವರು. ನಮ್ಮ ದೇಶದಲ್ಲಿ ಮೊದಮೊದಲು ಸರ್ಕಾರದ ಸಾಲದ ಬಾಂಡುಗಳನ್ನು ಹಳ್ಳಿಹಳ್ಳಿಗಳಲ್ಲೂ ಹಂಚಿದಾಗ ಅವು ಗಳನ್ನಿಟ್ಟುಕೊಂಡು ಏನು ಮಾಡಬೇಕೆಂದು ತಿಳಿಯದೆ ಜನರು ಆರಕ್ಕೆ ಮೂರಾಗಿ ಮಾರಿಬಿಟ್ಟರು. ಕಸಬುದಾರರ ಪೋಷಣೆ ಯಲ್ಲೂ ರಾಜರ ಆಶ್ರಯದಲ್ಲೂ ಕೈಗಾರಿಕೆ ಕೆಲಸಗಳನ್ನು ಮಾಡುತ್ತಿರುವ ಸಮಾಜದಲ್ಲಿ ಕಟ್ಟುಕಡಿವಾಣವಿಲ್ಲದ ಪೈಪೋಟಿ ಸಂಸ್ಥೆಗಳು ಹುಟ್ಟಿದರೆ ಮನೆಯ ಕೈಗಾರಿಕೆಗಳು ಸ್ವಲ್ಪ ಕಾಲದಲ್ಲೇ ಹಾಳಾಗಿ ಅನೇಕರಿಗೆ ಜೀವನೋಪಾಯವಿಲ್ಲ ದಂತಾಗುವುದು. ಪೇಟೆಗೆ ಬಂದ ದವಸಧಾನ್ಯಗಳೆಲ್ಲವೂ ಒಬ್ಬಿ ಬ್ಬರು ಬಂಡವಾಳಗಾರರ ಕೈ ಸೇರಿದರೆ ಅವರು ತಮ್ಮ ಮನ ಸ್ಸಿಗೆ ಬಂದಹಾಗೆ ಧಾರಣೆಗಳನ್ನು ಏರಿಸಿ ವಿಶೇಷವಾಗಿ ಲಾಭ ಪಡೆಯಲು ಅವಕಾಶವಾಗುತ್ತದೆ. ಒಂದು ಕಡೆ ಲಕ್ಷಾಂತರ ಜನ ರಿಗೆ ಹೊಟ್ಟೆಗಿಲ್ಲದಿರುವಾಗ, ಇನ್ನೊಂದು ಕಡೆ ಧಾರಣೆವಾಸಿಗಳು ಬಿದ್ದು ಹೋಗಿ ಲಾಭ ಕಡಮೆಯಾಗುತ್ತದೆಂಬ ದುರುದ್ದೇಶದಿಂದ ಸಾವಿರಾರು ಎಕರೆ ಗೋಧಿಯ ಬೆಳೆಯನ್ನು ಕುಯ್ಯದೆ ಸುಟ್ಟು ಹಾಕುತ್ತಾರೆ. ಮೂರು ದುಡ್ಡಿಗೊಂದು ಸೀಸೆ ಸೀಮೆ ಎಣ್ಣೆ ಯನ್ನು ಮಾರಿ ಲಾಭ ಪಡೆಯುವುದಾದರೂ ಧನಪಿಶಾಚಿ ಹಿಡಿ ದಿರುವ ಬಂಡವಾಳಗಾರರು ಆರು ದುಡ್ಡಿಗೊಂದು ಸೀಸೆಯನ್ನು

ಮಾರುತ್ತಿರುವರು. ಒಂದೆರಡು ಆಣೆಯ ಖರ್ಚಿನಲ್ಲಿ ತಯಾರಾಗುವ ಔಷಧದ ಮೇಲೆ ಜಾಹಿರಾತುಗಳಿಗಾಗಿ ಮೂರು ನಾಲ್ಕು ಆಣೆಗಳನ್ನು ವೆಚ್ಚಮಾಡಿ ಮಾರುವವನಿಗೆ ಎಂಟು ಆಣೆಗಳ ದಳ್ಳಾಳಿ ಕೊಟ್ಟು ಎರಡು ರೂಪಾಯಿಗಳ ಬೆಲೆಗೆ ಮಾರಿ ಒಂದೂಕಾಲು ರೂಪಾಯಿ ನಫೆ ಪಡೆಯುವವರು ಬೇಕಾದಷ್ಟು ಬಂಡವಾಳಗಾರರಿದ್ದಾರೆ. ಹೀಗೆ ಕೆಲವರಿಗೆ ತಾವು ನವಕೋಟಿ ನಾರಾಯಣರಾಗಬೇಕೆಂದು ದುರಾಶೆ ಹುಟ್ಟುವುದರಿಂದ ದೇಶದಲ್ಲೆಲ್ಲಾ ದರಿದ್ರನಾರಾಯಣರು ತುಂಬಿಹೋಗಿದ್ದಾರೆ. ನಮ್ಮ ದೇಶದ ಧಾರ್ಮಿಕ ಮತ್ತು ರಾಜಕೀಯ ಸಂಸ್ಥೆಗಳಿಗೆ ಬಂಡವಾಳಗಾರರ ಹಾವಳಿಯನ್ನು ತಡೆಯುವ ಶಕ್ತಿ ಇದ್ದಿದ್ದರೆ ಈ ಆರ್ಥಿಕ ದುಸ್ಥಿತಿಯನ್ನು ತಪ್ಪಿಸಬಹುದಾಗಿತ್ತು. ಆದರೆ ನಮ್ಮ ದೇಶದ ಧಾರ್ಮಿಕ ಮತ್ತು ರಾಜಕೀಯ ಸಂಸ್ಥೆಗಳು ಬಂಡವಾಳಗಾರರನ್ನು ತಮ್ಮ ಹತೋಟಿಯಲ್ಲಿಟ್ಟುಕೊಳ್ಳುವುದರ ಬದಲು ತಾವೇ ಅವರ ಬಲೆಯಲ್ಲಿ ಬಿದ್ದಿವೆ. ಹೀಗೆ ಸರ್ಕಾರದ ಬಲವು ತಪ್ಪಿರುವುದರಿಂದ ಕೆಲವರಿಗೆ ಅದರಲ್ಲಿ ಗೌರವ ತಪ್ಪಿದೆ, ಇನ್ನು ಕೆಲವರಿಗೆ ಅದರ ವಿಚಾರವಾಗಿ ತೀಕ್ಷ್ಣವಾದ ವಿರೋಧ ಹುಟ್ಟಿದೆ. ಇಂಥವರು ಕಾನೂನಿನ ಮೂಲಕ ಬಂಡವಾಳಗಾರನನ್ನು ಹದ್ದುಬಸ್ತಿನಲ್ಲಿಡುವ ಮಾರ್ಗವನ್ನು ಬಿಟ್ಟು ತಾವೇ ನೇರವಾಗಿ ಬಂಡವಾಳಗಾರರನ್ನು ಬುಡಮುಟ್ಟ ನಾಶಮಾಡಬೇಕೆಂಬ ನೀತಿಯನ್ನು ಬೋಧಿಸುತ್ತಿರುವರು.

ಹೀಗೆ ಸಮಾಜದ ವ್ಯವಸ್ಥೆಯು ಅನೇಕ ರೀತಿಯಲ್ಲಿ ಕೆಟ್ಟಿರುವುದರಿಂದ ಸಮಾಜದಲ್ಲಿ ಅನೇಕ ರೋಗರುಜಿನಗಳು ಹುಟ್ಟಿವೆ. ಇವುಗಳಲ್ಲಿ ಬಡತನ, ದಿವಾಳಿತನ, ದೌರ್ಜನ್ಯ, ವ್ಯಭಿಚಾರ, ದಾಂಪತ್ಯವಿಚ್ಛೇದನ, ಅನಕ್ಷರತೆ, ಅಜ್ಞಾನ, ಆರ್ಥಿಕಮುಗ್ಗಟ್ಟು,

ನಿರುದ್ಯೋಗ, ಹಳ್ಳಿಗಳ ಕ್ಷೀಣದಶೆ, ರಾಜಕೀಯ ಅವ್ಯವಸ್ಥೆ, ಅಂತರರಾಷ್ಟ್ರೀಯ ಅವ್ಯವಸ್ಥೆ, ಕೋಮುವಾರು ವೈಷಮ್ಯ, ಬುಡಕಟ್ಟುಗಳ ವಿರೋಧ, ಮಿತಿಮೀರಿದ ಜನಸಂಖ್ಯೆ, ಅಕಾಲ ಮರಣ—ಇವು ಮುಖ್ಯವಾದುವು. ಈ ಜಾಡ್ಯಗಳು ಒಂದ ಕ್ಕೊಂದು ಹೆಣೆದುಕೊಂಡು ಇವೆ; ಒಂದಕ್ಕೂ ಇನ್ನೊಂದಕ್ಕೂ ಪರಸ್ಪರ ಕಾರ್ಯಕಾರಣ ಸಂಬಂಧವಿದೆ; ಇವು ಒಂದು ಕಡೆ ಯಿಂದ ನೋಡಿದಾಗ ಕಾರಣಗಳಾಗಿ ಕಾಣುವುವು, ಇನ್ನೊಂದು ಕಡೆಯಿಂದ ನೋಡಿದರೆ ಕಾರ್ಯಗಳಾಗಿ ಕಾಣುವುವು; ಅನಕ್ಷರತೆಗೆ ಬಡತನ ಕಾರಣ, ಬಡತನಕ್ಕೆ ಅನಕ್ಷರತೆ ಕಾರಣ; ಕಳ್ಳತನಕ್ಕೆ ಬಡತನ ಕಾರಣ, ಬಡತನಕ್ಕೆ ಕಳ್ಳತನ ಕಾರಣ. ಆದುದರಿಂದ ಒಂದನ್ನು ಬಿಟ್ಟು ಇನ್ನೊಂದರ ಪರಿಹಾರವನ್ನು ಕೈಕೊಳ್ಳಲು ಸಾಧ್ಯವಿಲ್ಲ, ನಮ್ಮ ಸಮಾಜದ ಕುಂದುಕೊರತೆಗಳೆಲ್ಲವನ್ನೂ ವಿವರಿಸಿ, ಅವುಗಳ ಕಾರಣಗಳನ್ನೂ ಪರಿಹಾರೋಪಾಯಗಳನ್ನೂ ತಿಳಿಸುವುದು ಆವಶ್ಯಕವಾಗಿ ಮಾಡಬೇಕಾದ ಕೆಲಸ. ಆದರೆ ಅದು ಬಹು ದೊಡ್ಡ ಕೆಲಸ. ನಮಗಿರುವಷ್ಟು ಸ್ವಲ್ಪ ಅವಕಾಶದಲ್ಲಿ ಅಷ್ಟು ದೊಡ್ಡ ಕೆಲಸ ವನ್ನು ಕೈಕೊಳ್ಳುವುದು ಅಸಾಧ್ಯ. ಆದುದರಿಂದ ಬಡತನ, ದೌರ್ಜನ್ಯ, ಕುಡುಕುತನ, ವ್ಯಭಿಚಾರ ಇವನ್ನು ಮಾತ್ರ ಸಂಗ್ರಹ ವಾಗಿ ವಿಮರ್ಶಿಸಲು ಇಲ್ಲಿ ಯತ್ನಿಸಿದೆ.

ಅಧ್ಯಾಯ ೧

ಬಡತನ

ಬಡತನವೆಂದರೆ ಏನು ಎಂಬ ಪ್ರಶ್ನೆಗೆ ಒಂದೊಂದು ದೇಶದವರು ಒಂದೊಂದು ವಿಧವಾದ ಉತ್ತರಕೊಡುತ್ತಾರೆ. ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಕುಟುಂಬ ಒಂದರ ವಾರ್ಷಿಕ ವರಮಾನವು ೨,೩೦೦ ಡಾಲರುಗಳಿಗಿಂತ ಎಂದರೆ ಸುಮಾರು ೬,೯೦೦ ರೂಪಾಯಿಗಳಿಗಿಂತ ಕಡಮೆಯಾಗಿದ್ದರೆ ಬಡತನ;[1] ನಮ್ಮ ದೇಶದಲ್ಲಿ ೨೨೦ ರೂಪಾಯಿಗಳಿಗಿಂತ ಕಡಮೆಯಾದರೆ ಬಡತನ.[2] ಇದರಂತೆ ಲೆಕ್ಕಮಾಡಿದರೆ ನಮ್ಮ ದೇಶದಲ್ಲಿ ಶೇಕಡ ೩೫ ಮಂದಿ ಬಡವರಿರುತ್ತಾರೆ. ಇದರಿಂದ ನಮ್ಮ ದೇಶದ ಬಡತನ ಎಷ್ಟು ಘೋರತರವಾದುದೆಂದು ತಿಳಿಯಬರುವುದು. ನಮ್ಮ ದೇಶದಲ್ಲಿ ತಲೆಗೆ ೫೫ ರೂಪಾಯಿ ವರಮಾನ, ಸಂಯುಕ್ತ ಸಂಸ್ಥಾನದಲ್ಲಿ ತಲೆಗೆ ೧,೨೦೦ ರೂಪಾಯಿಗಳು.[3] ನಮ್ಮ ದೇಶದ

---

[1] * King : *Wealth and Income of the People of the United States*, p. 80.

[2] Jathar and Beri : *Indian Economics*, Vol II, p. 162. ಈ ಅಂಕೆಗಳು ವಿವಾದಾಸ್ಪದವಾದುವು ; ಬಡವರು ಶೇಕಡ ೭೦ ರಷ್ಟು ಇರುವರು ಎಂದು ಅಭಿಪ್ರಾಯಪಡುವರೂ ಇದ್ದಾರೆ.

[3] ನಮ್ಮ ದೇಶದಲ್ಲಿ ತಲೆಗೆಷ್ಟು ವರಮಾನ ಎಂಬ ವಿಚಾರವಾಗಿ ತುಂಬ ಭಿನ್ನಾಭಿಪ್ರಾಯಗಳಿವೆ. ಷಾ ಮತ್ತು ಖಂಬಟ್ಟ ಎಂಬವರ ಪ್ರಕಾರ ಅದು ರೂ. ೬೭, ಷಿರಾಸ್‌ನ ಪ್ರಕಾರ ರೂ. ೧೦೭, ಸರ್ ಎಂ ವಿಶ್ವೇಶ್ವರಯ್ಯನವರ ಪ್ರಕಾರ ಸಾಮಾನ್ಯವಾಗಿ ರೂ. ೮೨, ಆದರೆ ಈಗಿನ ಮುಗ್ಗಟ್ಟಿನ ಸ್ಥಿತಿಯಲ್ಲಿ

ಒಬ್ಬನ ವರಮಾನದಿಂದ ಅಮೆರಿಕ ದೇಶದಲ್ಲಿ ಒಂದು ನಾಯಿಯನ್ನು ಕೂಡ ಸಾಕುವುದಕ್ಕೆ ಆಗುವುದಿಲ್ಲ. ದೇಶದ ಸಂಪತ್ತು ಕೂಡ ಜನರಲ್ಲಿ ಸರಿಯಾಗಿ ಹಂಚಿಕೆಯಾಗಿಲ್ಲ. ಅದರಲ್ಲಿ ಮೂರರಲ್ಲೊಂದು ಪಾಲಿಗಿಂತ ಹೆಚ್ಚಾಗಿ ಶೇಕಡ ೫ ಜನರ ಕೈಯಲ್ಲೂ ಮತ್ತೆ ಮೂರರಲ್ಲೊಂದು ಪಾಲಿಗಿಂತ ಹೆಚ್ಚಾಗಿ ಶೇಕಡ ೩೫ ಜನರ ಕೈಯಲ್ಲೂ, ಉಳಿದದ್ದು ಎಂದರೆ ಮೂರರಲ್ಲೊಂದು ಪಾಲಿಗಿಂತ ಕಡಮೆಯಾಗಿ ಶೇಕಡ ೬೦ ಜನರ ಕೈಯಲ್ಲೂ ಇದೆ.[4] ಇಂಥ ಬಡತನದಿಂದ ತುಂಬಿದ ಸಮಾಜದಲ್ಲಿ ಕುಟುಂಬ ಜೀವನದ ಸುಖವೆಲ್ಲಿಬಂತು? ನಮಗೂ ನಮ್ಮ ಮಕ್ಕಳಿಗೂ ಸ್ವಾತಂತ್ರ್ಯ ಹೇಗೆ ತಾನೆ ಲಭಿಸೀತು? ಜನರು ದೃಢಕಾಯರೂ ವಿದ್ಯಾವಂತರೂ ಒಳ್ಳೆಯ ಸಮಾಜ ಜೀವಿಗಳೂ ದೇಶಾಭಿಮಾನಿಗಳೂ ಹೇಗೆ ಆದಾರು?

ನಮ್ಮ ಈ ಬಡತನಕ್ಕೆ ಏನುಕಾರಣ? ಇದಕ್ಕೆ ಉತ್ತರವಾಗಿ ಸರ್ಕಾರ, ಸರ್ಕಾರ ಎಂದು ಸಹಸ್ರನಾಮ ಮಾಡಿದರೆ ಆಗದು. ಅದು ನಮ್ಮ ದೇಶಾಭಿಮಾನ ದೃಷ್ಟಿಯಿಂದಲೇನೋ ಸರಿಯಾದ ಉತ್ತರವಾಗಿ ಕಾಣಿಸಬಹುದು. ಆದರೆ ಶಾಸ್ತ್ರರೀತಿಯಾಗಿ ಕೊಡತಕ್ಕ ಉತ್ತರ ಇಷ್ಟಕ್ಕೇ ಮುಗಿಯುವುದಿಲ್ಲ: ಶಾಸ್ತ್ರಜ್ಞರಿಗೆ ಬಡತನವು ಬಹಳ ತೊಡಕಾದ ವಿಷಯವಾಗಿ ಕಾಣುವುದು;

ರೂ. ೫೫. ಆದುದರಿಂದ ಇಲ್ಲಿ ರೂ. ೫೫ ನ್ನು ವರಮಾನವಾಗಿ ತೆಗೆದುಕೊಂಡಿದೆ. (Ibid, pp. 155–157.) ಸಂಯುಕ್ತ ಸಂಸ್ಥಾನದಲ್ಲಿ ತಲೆಯ ವರಮಾನವು ೮೯ ಪೌಂಡುಗಳು ಅಥವಾ ರೂ. ೧,೨೦೦, ಇಂಗ್ಲೆಂಡಿನಲ್ಲಿ ಪೌಂ. ೭೬. ಅಥವಾ ರೂ. ೧,೦೦೦, ಆಸ್ಟ್ರೇಲಿಯದಲ್ಲಿ ಪೌ. ೯೮ ಅಥವಾ ರೂ. ೧,೨೭೦. (Ibid, p. 162.)

[4] Ibid, p. 160.

ಅದಕ್ಕೆ ಅವರು ನಿರ್ದಿಷ್ಟವಾದ ಕಾರಣ ಒಂದೇ ಎಂದು ಹೇಳುವುದಕ್ಕಾಗುವುದಿಲ್ಲ. ಅದಕ್ಕೆ ಅನೇಕ ಸನ್ನಿವೇಶಗಳೂ ಸಂದರ್ಭಗಳೂ ಕಾರಣವಾಗಿವೆ. ಕೆಲವು ಅದಕ್ಕೆ ನೇರವಾಗಿ ಸಂಬಂಧಿಸುವುವು, ಇನ್ನು ಕೆಲವು ದೂರವಾದ ಸಂಬಂಧವುಳ್ಳವು.

ನೇರವಾದ ಕಾರಣಗಳು

೧. **ವ್ಯಕ್ತಿತ್ವದ ನ್ಯೂನತೆ**—ನೇರವಾಗಿ ಸಂಬಂಧಪಡುವ ಕಾರಣಗಳಲ್ಲಿ ವ್ಯಕ್ತಿತ್ವದ ನ್ಯೂನತೆ ಒಂದು ಪ್ರಬಲವಾದ ಕಾರಣ. ನಮ್ಮ ದೇಶದ ಬಡವರಲ್ಲಿ ಬಹುಮಂದಿ ಬುದ್ಧಿ ಮಾಂದ್ಯವುಳ್ಳವರು, ಅವಿದ್ಯಾವಂತರು ಅಥವಾ ಸೋಮಾರಿಗಳು; ಇನ್ನು ಕೆಲವರು ಹೆಳವರು, ಕುಂಟರು ಅಥವಾ ಕುರುಡರು. ಬುದ್ಧಿ ಇರುವವರಿಗೆ ಕೂಡ ಸ್ವಾವಲಂಬನೆ ಆತ್ಮಗೌರವಗಳು ಸಾಲವು; ವಿಚಾರಪರತೆ ಕಾರ್ಯಪಟುತ್ವಗಳಿಗಿಂತಲೂ ಮೂಢ ಭಕ್ತಿ ಬೂಟಾಟಿಕೆಗಳಿಗೆ ಪ್ರಾಶಸ್ತ್ಯ ಹೆಚ್ಚು.

೨. **ಅನಾರೋಗ್ಯ**—ಸಂಯುಕ್ತ ಸಂಸ್ಥಾನಗಳಲ್ಲಿ ಪ್ರತಿಯೊಬ್ಬನೂ ಖಾಯಿಲೆಯ ಸಲುವಾಗಿ ವರ್ಷವೊಂದಕ್ಕೆ ಹದಿಮೂರು ದಿವಸಗಳು ಕೆಲಸಮಾಡುವುದಕ್ಕಾಗುವುದಿಲ್ಲವೆಂದು ಫಿಶರ್ ಎನ್ನುವ ಸಮಾಜಶಾಸ್ತ್ರಜ್ಞನು ನಿರ್ಧರಿಸಿರುವನು. ನಮ್ಮ ದೇಶದಲ್ಲಿ ಖಾಯಿಲೆಯಿಂದ ಜನರು ಎಷ್ಟು ದಿವಸ ಕೆಲಸ ನಿಲ್ಲಿಸುತ್ತಾರೆ ಎಂಬುದನ್ನು ಯಾರೂ ನಿರ್ಧರಿಸಲು ಪ್ರಯತ್ನ ಮಾಡಿಲ್ಲ. ಆದುದರಿಂದ ಇದರ ವಿಚಾರವಾಗಿ ಅಂಕೆಗಳ ರುಜುವಾತಿಲ್ಲದೆ ಮಾತನಾಡಬೇಕಾಗಿದೆ.

ನಮ್ಮ ದೇಶದಲ್ಲಿ ಮಲೇರಿಯಾ ಜ್ವರದಿಂದ ಸರಳುತ್ತಿರುವಷ್ಟು ಜನ ಇನ್ನು ಯಾವ ದೇಶದಲ್ಲೂ ಸರಳುತ್ತಿಲ್ಲ. ಇಂಡಿಯಾ ಸರ್ಕಾ

ರದ ಆರೋಗ್ಯಶಾಖೆಯ ಕಮಿಷನರ ವರದಿಯ ಪ್ರಕಾರ ೧೯೩೩ ರಲ್ಲಿ ಒಂದು ಕೋಟಿ ಇಪ್ಪತ್ತೈದು ಲಕ್ಷ ಮಲೇರಿಯಾ ರೋಗಿಗಳಿಗೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನಡೆದಿದೆಯೆಂದು ಗೊತ್ತಾಗುವುದು.[1] ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯದವರ ಸಂಖ್ಯೆ ಇನ್ನೆಷ್ಟಿದೆಯೋ. ಎಲ್ಲಿ ಭೂಮಿ ಫಲವತ್ತಾಗಿದೆಯೋ, ಎಲ್ಲಿ ಕೃಷಿಗೆ ನೀರಿನ ವಸತಿ ಚೆನ್ನಾಗಿದೆಯೋ, ಎಲ್ಲಿ ಜನರು ದುಡಿದು ಹೆಚ್ಚು ಪ್ರತಿಫಲ ಪಡೆಯಬಹುದೋ, ಅಲ್ಲೇ ಮಲೇರಿಯಾ ಜ್ವರದ ಹಾವಳಿ ಹೆಚ್ಚು. ಯಾವ ಕಾಲದಲ್ಲಿ ರೈತನು ಹೆಚ್ಚಾಗಿ ಕೆಲಸಮಾಡಬೇಕೋ ಆ ಕಾಲದಲ್ಲೇ ಮಲೇರಿಯಾ ಜ್ವರವೂ ಹೆಚ್ಚುವುದು. ಪಟ್ಟಣಗಳಲ್ಲೂ ಹಾಗೆಯೇ. ಎಲ್ಲಿ ಕೂಲಿಗಾರರು ವಾಸಮಾಡುತ್ತಾರೋ ಅಲ್ಲಿ ಬಚ್ಚಲು ನೀರು ನಿಲ್ಲುವುದೂ ಹೆಚ್ಚು, ಕಶ್ಮಲ ಸೇರುವುದೂ ಹೆಚ್ಚು, ಖಾಯಿಲೆಗಳು ಹುಟ್ಟುವುದೂ ಹೆಚ್ಚು. ಈ ರೋಗದ ಹಾವಳಿ ಹಿಂದಿನ ಕಾಲಕ್ಕಿಂತಲೂ ಈಗ ಹೆಚ್ಚಾಗಿದೆ. ಬಂಗಾಳಾದಲ್ಲಿ ಇದಕ್ಕೆ ನವೀನ ನಾಲಾ ಪದ್ಧತಿಯೇ ಕಾರಣವೆಂದು ಅರ್ಥಶಾಸ್ತ್ರಜ್ಞರೂ ವೈದ್ಯರೂ ಆದ ಪಿಯರ್ಸನ್ ಎಂಬವರು ಬಹು ಚೆನ್ನಾಗಿ ವಿಶದಪಡಿಸಿದ್ದಾರೆ.[2] ಈಚೆಗೆ ನಮ್ಮ ದೇಶದಲ್ಲಿ ದೊಡ್ಡ ಅಣೆಕಟ್ಟುಗಳನ್ನು ಕಟ್ಟಿ ವಿಶಾಲವಾದ ಜಲಾಶಯಗಳನ್ನು ಏರ್ಪಡಿಸಿದ ಮೇಲಂತೂ ಮಲೇರಿಯಾ ಬಹಳ ಹೆಚ್ಚಿದೆ. ಈ ಜಲಾಶಯಗಳನ್ನು ಏರ್ಪಡಿಸುವಾಗಲೇ ಅವುಗಳ ನೀರನ್ನು ಉಪಯೋಗಿಸುವ ಪ್ರದೇಶಗಳನ್ನೂ ಪಾಕುಮಾಡಿ ಸರಿಯಾದ ಸ್ಥಳಗಳಲ್ಲಿ ಹಳ್ಳಿಗಳನ್ನು ರಚಿಸಿದ್ದರೆ ಆ ಜಲಾಶಯಗಳಿಂದ

---

[1] *The Indian Year Book* (1936–37), p. 538.

[2] S. Vere Pearson: *The Growth and Distribution of Population*, p. 99.

ನಮ್ಮ ದೇಶದ ಐಶ್ವರ್ಯವು ಬಹುಮಟ್ಟಿಗೆ ಹೆಚ್ಚುತ್ತಿತ್ತು. ಹಾಗೆ ಮಾಡದಿರುವುದರಿಂದ ದೊಡ್ಡ ಜಲಾಶಯಗಳ ಕೆಳಗೆ ಇರುವ ಜಮೀನುಗಳಿಗೆ ರೈತಾಬಾದೆಯೇ ಇಲ್ಲದೆ ಸರ್ಕಾರಕ್ಕೂ ಜಮೀನ್ದಾರರಿಗೂ ವಿಶೇಷವಾಗಿ ನಷ್ಟವಾಗುತ್ತಿದೆ. ಜಲಾಶಯಗಳನ್ನು ಏರ್ಪಡಿಸಿದ ಸರ್ಕಾರಗಳು ಈ ವಿಚಾರವಾಗಿ ಮುಂದಾಲೋಚನೆ ಮಾಡದಿದ್ದುದು ಈ ಸಂಕಟಕರವಾದ ಸನ್ನಿವೇಶಕ್ಕೆ ಮುಖ್ಯಕಾರಣ.

೩. **ಕುಡಿತ, ವ್ಯಭಿಚಾರ**—ಕುಡಿತ ವ್ಯಭಿಚಾರಗಳೂ ಅನೇಕ ವೇಳೆ ಜನರನ್ನು ಬಡತನಕ್ಕೆ ಇಳಿಸುತ್ತವೆ. ಕುಡುಕರಿಗೂ ವ್ಯಭಿಚಾರಿಗಳಿಗೂ ಮಿತವ್ಯಯವೆಂದರೇನು ಎಂಬುದನ್ನು ಯೋಚಿಸುವುದಕ್ಕೆ ಕೂಡ ಸಾಧ್ಯವಿಲ್ಲ. ತಮಗೆ ಬಂದ ಆದಾಯದಲ್ಲಿ ಅರ್ಧ ಪಾಲನ್ನು, ಕೆಲವು ವೇಳೆ ಮುಕ್ಕಾಲು ಪಾಲನ್ನು ಕುಡಿತ ವ್ಯಭಿಚಾರಗಳಿಗೆ ಹಾಕುತ್ತಾರೆ. ಸಂಪಾದಿಸಿದ ದುಡ್ಡು ಕೈಹತ್ತದೆ, ಮೈಹತ್ತದೆ ಇರುವುದೊಂದೇ ಅಲ್ಲ ಇವುಗಳ ದುಷ್ಪರಿಣಾಮ; ಕುಡುಕತನದಿಂದ ಚಿತ್ತಸ್ಥೈರ್ಯ ಹೋಗಿಬಿಡುವುದು; ತನ್ನ ಮೇಲೆ ತನಗಿರಬಹುದಾದ ಹತೋಟಿ ತಪ್ಪುವುದು; ಅಕೃತ್ಯಗಳ ಕಡೆಗೆ ಮನಸ್ಸು ಜಾರುವುದು. ವ್ಯಭಿಚಾರದಿಂದ ವ್ಯಕ್ತಿಯ ಕುಟುಂಬಜೀವನವು ಹದಗೆಡುವುದು; ಸಮಾಜದಲ್ಲಿ ಅವನಿಗೆ ಗೌರವಹೋಗುವುದು; ಅವನು ಕೆಟ್ಟ ಖಾಯಿಲೆಗಳಿಗೆ ತುತ್ತಾಗುವ ಸಂಭವವುಂಟು; ಮನಸ್ಸಿನ ಶಾಂತಿಯನ್ನು ಕಳೆದುಕೊಂಡು ತನ್ನ ಕಸಬಿನಲ್ಲೂ ಹಿಂದೆ ಬೀಳಬಹುದು.

೪. **ಗೃಹಕಾರ್ಯನಿರ್ವಾಹ ಶಕ್ತಿಯ ಅಭಾವ**—ಮಿತವಾಗಿ ವಿಚಕ್ಷಣೆಯಿಂದ ಗೃಹಕೃತ್ಯ ನಡೆಸಲು ಬಾರದಿರುವುದೂ ಬಡತನಕ್ಕೆ ಕಾರಣ. ಸಮಕಟ್ಟಾದ ಆಹಾರವನ್ನು

ಉಪಯೋಗಿಸದಿರುವುದರಿಂದ ಅನೇಕರು ಬಲಹೀನರಾಗುವುದಲ್ಲದೆ ಬಡವರೂ ಆಗಿದ್ದಾರೆ. ಬಲಹೀನರಾದವರು ರೋಗದ ಹಿಡಿತಕ್ಕೆ ಸಿಕ್ಕುವಷ್ಟು ಸುಲಭವಾಗಿ ಬಲಿಷ್ಠನು ಸಿಕ್ಕುವುದಿಲ್ಲ. ನಮ್ಮಲ್ಲಿ ಸಪ್ಪೆ ಅಕ್ಕಿ ತಿನ್ನುವುದರಿಂದ ಜನರಿಗೆ ಎರಡು ಮೈಲಿ ದೂರ ಆಯಾಸವಿಲ್ಲದೆ ನಡೆದುಕೊಂಡು ಹೋಗುವುದಕ್ಕೆ ಕೂಡ ಆಗುತ್ತಿಲ್ಲ. ಬೆಂಗಳೂರು ಮೈಸೂರಿನಲ್ಲಿ ಕೂಲಿಗಾರರು, ವೀಳೆಯದೆಲೆ ಮಾರುವವರು ಕೂಡ ಬಸ್ಸುಗಳಲ್ಲಿ ಹೋಗುತ್ತಾರೆ. ಇಪ್ಪತ್ತು ಮೂವತ್ತು ರೂಪಾಯಿಗಳ ಆದಾಯವಿರುವವರು ಒಂದೆರಡು ರೂಪಾಯಿಗಳನ್ನು ಟಾಂಗಕ್ಕೂ ಬಸ್ಸಿಗೂ ಹಾಕುತ್ತಾರೆ. ಇಷ್ಟು ಸ್ವಲ್ಪ ಆದಾಯವಿರುವವರೂ ಕಾಫಿಗಾಗಿ ತಿಂಗಳಿಗೆ ಎರಡು ಮೂರು ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಮನೆ ಬಾಡಿಗೆಗೆ ಆರೇಳು ರೂಪಾಯಿ, ಕಾಫಿಗೆ ಎರಡು ಮೂರು ರೂಪಾಯಿ ಖರ್ಚುಮಾಡಿದ ಮೇಲೆ, ಅವರು ಹಾಲನ್ನು ಎಷ್ಟು ಉಪಯೋಗಿಸಬಹುದು, ಮೊಸರು ಬೆಣ್ಣೆ ತುಪ್ಪ ತರಕಾರಿ ಹಣ್ಣುಹಂಪಲುಗಳನ್ನೆಷ್ಟು ಕೊಳ್ಳಬಹುದು ಎಂಬುದನ್ನು ಊಹಿಸುವುದು ಸುಲಭ. ಗೃಹಕೃತ್ಯವನ್ನು ನಿಭಾಯಿಸುವುದರಲ್ಲಿ ನಮಗಿಂತಲೂ ಹಿಂದಿನ ಕಾಲದವರಿಗೆ ಹೆಚ್ಚು ಪರಿಶ್ರಮವಿತ್ತು. ಈಗಲೂ ಅಂಥವರನ್ನು ಅಲ್ಲಲ್ಲಿ ನೋಡಬಹುದು. ಅವರಿಗೆ ಇಪ್ಪತ್ತು ಮೂವತ್ತು ರೂಪಾಯಿಗಳ ಆದಾಯವಿದ್ದರೂ ಪುಷ್ಟಿಯಾದ ಎರಡೂಟಗಳನ್ನು ಉಂಡು ಜಟ್ಟಿಗಳ ಹಾಗಿದ್ದಾರೆ; ತಿಂಗಳಿಗೊಂದೆರಡು ರೂಪಾಯಿಗಳನ್ನು ಆಪದ್ಧನವಾಗಿಯೂ ಶೇಖರಿಸಿ ಇಡುತ್ತಾರೆ.

ಮಿತವಾಗಿ ವಿಚಕ್ಷಣೆಯಿಂದ ಜೀವನಮಾಡುವ ಶಕ್ತಿ ಸಂಪಾದಿಸುವ ಗಂಡಸಿಗೆ ಮಾತ್ರ ಇದ್ದರೆ ಸಾಲದು, ಸಂಸಾರ

ಮಾಡುವ ಹೆಂಡತಿಗೂ ಇರಬೇಕು. ಬಂಡಿಗಟ್ಟಳೆಯಾಗಿ ಹೆಬ್ಬಾಗಿಲಿನಿಂದ ತಂದುಹಾಕಿದರೂ ಅಡಿಗೆ ಮಾಡುವ ಹೆಂಡತಿ ಬಚ್ಚಲುಪಾಲು ತಿಪ್ಪೆಪಾಲು ಮಾಡಬಹುದು. ಇದನ್ನು ನೋಡಿದಾಗ, ಹೆಂಗಸರನ್ನು ಗೃಹಲಕ್ಷ್ಮಿಯರನ್ನಾಗಿ ಮಾಡುವ ಕರ್ತವ್ಯವನ್ನು ನಮ್ಮ ಸಮಾಜದವರು ಎಷ್ಟು ಮಟ್ಟಿಗೆ ಮರೆತಿರುವರೆಂದು ವ್ಯಕ್ತವಾಗುವುದು.

೫. ಕುಟುಂಬಜೀವನದ ಕುಂದುಕೊರತೆಗಳೂ ಕಷ್ಟನಿಷ್ಠುರಗಳೂ ಜನರನ್ನು ಬಡತನಕ್ಕೆ ಈಡುಮಾಡುತ್ತವೆ. ಮದುವೆಯ ಕಾಲದಲ್ಲಿ ವಧೂವರರ ಹೆಗಲಿನ ಮೇಲೆ ನೊಗವನ್ನಿಡುವ ಶಾಸ್ತ್ರ ನಮ್ಮಲ್ಲಿದೆ. ಗಂಡಹೆಂಡರಿಬ್ಬರೂ ಸಂಸಾರದ ಹೊರೆಯನ್ನು ಒಂದೇ ಸಮನಾಗಿ ಎಳೆಯಬೇಕೆಂಬುದೇ ಇದರ ಅರ್ಥ. ಇವರಿಬ್ಬರಲ್ಲಿ ಯಾರೊಬ್ಬರು ಹಿಂದೆ ಬಿದ್ದರೂ ಸಂಸಾರ ಕೆಡುತ್ತದೆ. ಇಬ್ಬರಲ್ಲೊಬ್ಬರು ಮೃತಿಹೊಂದಿದರೂ ಮನೆತನವು ಮುರಿದು ಬೀಳುತ್ತದೆ. ಅವರಲ್ಲಿ ಯಾರು ದಾರಿತಪ್ಪಿ ಹೋದರೂ ದಾಂಪತ್ಯ ಜೀವನವು ಹದಕೆಡುತ್ತದೆ. ನಮ್ಮ ದೇಶದಲ್ಲಿ ದಾಂಪತ್ಯ ವಿಚ್ಛೇದದ ಅವಾಂತರವು ಅಷ್ಟಿಲ್ಲ. ಸಂಸಾರ ಹಾಳಾಗುವುದು ದಂಪತಿಗಳಲ್ಲೊಬ್ಬರು ಅಕಾಲದಲ್ಲಿ ಮೃತಿಹೊಂದುವುದರಿಂದ. ಈ ಅಕಾಲ ಮರಣಕ್ಕೆ ನಮ್ಮ ದೇಶದ ಆಯುಃಪ್ರಮಾಣವು ತೀರ ಕಡಮೆಯಾಗಿರುವುದೇ ಕಾರಣ[1] ನಡುಪ್ರಾಯಕ್ಕೆ ಬರುವ ಮುಂಚೆಯೇ ನಮ್ಮವರಿಗೆ ಮರಣ ಪ್ರಾಪ್ತಿಯಾಗುವುದು ಹೆಚ್ಚು. ಸಂಸಾರದಲ್ಲಿ ಎರಡು ಮೂರು ಮಕ್ಕಳಾಗುವ ಹೊತ್ತಿಗೆ ಗಂಡ ಸಾಯುತ್ತಾನೆ ಅಥವಾ ಹೆಂಡತಿ ಸಾಯುತ್ತಾಳೆ. ನಮ್ಮಲ್ಲಿ ೧,೦೦೦

---

[1] ೧೯೩೧ನೆಯ ಇಸವಿ ಸೆನ್ಸಸ್ ಪ್ರಕಾರ ನಮ್ಮ ದೇಶದವರ ಆಯುಃ ಪ್ರಮಾಣ ೨೬⅔ ವರ್ಷಗಳು.

ಹೆಂಗಸರಲ್ಲಿ ೧೫೫ ಮಂದಿ ವಿಧವೆಯರಿರುತ್ತಾರೆ.[1] ಇವರಲ್ಲಿ ೨೨ ಜನ ಮೂವತ್ತು ವರ್ಷದೊಳಗಿನ ಪ್ರಾಯದವರು. ಮುತ್ತೈದೆಯರು ಹೆಚ್ಚಾಗಿ ಸಾಯುವುದು ಕೂಡ ಮೂವತ್ತು ವರ್ಷಗಳ ಒಳಗೆ. ಹೀಗೆ ಚೆನ್ನಾಗಿ ಬದುಕಿ ಬಾಳುವ ವಯಸ್ಸಿನಲ್ಲಿ ಗಂಡ ಅಥವಾ ಹೆಂಡತಿ ಸಾಯುವುದರಿಂದ ಸಂಸಾರದ ಆರ್ಥಿಕಸ್ಥಿತಿ ಕೆಟ್ಟುಹೋಗುವುದು. ಇದರ ಜೊತೆಗೆ ಅವಿಭಕ್ತ ಕುಟುಂಬದ ಕಷ್ಟನಿಷ್ಠುರಗಳು ಬೇರೆ ಇವೆ. ಒಬ್ಬ ದುಡಿಯುವುದು ಹತ್ತು ಜನ ತಿನ್ನುವುದು ; ಅಣ್ಣ ತಮ್ಮಂದಿರೂ, ಅತ್ತೆ ಸೊಸೆಯರೂ ಕಾದಾಡುವುದು—ಇವು ಎಲ್ಲವೂ ಸೇರಿ ಸಂಸಾರವನ್ನು ಸಾಲದಲ್ಲಿ ಮುಳುಗಿಸಿವೆ.

ದೂರದ ಕಾರಣಗಳು

೧. **ಭೂಗುಣ, ವಾಯುಗುಣ, ಕೈಗಾರಿಕೆಯ ವಾತಾವರಣ**—ಒಂದು ದೇಶದ ಭೂಗುಣವೂ ವಾಯುಗುಣವೂ, ಕೈಗಾರಿಕೆಯ ವಾತಾವರಣವೂ, ಸಮಾಜದ ಶೀಲಸ್ವಭಾವವೂ, ಸರ್ಕಾರದ ರೀತಿ ನೀತಿಗಳೂ ಆ ದೇಶದ ಆರ್ಥಿಕಸ್ಥಿತಿಗೆ ಕಾರಣಗಳಾಗಿವೆ. ಭೂಮಿ ಫಲವತ್ತಾಗಿಲ್ಲದಿದ್ದರೆ, ನೀರಿನ ಆಶ್ರಯವಿಲ್ಲದಿದ್ದರೆ, ಖನಿಜಸಂಪತ್ತು ಕಡಮೆಯಾಗಿದ್ದರೆ, ಜನರಲ್ಲಿ ಒಗ್ಗಟ್ಟಿಲ್ಲದಿದ್ದರೆ, ಜನರ ಹಿತವನ್ನು ಬಯಸುವ ಸರ್ಕಾರವಿಲ್ಲದಿದ್ದರೆ—ಅಲ್ಲಿಯ ಜನರು ಬಡವರಾಗುವುದು ಸಹಜವಾಗಿದೆ.

ಇಂಡಿಯಾ ದೇಶದ ಭೂಸ್ಥಿತಿಯನ್ನು ನೋಡಿದರೆ ನಾವು

---

[1] *The Indian Year Book* (1936–37), p. 40. ಹಿಂದುಗಳಲ್ಲಿ ಮತ್ತು ಜೈನರಲ್ಲಿ ವಿಧವೆಯರು ಬಹಳ ಹೆಚ್ಚು ; ೧೦೦೦ ಹಿಂದು ಹೆಂಗಸರಲ್ಲಿ ೧೬೯ ವಿಧವೆಯರು, ೧೦೦೦ ಜೈನ ಹೆಂಗಸರಲ್ಲಿ ೨೫೩ ವಿಧವೆಯರು.

ಬಡವರಾಗಲು ಕಾರಣವಿಲ್ಲ. ಏಕೆಂದರೆ ನಮ್ಮ ದೇಶದಲ್ಲಿ ೬೬೮,೦೪೫,೦೦೦ ಎಕರೆಗಳು ವ್ಯವಸಾಯದಲ್ಲಿವೆ;[1] ವ್ಯವಸಾಯಕ್ಕೆ ಯೋಗ್ಯವಾದ ಆದರೆ ಬಂಜರು ಬಿದ್ದಿರುವ ೧೫೩,೫೯೦,೦೦೦ ಎಕರೆಗಳಿವೆ. ಜಿಲೆಬಾಳುವ ಮರಗಳಿಂದಲೂ, ಉತ್ತಮವಾದ ಖನಿಜಗಳಿಂದಲೂ ಆನೆ ಮುಂತಾದ ಉಪಯೋಗಕರವಾದ ಪ್ರಾಣಿಗಳಿಂದಲೂ ತುಂಬಿದ ೮೯,೦೦೦,೦೦೦ ಎಕರೆಯ ಕಾಡುಗಳೂ ಇವೆ. ಕೈಗಾರಿಕೆಗೆ ಉಪಯೋಗಕರವಾದ ಕಲ್ಲಿದ್ದಲು ಅಷ್ಟು ಹೇರಳವಾಗಿಲ್ಲದಿದ್ದರೂ ಒಂದು ನೂರು ವರ್ಷಗಳ ಕಾಲ ಉಪಯೋಗಿಸುವಷ್ಟಾದರೂ ಸಿಕ್ಕುತ್ತದೆ. ಕಬ್ಬಿಣದ ಅದುರು, ಮ್ಯಾಂಗನಿಸ್, ಸೀಸ, ತವರ, ಗಂಧಕ–ಇವು ನಮ್ಮ ಉಪಯೋಗಕ್ಕೆ ಬೇಕಾದಷ್ಟು ಇವೆ. ಚಿನ್ನ ಬೆಳ್ಳಿ ಮಾತ್ರ ಕಡಮೆ. ಉಪ್ಪು ಸೀಮೆಂಟು ಇವುಗಳನ್ನು ಮಾಡುವುದಕ್ಕೆ ಬೇಕಾದ ಹಾಗೆ ಅನುಕೂಲಗಳಿವೆ. ವಿದ್ಯುಚ್ಛಕ್ತಿಯ ಸೌಕರ್ಯಗಳನ್ನು ಏರ್ಪಡಿಸಲು ಅನೇಕ ಕಡೆಗಳಲ್ಲಿ ಅವಕಾಶವಿದೆ. ಬೆಳೆದ ದವಸಗಳನ್ನೂ ತಯಾರು ಮಾಡಿದ ಸಾಮಾನುಗಳನ್ನೂ ಉಪಯೋಗಿಸಲು ೩೫ ಕೋಟಿ ಪ್ರಜೆಗಳಿದ್ದಾರೆ. ಇಷ್ಟು ಸಂಪದಭ್ಯುದಯಕರವಾದ ಸನ್ನಿವೇಶ ಸಲಕರಣೆಗಳಿದ್ದರೂ ಎಲ್ಲೆಲ್ಲೂ ದಾರಿದ್ರ್ಯ ಎದ್ದು ಕಾಣುತ್ತಿದೆ.

ಇದಕ್ಕೆ ಏನು ಕಾರಣ? ಇದಕ್ಕೆ ನಮ್ಮ ವಾಯುಗುಣವೇ ಮುಖ್ಯಕಾರಣವೆಂದು ಕೆಲವರು ಹೇಳುವುದುಂಟು. ಕಾಲ ಕಾಲಕ್ಕೆ ಮಳೆ ಬೀಳದೆ ಪೈರುಪಚ್ಚೆಗಳು ಒಣಗಿಹೋಗುವುದು, ನಿತ್ರಾಣಮಾಡುವ ಉರಿಬಿಸಿಲು—ಇವು ನಿಜವಾಗಿಯೂ ಪ್ರಬಲ

---

[1] ಇವುಗಳಲ್ಲಿ ಕಾಲುವೆಗಳ ನೀರಿನಿಂದ ಸಾಗುವಳಿಯಾಗುವ ಅತ್ಯಂತ ಫಲವತ್ತಾದ ೩೦,೨೩೧,೪೪೮ ಎಕರೆಗಳು ಸೇರಿವೆ.

ವಾದ ಕಾರಣಗಳಾದರೂ ಅನಿವಾರ್ಯವಾದುವಲ್ಲ. ಈ ಕುಂದು ಕೊರತೆಗಳಿದ್ದರೂ ಕೆಲವು ದೇಶಗಳಲ್ಲಿ ಜನರು ತಮ್ಮ ಬುದ್ಧಿ ಶಕ್ತಿಯಿಂದಲೂ ಪುರುಷಬಲದಿಂದಲೂ ಅವನ್ನು ನಿವಾರಿಸಿ ಕೊಂಡಿದ್ದಾರೆ. ಆಧುನಿಕ ವೈಜ್ಞಾನಿಕಬಲದಿಂದಲೂ, ಯಂತ್ರ ಸೌಕರ್ಯದಿಂದಲೂ ನಾವು ಈ ಕುಂದುಕೊರತೆಗಳನ್ನು ಪರಿಹರಿಸಬಹುದು.

ನಾವು ಬಡವರಾಗಿರುವುದು ಮುಖ್ಯವಾಗಿ ಯಂತ್ರ ಸೌಕರ್ಯವನ್ನು ಹೆಚ್ಚಿಸಿಕೊಳ್ಳದಿರುವುದರಿಂದ; ಯಂತ್ರ ಪ್ರಯೋಗಗಳಲ್ಲಿ ನಮ್ಮ ಜನರಿಗೆ ಆಸಕ್ತಿ ಕಡಮೆ. ಈ ನಿರಾಸಕ್ತಿ ಯನ್ನು ತೊಲಗಿಸಿ ಜನರಲ್ಲಿ ಕೈಗಾರಿಕೆಯ ಮನೋವೃತ್ತಿಯನ್ನು ಉಂಟುಮಾಡುವ ವೇಳೆಗೆ ಸರಿಯಾಗಿ ಮಹಾಪೂಜ್ಯರಾದ ಗಾಂಧಿಯವರು ಯಂತ್ರನಿಷೇಧ ವ್ರತವನ್ನು ಬೋಧಿಸುತ್ತಿರು ವುದು ನಮ್ಮ ದೇಶದ ದುರದೃಷ್ಟ. ಸಾವಿರಗಟ್ಟಳೆ ಗಿರಣಿಗಳನ್ನು ಸ್ಥಾಪಿಸಿ ಕೋಟ್ಯಂತರ ಜನರಿಗೆ ಕೆಲಸ ಒದಗಿಸಿ, ದೇಶದ ಐಶ್ವರ್ಯವನ್ನು ನೂರ್ಮಡಿ ಹೆಚ್ಚಿಸಿ ಎಲ್ಲೆಲ್ಲೂ ಲಕ್ಷ್ಮಿ ತಾಂಡವ ವಾಡುವಂತೆ ಮಾಡಲು ಅವಕಾಶವಿದ್ದರೂ ಲಕ್ಷ್ಮಿಯನ್ನು ಕಸದಂತೆ ಕಾಣುತ್ತಿದ್ದೇವೆ. ನಮ್ಮ ಜಮೀನುಗಳನ್ನು ಆಧುನಿಕ ರೀತಿಯಲ್ಲಿ ಉತ್ತು ಬಿತ್ತಿ ಕೃಷಿಮಾಡಿದರೆ ನಮ್ಮ ದೇಶದ ಮೂವತ್ತೈದುಕೋಟಿ ಜನರು ತಿಂದು ತೇಗಿ ಬೇರೆಯ ದೇಶದ ವರಿಗೂ ಕಳುಹಿಸುವಷ್ಟು ದವಸಧಾನ್ಯಗಳನ್ನೂ ಹಣ್ಣುಹಂಪಲು ಗಳನ್ನೂ ಬೆಳೆಯಬಹುದು. ಅದನ್ನು ಬಿಟ್ಟು ಕೃಷಿ ಕೈಗಾರಿಕೆ ಗಳಲ್ಲಿ ಕಂದಾಚಾರದ ಪದ್ಧತಿಗಳನ್ನಿಟ್ಟುಕೊಂಡಿರುವುದರಿಂದ ನಮ್ಮ ದೇಶದವರಿಗೆ ಬೇಕಾಗುವಷ್ಟನ್ನು ಕೂಡ ಬೆಳೆಯಲು ಸಾಧ್ಯವಾಗಿಲ್ಲ; ಒಂದು ಚದರ ಮೈಲಿಗೆ ೧೯೫ ಜನರನ್ನು

ಕೂಡ ಸಾಕುವುದು ಕಷ್ಟವಾಗಿದೆ. ಆಧುನಿಕ ಯಂತ್ರೋಪ ಕರಣಗಳನ್ನು ಉಪಯೋಗಿಸಿದಲ್ಲದೆ, ಕೈಗಾರಿಕೆಗಳನ್ನು ಹೆಚ್ಚಿಸಿ ದಲ್ಲದೆ ೩೫ ಕೋಟಿ ಜನರನ್ನು ಕಾಪಾಡಲು ಅಸಾಧ್ಯ ಎಂಬು ದನ್ನು ಎಷ್ಟು ವಿಶದವಾಗಿ ತೋರಿಸಿಕೊಟ್ಟರೂ ವಿಶ್ವವಿದ್ಯಾ ನಿಲಯದ ಪದವೀಧರರಿಗೆ ಕೂಡ ತಲೆಗೆ ಹತ್ತುವುದಿಲ್ಲ. ಮಹಾತ್ಮ ಗಾಂಧಿಯವರ ಮಂತ್ರಶಕ್ತಿ ಅಷ್ಟು ಅದ್ಭುತವಾಗಿದೆ.

ಯಂತ್ರಗಳನ್ನುಪಯೋಗಿಸಲು ಮೊದಲು ಮಾಡಿದರೆ ಆಧ್ಯಾತ್ಮ ಮನೋಭಾವ ಹೋಗುತ್ತದೆ, ಬಂಡವಾಳಗಾರರು ಹೆಚ್ಚಿಕೊಳ್ಳುತ್ತಾರೆ, ಬಂಡವಾಳಗಾರರಿಗೂ ಕೂಲಿಗಾರರಿಗೂ ವೈಷಮ್ಯ ಹುಟ್ಟುತ್ತದೆ, ನಿರುದ್ಯೋಗ ಪ್ರಾಪ್ತವಾಗುತ್ತದೆ ಎಂದು ಗಾಂಧಿವಾದಿಗಳು ಕಣಿಹೇಳಲು ಪ್ರಾರಂಭಮಾಡು ತ್ತಾರೆ. ನಿಜವಾದ ಆಧ್ಯಾತ್ಮ ಮನೋವೃತ್ತಿ ನಮ್ಮಲ್ಲಿ ಎಷ್ಟು ಜನಕ್ಕೆ ಇದೆ? ನಮ್ಮ ಆಧ್ಯಾತ್ಮ ಗ್ರಂಥಗಳ ನಿಜವಾದ ತಿರುಳನ್ನು ನಮಗೆ ತೋರಿಸಿ ಕೊಟ್ಟವರು, ಕೊಡುತ್ತಿರುವವರು ಯಾರು? ಅಜ್ಞಾನಾಂಧಕಾರದಲ್ಲಿ ಮುಳುಗಿಹೋಗಿರುವ ಜನರ ಕುರುಡು ನಂಬಿಕೆಗಳನ್ನು ನಿಜವಾದ ಮತವೆನ್ನಬಹುದೆ? ಈ ಕುರುಡು ನಂಬಿಕೆಗಳು ಹೋದರೆ ನಮಗೆ ಆಗುವ ನಷ್ಟತಾನೆ ಏನು? ಕೈಗಾರಿಕೆಗಾಗಿ ಯಂತ್ರಗಳನ್ನು ಉಪಯೋಗಿಸಲು ಬಂಡವಾಳ ಬೇಕೇ ಹೊರತು ಬಂಡವಾಳಗಾರರು ಏಕಿರಬೇಕು? ದೇಶದ ಬಂಡವಾಳವನ್ನು ಜನರ ಸ್ವತ್ತಾಗಿ ರಷ್ಯಾ ದೇಶದವರೂ, ಇಟಲಿ ಯವರೂ, ಜರ್ಮನಿಯವರೂ ಮಾಡಿಲ್ಲವೆ? ನಾಲ್ಕೂವರೆ ಕೋಟಿ ಬ್ರಿಟಿಷರು ಪ್ರಪಂಚಕ್ಕೆಲ್ಲಾ ತಾವೇ ಸಾಮಾನುಗಳನ್ನು ಮಾಡಿ ಮಾರಬೇಕೆಂದು ಪ್ರಯತ್ನಮಾಡಿ ಹಿಮ್ಮೆಟ್ಟಿರುವುದರಿಂದಲ್ಲವೇ ಅವರಿಗೆ ನಿರುದ್ಯೋಗ ಪ್ರಾಪ್ತವಾಗಿರುವುದು? ನಮ್ಮ ಉಪಯೋ

ಗಕ್ಕೆ ಬೇಕಾದಷ್ಟು ಸಾಮಾನುಗಳನ್ನು ಒದಗಿಸಲು ಸಾಕಾದಷ್ಟು ಕೆಲಸಗಾರರು ಸಿಕ್ಕದಿರುವಾಗ ನಮಗೆ ನಿರುದ್ಯೋಗದ ಭಯವೆಲ್ಲಿ ಬಂತು? ಕೈಗಾರಿಕೆಗಾಗಿ ಯಂತ್ರಗಳನ್ನು ವಿಶೇಷವಾಗಿ ಉಪಯೋಗಿಸುವುದರಿಂದ ಇಂಗ್ಲೆಂಡಿನಲ್ಲಿ ಚದರ ಮೈಲಿಗೆ ೬೮೫ ಜನರನ್ನೂ ಬೆಲ್ಜಿಯಂನವರು ೬೫೪ ಜನರನ್ನೂ, ಜರ್ಮನಿಯವರು ೩೩೨ ಜನರನ್ನೂ ಪೋಷಿಸಲು ಸಾಧ್ಯವಾದರೆ ನಾವು ಚದರ ಮೈಲಿಗೆ ೧೯೫ ಜನರನ್ನು ಪೋಷಿಸುವುದು ಕಷ್ಟವಾಗುವುದೆ? ನಿರುದ್ಯೋಗ ಪರಿಹಾರಕ್ಕಿಂತಲೂ ಜನರಲ್ಲಿ ಉದ್ಯೋಗ ಪ್ರೇರಣೆಯೇ ನಮ್ಮ ದೇಶದ ಮುಖ್ಯ ಸಮಸ್ಯೆ. ತಯಾರುಮಾಡಿದ ಸಾಮಾನುಗಳನ್ನು ಬಿಕರಿಮಾಡುವುದು ಹೇಗೆ ಎಂಬುದು ಪಾಶ್ಚಾತ್ಯದೇಶಗಳ ಸಮಸ್ಯೆಯಾದರೆ ನಮ್ಮ ಸಮಸ್ಯೆ ನಮ್ಮ ಉಪಯೋಗಕ್ಕೆ ಬೇಕಾದಷ್ಟನ್ನಾದರೂ ತಯಾರುಮಾಡುವುದು ಹೇಗೆ ಎಂಬುದಲ್ಲವೆ? ಈ ಪ್ರಶ್ನೆಗಳನ್ನು ನೇರವಾಗಿ ಹಾಕಿಕೊಂಡು ನಿಷ್ಪಕ್ಷಪಾತವಾಗಿ ಉತ್ತರ ಕೊಡಲು ಪ್ರಯತ್ನಿಸಿದರೆ ನಮ್ಮ ಅಭ್ಯುದಯಕ್ಕೆ ಯಂತ್ರಗಳ ಉಪಯೋಗ ಎಷ್ಟು ಆಗತ್ಯವಾದುದು ಎಂಬುದು ಮನಸ್ಸಿಗೆ ಹಿಡಿಯುವುದು.

೨. **ಮಿತಿಮೀರಿದ ಜನಸಂಖ್ಯೆ**—ಮಿತಿಮೀರಿ ಹೆಚ್ಚುತ್ತಿರುವ ಜನಸಂಖ್ಯೆ ನಮ್ಮ ದಾರಿದ್ರ್ಯಕ್ಕೆ ಕಾರಣ ಎಂದು ಹೇಳುವುದುಂಟು. ನಮ್ಮ ದೇಶದ ಜನಸಂಖ್ಯೆಯೇನೋ ವಿಶೇಷವಾಗಿ ಬೆಳೆಯುತ್ತಿರುವುದು ನಿಜ. ೧೮೮೧ ರಿಂದ ೧೯೨೧ ರ ವರೆಗೆ ಶೇಕಡ ೩೯ ರಷ್ಟು ಹೆಚ್ಚಿದೆ, ೧೯೨೧ ರಿಂದ ೧೯೩೧ ರ ವರೆಗೆ ಶೇಕಡ ೧೦ ರಷ್ಟು ಹೆಚ್ಚಿದೆ. ಹೀಗೆಯೇ ಹೆಚ್ಚುತ್ತ ಹೋದರೆ ಇನ್ನು ೫೦ ವರ್ಷಗಳಲ್ಲಿ ಇಂಡಿಯಾ ದೇಶದ ಜನಸಂಖ್ಯೆ ೭೦ ಕೋಟಿಗಳಾಗುವ ಸಂಭವವಿದೆ. ನಮ್ಮ ಆರ್ಥಿಕಸ್ಥಿತಿಯನ್ನು

ನೋಡಿದರೆ ನಮ್ಮ ದೇಶದಲ್ಲಿ ಇರಬೇಕಾದುದಕ್ಕಿತಲೂ ಹೆಚ್ಚು ಜನರಿರುವರೆಂದು ಹೇಳುವುದು ನ್ಯಾಯವಾಗಿದೆ. ಮುಖ್ಯವಾಗಿ ಕೃಷಿಯಿಂದಲೇ ಜೀವಿಸುತ್ತಿರುವ ಯಾವ ದೇಶದಲ್ಲಿಯೂ ಇಂಡಿಯಾದಲ್ಲಿರುವಂತೆ ಚದರ ಮೈಲಿಗೆ ಸರಾಸರಿ ೧೯೫ ಜನರು ವಾಸಿಸುತ್ತಿಲ್ಲ. ನಮ್ಮ ದೇಶದಲ್ಲಿ ಕೈಗಾರಿಕೆಗಳು ಬೆಳೆದರೆ ಈಗಿರುವಷ್ಟು ಜನರಿಗೆ ಜೀವನೋಪಾಯ ಸಿಕ್ಕುವುದೇನೂ ಕಷ್ಟವಲ್ಲ. ಬಹುಶಃ ಇನ್ನೂ ಹೆಚ್ಚು ಜನರಿಗೆ ಜೀವನೋಪಾಯಕ್ಕೆ ಅವಕಾಶವುಂಟಾಗಬಹುದು. ಏಕೆಂದರೆ ಕೈಗಾರಿಕೆಗಳು ಅಭಿವೃದ್ಧಿಸ್ಥಿತಿಯಲ್ಲಿರುವ ದೇಶಗಳಲ್ಲಿ ಚದರ ಮೈಲಿಗೆ ಸರಾಸರಿ ೩೬೨ ರಿಂದ ೬೮೫ ಜನರು ಸುಖವಾಗಿ ಜೀವಿಸುತ್ತಾರೆಂದು ನಾವು ಆಗಲೇ ನೋಡಿದ್ದೇವೆ.

ಒಟ್ಟಿನಲ್ಲಿ ನಮ್ಮ ಬಡತನಕ್ಕೆ ಮಿತಿಮೀರಿದ ಜನಸಂಖ್ಯೆ ಅಷ್ಟು ಮುಖ್ಯಕಾರಣವಲ್ಲ. ಹುಟ್ಟಿದವರಲ್ಲಿ ಬಹುಬೇಗನೆ ಬಹು ಸಂಖ್ಯೆಯಲ್ಲಿ ಸಾಯುವುದರಿಂದಲೂ ಹೆಚ್ಚುಮಂದಿ ಬುದ್ಧಿಮಾಂದ್ಯವುಳ್ಳವರೂ, ಹೆಳವರೂ, ರೋಗ ತಗುಲಿದವರೂ, ಸೋಮಾರಿಗಳೂ, ಕೆಲಸಕ್ಕೆ ಬಾರದವರೂ ಆಗಿರುವುದರಿಂದಲೂ ನಮಗೆ ಹಾನಿಯುಂಟಾಗಿದೆ. [1]ನಮ್ಮ ದೇಶದಲ್ಲಿ ೨,೮೦೦ ಮಕ್ಕಳು ಹುಟ್ಟಿದರೆ ಹತ್ತುವರ್ಷವಾಗುವುದರೊಳಗಾಗಿ ೮೦೦ (೨೮%) ಜನ ಸತ್ತುಹೋಗುತ್ತಾರೆ. ಅವರಲ್ಲಿ ನಲವತ್ತು ವರ್ಷಗಳವರೆಗೆ ಬದುಕಿರುವವರು ೧,೪೩೧ (೫೦%) ಜನರು ಮಾತ್ರ. ಈ ಅಂಕಿ

[1] *The Indian Year Book* (1936–37), pp. 540–45. ಕುಷ್ಠರೋಗಿಗಳು ೧೦೨,೫೧೩, ಕುರುಡರು ೪೮೦,೦೦೦, ಹುಚ್ಚರು ೧೨೦,೩೦೪, ಕೊರಚರು ಕೊರಮರು ೪,೦೦೦,೦೦೦, ನಿರುದ್ಯೋಗಿಗಳು ೧೦,೦೦೦,೦೦೦.

ಗಳನ್ನು ಇಂಗ್ಲೆಂಡಿನ ಅಂಕಿಗಳೊಡನೆ ಹೋಲಿಸಿದರೆ ಇಂಗ್ಲೆಂಡಿನ ಜನರ ಆಯುಃಪ್ರಮಾಣ ಎಷ್ಟು ಹೆಚ್ಚಾಗಿದೆ ಎಂಬುದು ಗೊತ್ತಾಗುವುದು. ಇಂಗ್ಲೆಂಡಿನಲ್ಲಿ ೨೦೯ ಮಕ್ಕಳು ಹುಟ್ಟಿದರೆ ಹತ್ತು ವರ್ಷಗಳಲ್ಲಿ ೧೯ (೯%) ಮಕ್ಕಳು ಮಾತ್ರ ಸಾಯುತ್ತಾರೆ. ಉಳಿದವರಲ್ಲಿ ೧೫೨ (೭೫%) ಜನ ನಲವತ್ತು ವರ್ಷಗಳ ವರೆಗೆ, ೮೦ ಜನ (೪೦%) ಅರವತ್ತು ವರ್ಷಗಳ ವರೆಗೆ ಬದುಕುತ್ತಾರೆ. ಇಂಡಿಯಾ ದೇಶದವರ ಆಯುಃಪ್ರಮಾಣ ೨೬.೭೫ ವರ್ಷಗಳು; ಇಂಗ್ಲೆಂಡಿನವರ ಆಯುಃಪ್ರಮಾಣ ೫೯.೫೮. ಚೆನ್ನಾಗಿ ಮೈಬಲಿತು ಮನಸ್ಸು ಪಕ್ವವಾಗಿ ಬದುಕಿಬಾಳುವ ವಯಸ್ಸಿನಲ್ಲಿ ಸಾವು ಪ್ರಾಪ್ತವಾದರೆ ಸಂಸಾರಗಳು ಮುರಿದು ಬಿದ್ದು ದೇಶವು ದಾರಿದ್ರ್ಯದಲ್ಲಿ ಮುಳುಗುವುದೇನಾಶ್ಚರ್ಯ. ನಮ್ಮ ದೇಶದಲ್ಲಿ ಬಡವರು ಸಂತಾನ ಹೆಚ್ಚದಂತೆ ಅದನ್ನು ತಡೆಯಲು ಪ್ರಯತ್ನಿಸದಿದ್ದರೆ, ಹುಚ್ಚರನ್ನೂ ಕುಷ್ಠರೋಗಿಗಳನ್ನೂ ಮೇಹರೋಗಿಗಳನ್ನೂ ಸಂತಾನನಿರೋಧದ ಕಾನೂನಿಗೆ ಒಳಪಡಿಸದಿದ್ದರೆ ನಮ್ಮ ಜನದ ಪುರುಷಶಕ್ತಿಯೂ ಆಯುಃಪ್ರಮಾಣವೂ ಕಡಮೆಯಾಗುತ್ತಾ ಬಂದು ನಮ್ಮ ಜನಾಂಗವು ತಲೆಯೆತ್ತುವುದು ಅಸಾಧ್ಯವಾಗುವುದು.

೩. **ಕಸಬುಗಳ ಅವನತಿ**—ಕಸಬುಗಳ ವ್ಯವಸ್ಥೆ ಕೆಡುವುದೂ ದಾರಿದ್ರ್ಯಕ್ಕೆ ಕಾರಣ. ಸಮಾಜದ ಅಭ್ಯುದಯಕ್ಕೆ ಒಬ್ಬೊಬ್ಬರು ಒಂದೊಂದು ಕಸಬನ್ನು ಆಯ್ದುಕೊಂಡು ಅದರಲ್ಲೇ ಹೆಚ್ಚು ನೈಪುಣ್ಯವನ್ನು ಪಡೆಯುವುದು ಅತ್ಯಾವಶ್ಯಕ. ಕೆಲವರು ಜ್ಞಾನಸಾಧನೆಯ ಕೆಲಸದಲ್ಲಿ ಪ್ರವೀಣರಾಗಬೇಕು, ಇನ್ನು ಕೆಲವರು ಅರ್ಥಸಾಧನೆಯ ಕೆಲಸದಲ್ಲಿ ನಿಪುಣರಾಗಬೇಕು, ಇನ್ನೂ ಕೆಲವರು ರಾಜಮಂತ್ರಪ್ರವೀಣರಾಗಬೇಕು,

ಉಳಿದವರು ಕೃಷಿ ಕೈಗಾರಿಕೆಗಳಲ್ಲಿ ಮುಂದುವರಿಯಬೇಕು. ಆದರೆ ಇವುಗಳಲ್ಲಿ ಕೆಲವು ಉತ್ತಮರು ಮಾಡುವ ಕೆಲಸಗಳು, ಇನ್ನು ಕೆಲವು ಕೀಳುಜನರು ಮಾಡುವ ಕೆಲಸಗಳು ಎಂಬ ಭಾವನೆ ಹುಟ್ಟಿದರೆ ಅದರಿಂದ ಜನರ ವ್ಯಕ್ತಿತ್ವಕ್ಕೆ ಲೋಪ ಬರುವುದಲ್ಲದೆ ಅವರು ಮಾಡುವ ಕೆಲಸವೂ ಕೆಟ್ಟುಹೋಗುವುದು. ಗುಮಾಸ್ತೆಯ ಕೆಲಸ ಉತ್ತಮವಾದದ್ದು, ಕಮ್ಮಾರನ ಕೆಲಸ ಕೀಳುದರ್ಜೆಯದು ಎಂಬ ಭಾವನೆ ಹುಟ್ಟಿದರೆ, ಕಮ್ಮಾರನಿಗೆ ತನ್ನ ಕೆಲಸದಲ್ಲಿ ಶ್ರದ್ಧೆಯೂ ಇರುವುದಿಲ್ಲ, ಹೆಮ್ಮೆಯೂ ಇರುವುದಿಲ್ಲ. ಇದರಿಂದ ನಮ್ಮ ಸಮಾಜದಲ್ಲಿ ಗುಮಾಸ್ತೆಯ ಕೆಲಸಕ್ಕಾಗಿ ಆಶಿಸುವವರು ಹೆಚ್ಚುತ್ತಾರೆ. ವಿಚಕ್ಷಣೆಯಿಂದ ಕಮ್ಮಾರನ ಕೆಲಸ ಮಾಡುವವರು ಕಡಮೆಯಾಗುತ್ತಾರೆ. ಹೀಗೆ ಸಂಪದಭಿವೃದ್ಧಿಕರವಾದ ಕಸಬುಗಳು ಕ್ಷೀಣದೆಸೆಗೆ ಬರುತ್ತಿರುವುದರಿಂದಲೇ ನಮ್ಮ ದೇಶವೆಲ್ಲಾ ಬಡತನದಿಂದ ನರಳುತ್ತಿರುವುದು.

೪. **ಸ್ವಾರ್ಥತನ**—ಜನರು ಒಟ್ಟು ಸಮಾಜದ ಹಿತವನ್ನು ಗಮನಿಸದಿರುವುದೂ ದೇಶಕ್ಕೆ ಕೇಡು ತರುತ್ತದೆ. ತಾನು ಬದುಕಿದರೆ ಸರಿ, ಇತರರು ಎಲ್ಲಿಯಾದರೂ ಹಾಳಾಗಿಹೋಗಲಿ; ನಮ್ಮ ಜಾತಿಯವರು ಚೆನ್ನಾಗಿದ್ದರೆ ಆಯಿತು, ಇತರ ಜಾತಿಯವರು ಏನಾದರೂ ಆಗಲಿ ಎಂಬ ಭಾವನೆ ಸಮಾಜಕ್ಕೆ ಶ್ರೇಯಸ್ಕರವಲ್ಲ. ಈ ಭಾವನೆಯಿಂದ ತಾತ್ಕಾಲಿಕವಾಗಿ ಒಬ್ಬ ವ್ಯಕ್ತಿಗೆ, ಒಂದು ಕೋಮಿಗೆ ಅನುಕೂಲವಾಗಬಹುದು. ಆದರೆ ಕೊನೆಯಲ್ಲಿ ಅದರಿಂದ ಕೇಡೇ ನಿಶ್ಚಯ. ಇತರರ ಕ್ಷೇಮವನ್ನೆಣಿಸದೆ ಒಬ್ಬ ಮನುಷ್ಯನೇ ಆಗಲಿ ಒಂದು ಕೋಮಿನವರೇ ಆಗಲಿ ಈ ಹೊತ್ತು ಐಶ್ವರ್ಯ ಸಂಪಾದಿಸಬಹುದು, ಅಧಿಕಾರ ಸಂಪಾದಿಸಬಹುದು, ಮೇಲಿನ ಅಂತಸ್ತನ್ನು ಏರಬಹುದು. ಆದರೆ ಈ ಉನ್ನತಿ

ಸ್ಥಿರವಾದುದಲ್ಲ. ಏಕೆಂದರೆ ಇತರರೂ ಅದನ್ನೇ ಬಯುಸುವರು. ಇತರರ ಮನೆಯನ್ನು ಹಾಳುಮಾಡಿ ನನ್ನ ಮನೆಯನ್ನು ತುಂಬಿಕೊಂಡರೆ, ನನ್ನ ಮನೆಯನ್ನು ಹಾಳುಮಾಡಿ ತಮ್ಮ ಮನೆಯನ್ನು ತುಂಬಿಕೊಳ್ಳಲು ಸಾವಿರಾರು ಜನ ಕಾದೇ ಇರುತ್ತಾರೆ. ಇತರ ಕೋಮಿನವರನ್ನು ಹಿಂದಕ್ಕೆ ತಳ್ಳಿ ಒಂದು ಕೋಮಿನವರು ಮುಂದಕ್ಕೆ ಬಂದರೆ, ಅವರನ್ನು ಎಳೆದು ಹಾಕಿ ಇನ್ನೊಂದು ಕೋಮಿನವರು ಆ ಸ್ಥಾನಕ್ಕೆ ಬರಬೇಕೆಂದು ಆಶೆಪಡುತ್ತಾರೆ. ಹೀಗೆ ಇಂದು ಒಬ್ಬರ ಮೇಲೆ ಎತ್ತಿದ ಕತ್ತಿ ಮುಂದೆ ನಮ್ಮ ಕತ್ತಿನ ಮೇಲೆಯೇ ಇಳಿಯು ತ್ತದೆ. ಒಬ್ಬನು ಮಾಡಿದ ಕರ್ಮವು ಅವನನ್ನು ಹಿಂಬಾಲಿಸು ವಂತೆ, ಒಂದು ಕೋಮಿನವರು ಮಾಡಿದ ಕರ್ಮವು ಕೂಡ ಅವರನ್ನು ಹಿಂಬಾಲಿಸುತ್ತದೆ. ಅಸೂಯೆಯನ್ನು ಬಿತ್ತಿ ಆತ್ಮ ಶಾಂತಿಯನ್ನು ಪಡೆಯಲಾಗುವುದಿಲ್ಲ; ಪರರ ಶ್ರೇಯಸ್ಸನ್ನು ಬಯಸದೆ ಸ್ವಶ್ರೇಯಸ್ಸನ್ನು ಸಾಧಿಸಲಾಗುವುದಿಲ್ಲ. ಆದುದ ರಿಂದ ಎಲ್ಲರೂ ಸುಖವಾಗಿರಲಿ ಎಂಬ ಹಾರೈಕೆ ಇಲ್ಲದಿದ್ದರೆ ಸಮಾಜದಲ್ಲಿ ಯಾರಿಗೂ ಸುಖ ಲಭಿಸುವುದಿಲ್ಲ. ಸಮಾಜದಲ್ಲಿ ಪ್ರತಿಯೊಂದು ಸಂಸ್ಥೆಯೂ ಚೆನ್ನಾಗಿದ್ದರೆ ಸಮಾಜವೆಲ್ಲಾ ಸೌಖ್ಯವಾಗಿರುವುದು; ಯಾವ ಒಂದು ಸಂಸ್ಥೆ ಅಥವಾ ಕೋಮು ಕಷ್ಟಕ್ಕೀಡಾದರೂ ಕಾಲಕ್ರಮದಲ್ಲಿ ಸಮಾಜವೆಲ್ಲಾ ಕಷ್ಟಕ್ಕೆ ಈಡಾಗುವುದು. "ಸರ್ವೇಜನಾಸ್ಸುಖಿನೋ ಭವಂತು" ಎಂಬುದನ್ನು ನಾವು ನಿತ್ಯವೂ ಪಠಿಸುತ್ತಿದ್ದರೂ, ನಾವು ಆಚ ರಣೆಯಲ್ಲಿ ಅದನ್ನು ನಿರಾಕರಿಸಿರುವಷ್ಟು ಇನ್ನು ಯಾವ ದೇಶ ದವರೂ ನಿರಾಕರಿಸಿಲ್ಲ. ನಮ್ಮ ಆರ್ಥಿಕ ದುಃಸ್ಥಿತಿಯೂ, ರಾಜ ಕೀಯ ದುಃಸ್ಥಿತಿಯೂ ಅದರ ಪರಿಣಾಮ.

೫. **ಸರ್ಕಾರದ ಆಡಳಿತ ನ್ಯೂನತೆಯಿಂದ** ಬಡತನವು ಹುಟ್ಟಲೂ ಬಹುದು, ಹೆಚ್ಚಲೂ ಬಹುದು. ಒಂದು ಕೋಮಿನವರ ಪರವಾಗಿ ಅಥವಾ ಇನ್ನೊಂದು ಕೋಮಿನವರಿಗೆ ವಿರೋಧವಾಗಿ ಕಾನೂನನ್ನು ರಚಿಸುವುದು ಪ್ರತ್ಯಕ್ಷವಾಗಿ ಆಗಲಿ ಪರೋಕ್ಷವಾಗಿ ಆಗಲಿ ಬಡತನವನ್ನುಂಟುಮಾಡುವುದು. ಇದಕ್ಕೆ ಚರಿತ್ರೆಯಲ್ಲಿ ಅನೇಕ ನಿದರ್ಶನಗಳಿವೆ. ನಮ್ಮ ದೇಶದ ಕೈಗಾರಿಕೆಗಳು, ಅವುಗಳಲ್ಲಿಯೂ ನೆಯ್ಗೆಯ ಕೈಗಾರಿಕೆ, ಕ್ಷೀಣತೆಗೆ ಬಂದದ್ದು ನಮ್ಮ ದೇಶದ ಕೈಗಾರಿಕೆಗಳಿಗೆ ವಿರೋಧವಾಗಿ ಕಾನೂನನ್ನು ರಚಿಸಿದ್ದರಿಂದ; ನಮ್ಮ ಹಳ್ಳಿಯವರು ದರಿದ್ರರಾದುದು ಆಧುನಿಕ ಕಾನೂನುಗಳ ಮತ್ತು ನ್ಯಾಯ ವ್ಯವಸ್ಥೆಯ ತೊಡಕಿನಿಂದ. ಒಬ್ಬನು ಅರ್ಧ ಎಕರೆಗೆ ಇರುವ ಹಕ್ಕನ್ನು ಸ್ಥಾಪಿಸಲು ಹೊರಟು ಮನೆಮಠ ಆಸ್ತಿಪಾಸ್ತಿಗಳನ್ನೆಲ್ಲಾ ಕಳೆದುಕೊಳ್ಳುತ್ತಿರುವುದನ್ನು ನಾವು ನಿತ್ಯವೂ ನೋಡುತ್ತಿದ್ದೇವೆ. ನಮ್ಮ ದೇಶದಲ್ಲಿ ನ್ಯಾಯ ವಿಚಾರಣೆಯ ನೀತಿ ಬಹಳ ತೊಡಕಾದುದು, ದುಬಾರಿಯಾದುದು ಮತ್ತು ನಿಧಾನವಾದುದು. ಇದು ನಮ್ಮ ರೈತನಿಗೆ ಆಗ ಬರುವುದಿಲ್ಲ. ಕೋರ್ಟು ವ್ಯಾಜ್ಯಗಳು ವರ್ಷ ವರ್ಷಕ್ಕೂ ಹೆಚ್ಚುತ್ತ ಬಂದು ರೈತರು ಹಾಳಾಗುತ್ತಿದ್ದಾರೆ.[1]

ಇದರ ಜೊತೆಗೆ ದುಬಾರಿಯ ತೆರಿಗೆಗಳು ಕೂಡ ಜನರನ್ನು ಬಡವು ಮಾಡುತ್ತವೆ. ಶತ್ರುಬಾಧೆಯಿಂದ ಪಾರಾಗಲು ಪ್ರಪಂಚದ ಸರ್ಕಾರಗಳು ತಮ್ಮ ವರಮಾನದಲ್ಲಿ ಶೇಕಡ ೫೦ ರಿಂದ ೭೫ ರ ವರೆಗೆ ಖರ್ಚುಮಾಡುತ್ತಿರುವರಲ್ಲದೆ ಮೇಲಿನಿಂದ

[1] *The Indian Year Book* (1936–37), pp. 406–414. ೧೯೩೩ರಲ್ಲಿ ದಾಖಲಾದ ಸಿವಿಲ್ ದಾವೆಗಳು ೨.೭೮೭,೬೩೫. ಅಂದರೆ ೧೩೦ ಜನಕ್ಕೆ ಒಂದು ದಾವೆ. ದಾವೆಯ ಮೊಬಲಗು ರೂ. ೮೦೭,೪೨೧,೮೦೭

ಮೇಲೆ ಹೊಸ ಹೊಸ ತೆರಿಗೆಗಳನ್ನೂ ಹಾಕುತ್ತಿರುವರು. ಇದರಿಂದ ಸಮಾಜಾಭ್ಯುದಯ ಕಾರ್ಯಗಳು ನಿಂತುಹೋಗುತ್ತಿವೆ. ಶಸ್ತ್ರಾಸ್ತ್ರಗಳಿಗಾಗಿ ವೆಚ್ಚಮಾಡುತ್ತಿರುವ ಹಣದಲ್ಲಿ ಅರ್ಧಭಾಗವನ್ನು ರೋಗನಿವಾರಣೆಯ ಕೆಲಸಕ್ಕಾಗಿ ವಿನಿಯೋಗಿಸಿದರೆ ಪ್ರಪಂಚದ ಖಾಯಿಲೆ ಕಸಾಲೆಗಳನ್ನು ಬಹುಮಟ್ಟಿಗೆ ನಿರ್ಮೂಲಮಾಡಬಹುದು.

೬. **ವಿವೇಕವಿಲ್ಲದ ವಿದ್ಯಾಭ್ಯಾಸ**—ನಮ್ಮ ದೇಶದಲ್ಲಿ ವಿದ್ಯಾಭ್ಯಾಸದ ಗುರಿ ಮುಖ್ಯವಾಗಿ ಜನರನ್ನು ಅಕ್ಷರಸ್ಥರನ್ನಾಗಿ ಮಾಡುವುದಾಗಿದೆಯೇ ಹೊರತು ಜೀವನೋಪಾಯಕ್ಕೆ ದಾರಿಯನ್ನು ತೋರಿಸುವುದಾಗಿಲ್ಲ. ಹೀಗೆಂದರೆ, ವಿದ್ಯಾಭ್ಯಾಸವು ಬರಿಯ ವೃತ್ತಿಶಿಕ್ಷಣವಾಗಬೇಕೆಂದು ನಮ್ಮ ಮತವಲ್ಲ. ಸರಿಯಾದ ವಿದ್ಯಾಭ್ಯಾಸವು ನಮ್ಮ ಬುದ್ಧಿ ಶೀಲ ಕಲಾಕೌಶಲ್ಯಗಳನ್ನೂ ಕುದುರಿಸಬೇಕು. ಆದರೆ ಅವೆಲ್ಲವನ್ನು ಕುದುರಿಸಿ ವೃತ್ತಿಶಿಕ್ಷಣವನ್ನು ಮಾತ್ರ ಕೊಡದೆ ಹೋದರೆ ಅದು ಪೂರ್ಣವಾಗಿ ಫಲಕಾರಿಯಾಗುವುದಿಲ್ಲ. ದೇಶದ ಪ್ರತಿಯೊಬ್ಬ ಹುಡುಗನಿಗೂ ಒಂದು ವೃತ್ತಿಯನ್ನು ಕಲಿಸಲೇಬೇಕು, ಅವನ ಶರೀರವನ್ನೂ ಮನಸ್ಸನ್ನೂ ರೂಪುಗೊಳಿಸಬೇಕು, ಅವನ ಶೀಲವನ್ನು ತಿದ್ದಬೇಕು. ಇವುಗಳಲ್ಲಿ ಯಾವುದೊಂದನ್ನು ಮಾಡದೆ ಹೋದರೂ ವಿದ್ಯಾಭ್ಯಾಸವು ನಿಷ್ಫಲವಾಗುವುದು. ಈಗ ನಮ್ಮ ದೇಶದಲ್ಲಿ ಕೋಟ್ಯಂತರ ರೂಪಾಯಿಗಳನ್ನು ಖರ್ಚುಮಾಡಿ ಮಕ್ಕಳಿಗೆ ವಿದ್ಯಾಭಾಸಮಾಡಿಸುತ್ತಿದ್ದೇವೆ. ಆದರೆ ಅವರಿಗೆ ಒಂದು ಜೀವನೋಪಾಯಮಾರ್ಗವನ್ನು ತೋರಿಸದಿರುವುದರಿಂದ ಅವರ ಜೀವನದಲ್ಲಿ ಉತ್ಸಾಹವಿಲ್ಲದಂತಾಗಿದೆ. ಶ್ರೀಮಂತರ ಮಕ್ಕಳನ್ನು ಬಿಟ್ಟರೆ, ಕೆಲವು

ಕೋವಿಸವರ ಮಕ್ಕಳನ್ನು ಬಿಟ್ಟರೆ, ಪಾಠಶಾಲೆಗೆ ಹೋಗುವ ಪ್ರತಿಯೊಬ್ಬ ಹುಡುಗನಲ್ಲಿಯೂ ಅಸೂಯೆ, ಅತೃಪ್ತಿ, ನಿರಾಶೆ— ಇವು ಕ್ರಮಕ್ರಮವಾಗಿ ಹುಟ್ಟಿ ಬೆಳೆದು ಅವನು ಪಾಠಶಾಲೆ ಯನ್ನು ಬಿಡುವ ಹೊತ್ತಿಗೆ ಅವನ ಮಾನುಷತ್ವವು ಬೆಂಡುತೇಲಿ ಹೋಗುವುದು. ಸರಿಯಾಗಿ ವಿದ್ಯಾಭ್ಯಾಸ ಪಡೆದವನು ಸಮಾ ಜದ ಸಿರಿಯಾಗಬೇಕು, ತನಗೂ ತನ್ನ ದೇಶಕ್ಕೂ ಒಂದು ಹೊರೆಯಾಗಬಾರದು.

೭. **ವಿವೇಕವಿಲ್ಲದ ದಾನ**—ವಿದ್ಯಾಭ್ಯಾಸ ಹೆಚ್ಚಿದರೆ ದೇಶದ ಸಂಪತ್ತು ಹೆಚ್ಚುವುದೆಂದು ನೀರಿಕ್ಷಿಸುವುದು ಸಹಜ ವಾಗಿದೆ. ಆದರೆ ವಿದ್ಯಾಭ್ಯಾಸದ ಗುರಿ ಸರಿಯಾಗಿಲ್ಲದಿದ್ದರೆ ಅದರಿಂದ ದೇಶಕ್ಕೆ ನಷ್ಟವೇ ಹೆಚ್ಚು. ಅದೇ ರೀತಿಯಾಗಿ ದಾನ ಹೆಚ್ಚಿದರೆ ದಾರಿದ್ರ್ಯನಾಶವಾಗಬಹುದೆಂದು ನಿರೀಕ್ಷಿಸುವುದು ಸಹಜವಾದರೂ ವಿವೇಕವಿಲ್ಲದೆ ದಾನಮಾಡಿದರೆ ಅದರಿಂದ ದಾರಿದ್ರ್ಯ ಹೆಚ್ಚುವುದೇ ಹೊರತು ಕಡಮೆಯಾಗುವುದಿಲ್ಲ. ಇದಕ್ಕೆ ನಮ್ಮ ದೇಶದ ದಾನರೀತಿಯೇ ತಕ್ಕ ನಿದರ್ಶನ. ನಮ್ಮ ದೇಶದಲ್ಲಿರುವಷ್ಟು ದಾನ ಬುದ್ಧಿ ಇನ್ನು ಯಾವ ದೇಶದವರಿಗೂ ಇರುವುದಿಲ್ಲ. ಆದರೂ ನಮ್ಮಲ್ಲಿರುವಷ್ಟು ದರಿದ್ರರು ಇನ್ನು ಯಾವ ದೇಶದಲ್ಲೂ ಇರುವುದಿಲ್ಲ. ಆಸೇತು ಹಿಮಾಚಲವೂ ಇವರು ಇರುವೆಯ ಸಾಲಿನಂತೆ ಪ್ರತಿನಿತ್ಯವೂ ಹರಿದು ಹೋಗುತ್ತಿರುವುದನ್ನು ನೋಡುತ್ತಲೇ ಇದ್ದೇವೆ. ಇವರ ಸಂಖ್ಯೆ ವರ್ಷ ವರ್ಷಕ್ಕೂ ಹೆಚ್ಚುತ್ತಿದೆಯೇ ಹೊರತು ಇಳಿಯುತ್ತಿಲ್ಲ. ಇದಕ್ಕೆ ನಮ್ಮಲ್ಲಿ ಜನರು ವಿವೇಕವಿಲ್ಲದೆ ಭಿಕ್ಷ ನೀಡುವುದೇ ಕಾರಣ. ಬಹಳ ಕಷ್ಟದಶೆಯಲ್ಲಿರುವವನಿಗೆ, ಕುಂಟನಿಗೆ, ಕುರುಡ ನಿಗೆ, ಹೆಳವನಿಗೆ ದಾನಮಾಡುವುದು ನ್ಯಾಯ. ಆದರೆ ವಿವೇಚನೆ

ಇಲ್ಲದೆ ಕುರುಡನಿಗೂ ಒಂದು ಹಿಡಿ ಅಕ್ಕಿ ಹಾಕುತ್ತೇವೆ, ಗಟ್ಟಿ ಮುಟ್ಟಾದವನಿಗೂ ಒಂದು ಹಿಡಿ ಅಕ್ಕಿ ಹಾಕುತ್ತೇವೆ. ಇದರಿಂದ ಕೆಲಸಮಾಡಿ ಜೀವಿಸಬಲ್ಲವರು ಕೂಡ ತಿರಿದು ಹೊಟ್ಟೆತುಂಬಿ ಕೊಳ್ಳಲು ಅವಕಾಶವಾಗುವುದು. ಹೀಗೆ ಕೆಲಸಮಾಡದೆ ಭಿಕ್ಷ ದಿಂದ ಜೀವಿಸುವವರು ಹೆಚ್ಚಾದಷ್ಟೂ ದೇಶದ ದಾರಿದ್ರ್ಯವು ಹೆಚ್ಚುವುದು.

ಅಧ್ಯಾಯ ೨

ದಾನಧರ್ಮ

ದಾರಿದ್ರ್ಯನಿವಾರಣೆಗೆ ಅನೇಕ ಉಪಾಯಗಳಿವೆ. ಜನರಲ್ಲಿ ವಿದ್ಯಾ ಪ್ರಚಾರಮಾಡುವುದು ಒಂದು, ಆರೋಗ್ಯವನ್ನು ಉತ್ತಮಗೊಳಿಸುವುದು ಎರಡನೆಯದು, ಜನರ ಜೀವನೋಪಾಯಕ್ಕೆ ಸರಿಯಾದ ಮಾರ್ಗಗಳನ್ನು ಏರ್ಪಡಿಸುವುದು ಮೂರನೆಯದು, ಬಡತನಕ್ಕೆ ಕಾರಣವಾದ ಸಮಾಜ ಸನ್ನಿವೇಶಗಳನ್ನು ಕಾನೂನಿನ ಮೂಲಕ ಸರಿಪಡಿಸುವುದು ನಾಲ್ಕನೆಯದು, ದೇಶದ ಆರ್ಥಿಕಸ್ಥಿತಿಯನ್ನು ಉತ್ತಮಗೊಳಿಸಲು ಹೊಸ ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವುದು ಐದನೆಯದು. ಇವುಗಳೆಲ್ಲಕ್ಕಿಂತ ದಾನಧರ್ಮಗಳು ಮುಖ್ಯವಾದುವು; ಏಕೆಂದರೆ, ಈ ಐದು ಕೆಲಸಗಳನ್ನೂ ದಾನಧರ್ಮಗಳ ಮೂಲಕ ಸಾಧಿಸಬಹುದು. ಈ ದಾನಧರ್ಮಗಳನ್ನು ಎಲ್ಲ ಜನಾಂಗದವರೂ ಎಲ್ಲ ಮತದವರೂ ಪ್ರಶಂಸೆಮಾಡಿದ್ದಾರೆ, ಎಲ್ಲರೂ ಆಚರಣೆಗೆ ತರಲು ಯತ್ನಿಸಿದ್ದಾರೆ. ಆದರೆ ಇದರ ವಿಷಯದಲ್ಲಿ ಇಂಡಿಯಾ ದೇಶ

ದವರಿಗೆ ಇರುವಷ್ಟು ಅಭಿಮಾನ ಇನ್ನು ಯಾವ ಜನಾಂಗ ದವರಿಗೂ ಇರುವುದಿಲ್ಲ.

ಅನಾಥರಿಗೆ ಅಶಕ್ತರಿಗೆ ಬಡಬಗ್ಗರಿಗೆ ಮತ್ತು ಕಷ್ಟದಶೆ ಯಲ್ಲಿರುವವರಿಗೆ ನಾವೇ ನೇರವಾಗಿ ಸಹಾಯಮಾಡುವುದಕ್ಕೆ ದಾನ ಎಂದು ಹೆಸರು. ಹಾಗೆ ನೇರವಾಗಿ ಸಹಾಯಮಾಡದೆ ಒಂದು ಸಂಸ್ಥೆಯ ಮೂಲಕ ಪರೋಕ್ಷವಾಗಿ ಸಹಾಯಮಾಡು ವುದಕ್ಕೆ ಧರ್ಮವೆಂದು ಹೆಸರು. ದಾನಗಳಿಂದ ತಾತ್ಕಾಲಿಕವಾಗಿ ಅಲ್ಲೊಬ್ಬನಿಗೆ ಇಲ್ಲೊಬ್ಬನಿಗೆ ಮಾತ್ರ ಅನುಕೂಲವಾಗುವುದು; ಧರ್ಮಗಳಿಂದ ಅನೇಕರಿಗೆ ಚಿರಕಾಲ ಅನುಕೂಲವಾಗುವುದು. ದಾನ ಮಾಡುವುದರಲ್ಲಿ ವಿವೇಚನೆ ಇಲ್ಲದಿರುವಂತೆಯೇ ಧರ್ಮ ಮಾಡುವುದರಲ್ಲೂ ವಿವೇಚನೆ ಇಲ್ಲದಿರಬಹುದು.

೧. **ಉದ್ದೇಶ**—ವಿವೇಚನೆಯಿಂದ ವ್ಯವಸ್ಥೆಯಾದ ದಾನ ಧರ್ಮಗಳಿಗೆ ಈ ಉದ್ದೇಶಗಳಿರಬೇಕು—(೧) ನೀಡಿದ ಸಹಾಯವನ್ನು ಫಲಕಾರಿಯಾಗುವಂತೆ ನೋಡಿಕೊಳ್ಳುವುದು; (೨) ನಿಶ್ಶಕ್ತರನ್ನು ಶಕ್ತರನ್ನಾಗಿಮಾಡುವುದು, ಜೀವನಕ್ಕಿಲ್ಲ ದವರಿಗೆ ಜೀವನೋಪಾಯವನ್ನು ಕಲ್ಪಿಸುವುದು; (೩) ಬಡತನ ರೋಗ ದೌರ್ಜನ್ಯ ದುರ್ನಡತೆಗಳನ್ನು ನಿವಾರಿಸುವುದು; (೪) ವಿವೇಚನೆಯಿಲ್ಲದ ದಾನಗಳನ್ನು ತಪ್ಪಿಸಿ, ದಾನಧರ್ಮಗಳಿ ಗಾಗಿ ದೊರೆಯುವ ಹಣವನ್ನೂ ಆಸ್ತಿಪಾಸ್ತಿಗಳನ್ನೂ ಶೇಖರಿಸಿ, ರೂಢಿಸಿ ಸದ್ವಿನಿಯೋಗಮಾಡುವುದು; (೫) ಕೊನೆಯಲ್ಲಿ ದಾನದ ಆವಶ್ಯಕತೆಯೇ ಇಲ್ಲದಂತೆ ಸಮಾಜವನ್ನು ಸುಧಾರಿಸುವುದು. ಒಂದು ದೃಷ್ಟಿಯಿಂದ ದಾನಧರ್ಮಗಳು ಸಮಾಜದ ಪಾಪದ ಪ್ರಾಯಶ್ಚಿತ್ತಗಳು; ಪ್ರಾಯಶ್ಚಿತ್ತಗಳ ಉದ್ದೇಶ ಮುಂದೆ ಪಾಪಗಳನ್ನು ಮಾಡದಂತೆ ಮನಸ್ಸನ್ನು ಶುದ್ಧಿಗೊಳಿಸುವುದು.

೨. **ನಮ್ಮ ದೇಶದ ದಾನಧರ್ಮ**—ಉತ್ತಮವಾದ ದಾನಧರ್ಮಗಳಿಗೆ ಇರಬೇಕಾದ ಈ ಲಕ್ಷಣಗಳನ್ನು ಮನಸ್ಸಿನಲ್ಲಿಟ್ಟುಕೊಂಡು ನಮ್ಮ ದೇಶದ ದಾನಧರ್ಮಗಳನ್ನು ಪರೀಕ್ಷಿಸಿದರೆ ನಮ್ಮ ದಾನಧರ್ಮಗಳು ಎಷ್ಟು ಅಪಾರವಾಗಿವೆಯೋ ಅಷ್ಟೂ ವಿವೇಚನೆ ಇಲ್ಲದವಾಗಿವೆ, ವ್ಯವಸ್ಥೆ ಇಲ್ಲದವಾಗಿವೆ ಎಂಬುದು ವಿಶದಪಡುವುದು.

ನಮ್ಮ ದೇಶದಲ್ಲಿ ದಾನಧರ್ಮಗಳಿಗೆ ಕೊರತೆಯಿಲ್ಲ. ಇದಕ್ಕಾಗಿ ಅದು ಪ್ರಖ್ಯಾತಿಪಡೆದಿದೆ. ಎಷ್ಟು ಬಡವನಾದರೂ ಮನೆಯ ಬಾಗಿಲಿಗೆ ಬಂದ ಭಿಕ್ಷುಕನಿಗೆ ಒಂದು ಹಿಡಿ ಅಕ್ಕಿಯನ್ನಾಗಲಿ, ರಾಗಿಯ ಹಿಟ್ಟನ್ನಾಗಲಿ ಹಾಕದೆ ಇರುವುದು ಅಪರೂಪ. ಇಂಡಿಯಾ ದೇಶದಲ್ಲಿ ಬಡವರ ಕಷ್ಟನಿವಾರಣೆಯ ಕಾನೂನು ಇದೆ. ಆದರೆ ಅದು ಇಂಡಿಯಾ ಸರ್ಕಾರದವರ ಕಾನೂನಿನ ಕಡತದಲ್ಲಿಲ್ಲ; ಇಂಡಿಯಾ ದೇಶದ ಜನರ ಹೃದಯಾಂತರಾಳದಲ್ಲಿದೆ. ಕಾನೂನಿಲ್ಲದೆ ಕೇವಲ ಧರ್ಮಬುದ್ಧಿಯಿಂದ ಬಡವರಿಗೆ ಸಹಾಯಮಾಡುವುದು ನಿಜವಾಗಿಯೂ ಶ್ಲಾಘನೀಯವಾದುದು. ಈ ದಾನ ಧರ್ಮಬುದ್ಧಿ ಇಲ್ಲದಿದ್ದರೆ ನಮ್ಮ ದೇಶದ ಬಡತನ ಇನ್ನೂ ಘೋರತರವಾಗಬಹುದಾಗಿತ್ತು.

ಆದರೂ ನಮ್ಮವರು ಭಿಕ್ಷೆಕೊಡುವ ರೀತಿಯಲ್ಲಿ ಅನೇಕ ಲೋಪದೋಷಗಳಿವೆ. ವಿಚಕ್ಷಣೆಯಿಲ್ಲದೆ ಭಿಕ್ಷೆಕೊಡುವುದರಿಂದ ನಾವು ತಿರುಕರ ಸಂಖ್ಯೆಯನ್ನು ಹೆಚ್ಚಿಸಿದ್ದೇವೆ; ತಿರಿಯುವುದನ್ನೇ ಒಂದು ಕಸಬಾಗಿ ಸ್ಥಾಪಿಸಿದ್ದೇವೆ. ಛತ್ರ ಮಠ ದೇವಸ್ಥಾನಗಳಲ್ಲಿ ಸರಿಯಾದ ವ್ಯವಸ್ಥೆಯಿಲ್ಲದೆ ಹಣಕಾಸುಗಳು ದುರುಪಯೋಗವಾಗುತ್ತಿವೆ. ಯಾರಿಗೆ ಅನ್ನೋದಕಗಳು ದೊರೆಯಬೇಕೋ ಅಂಥವರಿಗೆ ದೊರೆಯುತ್ತಿಲ್ಲ. ಅದೂ ಅಲ್ಲದೆ ನಮ್ಮ

ದೇಶದಲ್ಲಿ ದೊರೆಯುತ್ತಿರುವ ದಾನಧರ್ಮಗಳನ್ನು ಅನ್ನ ಹಾಕುವುದಕ್ಕೆ ಮಾತ್ರ ವಿನಿಯೋಗಿಸುತ್ತಿದ್ದೇವೆ: ಅನಾರೋಗ್ಯ, ಅನಕ್ಷರತೆ, ದೌರ್ಜನ್ಯ, ಕುಡುಕತನ—ಇವುಗಳನ್ನು ತಡೆಯಲು ಸ್ವಲ್ಪಮಟ್ಟಿಗಾದರೂ ವಿನಿಯೋಗಿಸದೆ ಇರುವುದು ನಮ್ಮ ದಾನ ಧರ್ಮ ದೃಷ್ಟಿಯ ಒಂದು ದೊಡ್ಡ ನ್ಯೂನತೆ. ಈ ವಿಚಾರದಲ್ಲಿ ಕೆಲವು ಪಾಶ್ಚಾತ್ಯ ದೇಶಗಳ ದಾನಧರ್ಮ ಸಂಸ್ಥೆಗಳು ನಮಗೆ ಮಾರ್ಗದರ್ಶಕಗಳಾಗಿವೆ.

೩. **ಇಂಗ್ಲೆಂಡಿನ 'ಪೂರ್ ಲಾ'**—ಈಗ ಕೆಲವು ಪಾಶ್ಚಾತ್ಯ ದೇಶಗಳಲ್ಲಿ ದಾನಧರ್ಮ ಸಂಸ್ಥೆಗಳು ಬಹಳ ಚೆನ್ನಾಗಿ ವ್ಯವಸ್ಥೆಯಾಗಿವೆಯಾದರೂ ಕಳೆದ ಶತಮಾನದ ಆದಿಯಲ್ಲಿ ನಮ್ಮ ಸಂಸ್ಥೆಗಳಂತೆಯೇ ಅನಾಯಕತ್ವದಲ್ಲಿದ್ದುವು. ಯೂರೋಪಿನಲ್ಲಿ ಎಲ್ಲೆಲ್ಲೂ ಭಿಕ್ಷುಕರ ಸಂಖ್ಯೆ ಹೆಚ್ಚಿತ್ತು. ಇದನ್ನು ನಿವಾರಿಸಲು ಮೊದಲು ಮಾಡಿದವರು ಇಂಗ್ಲೆಂಡಿನವರು. ತಿರಿಯುವುದನ್ನು ತಪ್ಪಿಸಲೂ, ಬಡವರನ್ನು ರಕ್ಷಿಸಲೂ ಕಾನೂನುಗಳನ್ನು ರಚಿಸಿದರು. ಬಡವರಿಗಾಗಿಯೇ ವಾಸಗೃಹಗಳನ್ನೇರ್ಪಡಿಸಿ, ತಿರುಕರನ್ನು ಕಾಪಾಡುವ ಕೆಲಸವನ್ನು ಸರ್ಕಾರದವರೇ ವಹಿಸಿಕೊಂಡರು. ಇದರ ಖರ್ಚು ವರ್ಷ ವರ್ಷಕ್ಕೂ ಏರುತ್ತ ಬಂದು ೧೮೧೮ರಲ್ಲಿ ಇಂಗ್ಲೆಂಡಿನ ಸರ್ಕಾರದವರು ಬಡವರ ರಕ್ಷಣೆಗಾಗಿ ೮,೭೭೦,೮೦೭ ಪೌಂಡುಗಳನ್ನು ವಿನಾಸಲಾಗಿ ತೆಗೆದಿಡಬೇಕಾಯಿತು. ಇಷ್ಟು ಖರ್ಚು ಮಾಡಿದರೂ ಅವರ ಆಡಳಿತದಲ್ಲಿ ಇರಬೇಕಾದ ಪ್ರೇಮಮನೋವೃತ್ತಿ ಇಲ್ಲದ್ದರಿಂದ ಅವರ ಬಡಜನರ ರಕ್ಷಣೆಯ ಕೆಲಸವು ಸಮರ್ಪಕವಾಗಲಿಲ್ಲ.

೪. **ಹ್ಯಾಂಬರ್ಗ್ ಏರ್ಪಾಡು**—ಆದರೆ ಅದೇ ಕಾಲದಲ್ಲಿ ಜರ್ಮನಿಯ ಮುನಿಸಿಪಾಲಿಟಿಗಳೂ ಸರ್ಕಾರವೂ ಸೇರಿ

ದಾರಿದ್ರ್ಯ ನಿವಾರಣೆಗಾಗಿ ರಚಿಸಿದ ಕ್ರಮವು ಹೆಚ್ಚು ಫಲಕಾರಿಯಾಗಿ ಪರಿಣಮಿಸಿತು. ಈ ಕ್ರಮವು ಹುಟ್ಟಿದುದು ಹ್ಯಾಂಬರ್ಗ್ ಪಟ್ಟಣದಲ್ಲಿ. ಇದನ್ನು ರಚಿಸಿದವನು ಪ್ರೊಫೆಸರ್ ಬೂಷ್. ಅವನು ಬಡವರ ಸಂರಕ್ಷಣೆಗಾಗಿ ಹ್ಯಾಂಬರ್ಗಿನಲ್ಲಿ ಒಂದು ಕೇಂದ್ರ ಸಂಸ್ಥೆಯನ್ನು ಏರ್ಪಡಿಸಿ, ಆ ಪಟ್ಟಣವನ್ನು ಅನೇಕ ಭಾಗಗಳಾಗಿ ವಿಂಗಡಿಸಿ ಒಂದೊಂದಕ್ಕೂ ಒಬ್ಬ ಮೇಲ್ವಿಚಾರಕನನ್ನು ಚುನಾಯಿಸಿ ಅವನಿಗೆ ನಿರ್ದಿಷ್ಟವಾದ ಕೆಲಸಗಳನ್ನು ನಿಯಮಿಸಿದನು. ತನ್ನ ಸರಹದ್ದಿನಲ್ಲಿ ತಿರುಕರಿಗೆ ಭಿಕ್ಷನೀಡದಂತೆ ಮಾಡುವುದು, ಕೆಲಸವಿಲ್ಲದವರಿಗೆ ಕೆಲಸವನ್ನು ಕೊಡಿಸುವುದು, ಬಡವರ ಮಕ್ಕಳನ್ನು ಕೈಗಾರಿಕೆಯ ಪಾಠಶಾಲೆಗೆ ಸೇರಿಸುವುದು, ಖಾಯಿಲೆಯವರ ಚಿಕಿತ್ಸೆಗೆ ಏರ್ಪಾಡುಮಾಡುವುದು, ಕುರುಡ ಹೆಳವರ ಅನ್ನವಸತಿಗಳಿಗೆ ಮಾರ್ಗಮಾಡುವುದು—ಇವೆಲ್ಲಾ ಈ ಮೇಲ್ವಿಚಾರಕನ ಕೆಲಸಗಳು. ಇವುಗಳನ್ನು ಸರಿಯಾಗಿ ನೆರವೇರಿಸಲು ತಕ್ಕ ಸಹಾಯ ಸೌಕರ್ಯಗಳನ್ನು ಒದಗಿಸುವುದು ಕೇಂದ್ರಸಂಸ್ಥೆಯ ಕರ್ತವ್ಯ.

ಈ ಸಂಸ್ಥೆಯು ಹದಿಮೂರು ವರ್ಷಗಳ ಕಾಲ ಬಹಳ ಯಶಸ್ವಿಯಾಗಿ ನಡೆದುಕೊಂಡು ಬಂತು. ಇದರಿಂದ ದಿವಾಳಿತನ ಪೂರ್ಣವಾಗಿ ನಶಿಸಿಹೋಯಿತು; ಕೆಲಸಮಾಡಿ ಜೀವಿಸ ಬಲ್ಲವರಿಗೆಲ್ಲಾ ಕೆಲಸ ದೊರೆಯಿತು; ಭಿಕ್ಷುಕರ ಹುಟ್ಟಡಗಿ ಹೋಯಿತು; ಜನರು ಸ್ವಾವಲಂಬನೆಯಿಂದ ಜೀವಿಸಲು ಸಾಧ್ಯವಾಯಿತು. ಹದಿಮೂರು ವರ್ಷಗಳ ಕಾಲ ಚೆನ್ನಾಗಿ ಕೆಲಸ ಮಾಡಿದ ಮೇಲೆ ಇದು ಸ್ವಲ್ಪ ದುರವಸ್ಥೆಗೆ ಇಳಿಯಿತು. ಆದರೆ ಅದು ಜಾಗ್ರತೆಯಾಗಿ ಮತ್ತೆ ಚೇತರಿಸಿಕೊಂಡಿತು.

೫. **ಎಲ್ಬರ್‌ಫೀಲ್ಡ್** ಎಂಬ ಇನ್ನೊಂದು ಪಟ್ಟಣದ

ಮುನಿಸಿಪಾಲಿಟಿಯುವರು ಈ ಹ್ಯಾಂಬರ್ಗ್ ಕ್ರಮವನ್ನು ಇನ್ನೂ ಉತ್ತಮಗೊಳಿಸಿ ಅದನ್ನು ೧೮೫೨ರಲ್ಲಿ ತಮ್ಮ ಪಟ್ಟಣದಲ್ಲಿ ಜಾರಿಗೆ ತಂದರು. ಇವರು ತಮ್ಮ ಪಟ್ಟಣವನ್ನು ಮುನ್ನೂರು ಮುನ್ನೂರು ಜನರ ಶ್ರೇಣಿಗಳಾಗಿ ವಿಭಾಗಿಸಿ, ಒಂದೊಂದು ಶ್ರೇಣಿಗೂ ನಾಲ್ಕರಂತೆ ದಿವಾಳಿಗಳನ್ನು ಹಂಚಿ ಅವರ ಯೋಗ ಕ್ಷೇಮವನ್ನು ನೋಡಿಕೊಳ್ಳಲು ಆಲ್ಮನರ್ ಎಂಬ ಮೇಲ್ವಿಚಾರಕನನ್ನು ನೇಮಿಸಿದರು. ದಿವಾಳಿಗಳ ಕಷ್ಟಸುಖಗಳನ್ನೂ ಆದಾಯವೆಚ್ಚಗಳನ್ನೂ ಕೂಲಂಕಷವಾಗಿ ವಿಚಾರಿಸಿ ಕಾನೂನಿನ ಪ್ರಕಾರ ಧನಸಹಾಯ ಮಾಡುವುದು; ದಿವಾಳಿಯಾಗ ಬಹುದಾದ ಸಂಸಾರಗಳಿಗೆ ಸಕಾಲದಲ್ಲಿ ಎಚ್ಚರಿಕೆ ಕೊಟ್ಟು ಅವರನ್ನು ದಿವಾಳಿತನದಿಂದ ತಪ್ಪಿಸುವುದು; ಕೆಲಸವಿಲ್ಲದವರಿಗೆ ಕೆಲಸಕೊಡಿಸುವುದು; ಯಾವ ವಿಧದಲ್ಲೂ ತಿದ್ದಲಾಗದವರನ್ನು ಹಿಡಿದು ಸರ್ಕಾರದ ವಶಕ್ಕೊಪ್ಪಿಸುವುದು—ಇವೇ ಆಲ್ಮನರು ಮಾಡಬೇಕಾದ ಕೆಲಸಗಳು. ಆಲ್ಮನರಾಗಿ ಕೆಲಸ ಮಾಡಲು ಯೋಗ್ಯನೆಂದು ಯಾರನ್ನಾದರೂ ಮುನಿಸಿಪಾಲಿಟಿಯುವರು ಚುನಾಯಿಸಿದರೆ, ಯಾವ ಸಬೂಬನ್ನೂ ಹೇಳದೆ ಆ ಕೆಲಸವನ್ನು ಅವನು ಮೂರು ವರ್ಷಕಾಲ ಮಾಡಬೇಕೆಂಬುದು ಮುನಿಸಿಪಾಲಿಟಿಯ ಕಟ್ಟಾಜ್ಞೆ. ಹಾಗೆ ಮಾಡಲು ಒಪ್ಪದಿದ್ದರೆ ಅವನಿಗೆ ಪೌರನ ಹಕ್ಕುಬಾಧ್ಯತೆಗಳನ್ನು ತಪ್ಪಿಸಿ ಹೆಚ್ಚು ಕಂದಾಯ ಹೊರಿಸುವ ಅಧಿಕಾರವನ್ನು ಮುನಿಸಿಪಾಲಿಟಿ ಪಡೆದಿತ್ತು. ಆದರೆ ಈ ರೀತಿಯ ಶಿಕ್ಷೆಯನ್ನು ವಿಧಿಸುವ ಸಂದರ್ಭವೇ ಮುನಿಸಿಪಾಲಿಟಿಗೆ ಒದಗಲಿಲ್ಲ. ಆಲ್ಮನರ್ ಕೆಲಸವನ್ನು ಈಗ ಕೂಡ ಬಹಳ ಹೆಮ್ಮೆಯಿಂದಲೂ ಶ್ರದ್ಧೆಯಿಂದಲೂ ಅಲ್ಲಿಯ ಪುರಜನರು ನೆರವೇರಿಸುತ್ತಿರುವರು. ಕೆಲವು ವರ್ಷಗಳ ಹಿಂದೆ ಮುನಿಸಿಪಾಲಿಟಿ

ಯವರು ನೇಮಿಸಿದ ೬೦೦ ಜನ ಆಲ್ಮನರುಗಳಲ್ಲಿ ಒಬ್ಬನು ೪೯ ವರ್ಷಗಳ ಕಾಲವೂ ೧೯ ಜನ ೩೦ ವರ್ಷಗಳಿಗೆ ಮೇಲ್ಪಟ್ಟೂ ೮೧ ಜನ ೨೦ ವರ್ಷಗಳಿಗೆ ಮೇಲ್ಪಟ್ಟೂ ೨೬೮ ಜನ ಹತ್ತು ವರ್ಷಗಳಿಗೆ ಮೇಲ್ಪಟ್ಟೂ ಆಲ್ಮನರಾಗಿ ಕೆಲಸ ಮಾಡಿದವರಿದ್ದರು. ಇದನ್ನು ನೋಡಿದರೆ ಆಲ್ಮನರ್ ಕೆಲಸವು ಎಷ್ಟು ಗೌರವಯುತವಾದುದು ಮತ್ತು ಅದನ್ನು ಎಲ್ಬರ್ ಫೀಲ್ಡಿನವರು ಎಷ್ಟು ವಿಚಕ್ಷಣೆಯಿಂದ ನಿರ್ವಹಿಸುತ್ತಿರುವರು ಎಂಬುದು ವಿಶದಪಡುವುದು. ಇದಿಷ್ಟು ಶ್ರೇಣಗಳ ರಚನೆ ಮತ್ತು ಕೆಲಸದ ಮಾತಾಯಿತು. ಇಂಥ ೧೪ ಶ್ರೇಣಿಗಳನ್ನು ಸೇರಿಸಿದರೆ ಅದು ಒಂದು ಜಿಲ್ಲೆ. ಅದಕ್ಕೊಬ್ಬ ಮೇಲ್ವಿಚಾರಣೆಯ ಅಧಿಕಾರಿ ಇರುತ್ತಾನೆ. ತನ್ನ ಜಿಲ್ಲೆಯ ಆಲ್ಮನರುಗಳನ್ನು ಪಕ್ಷಕ್ಕೊಂದು ಸಲ ಸಭೆ ಸೇರಿಸಿ ಒಬ್ಬೊಬ್ಬರ ವರದಿಯನ್ನೂ ಪರಿಶೀಲಿಸಿ ತನ್ನ ವರದಿಯನ್ನು ಕೇಂದ್ರ ಸಮಿತಿಗೆ ಕಳುಹಿಸುವುದು ಇವನ ಕೆಲಸ.

ಜಿಲ್ಲೆಗಳ ಕೆಲಸವನ್ನು ಸಮನ್ವಯಪಡಿಸುವುದಕ್ಕಾಗಿ ಒಂದು ಕೇಂದ್ರಸಮಿತಿ ಇದೆ. ಇದರಲ್ಲಿ ಒಂಭತ್ತು ಜನ ಸದಸ್ಯರಿರುವರು. ಹದಿನೈದು ದಿನಕ್ಕೊಂದು ಸಲ ಜಿಲ್ಲೆಯ ಸಭೆ ಸೇರಿದ ಮರುದಿವಸವೇ ಇವರು ಸೇರಿ ಕಾರ್ಯಾಲೋಚನೆ ಮಾಡುವರು.

ಎಲ್ಬರ್ ಫೀಲ್ಡಿನ ಕ್ರಮವು ಚೆನ್ನಾಗಿ ನಡೆಯುವುದಕ್ಕೆ ಕೆಲವು ಮುಖ್ಯ ಕಾರಣಗಳಿವೆ—(೧) ನಿಜವಾಗಿಯೂ ಈ ಕೆಲಸದಲ್ಲಿ ಶ್ರದ್ಧೆಯಿರುವವರನ್ನೇ ಮತ್ತು ಅದನ್ನು ವಿಚಕ್ಷಣತೆಯಿಂದ ನಡಸಬಲ್ಲವರನ್ನೇ ಆಲ್ಮನರಾಗಿ ಚುನಾಯಿಸುತ್ತಾರೆ. (೨) ಒಬ್ಬೊಬ್ಬ ಆಲ್ಮನರಿಗೂ ನಾಲ್ಕು ಮಂದಿ ದಿವಾಳಿಗಳನ್ನು ಹಂಚಿ ಹಾಕಿದ್ದರಿಂದ ಅವನಿಗೆ ಇವರ ಪರಿಚಯ ಮಾಡಿಕೊಳ್ಳುವುದು ಕಷ್ಟವಾಗುವುದಿಲ್ಲ ; ಯುಕ್ತವಾದ ಸಲಹೆಗಳನ್ನೂ ತಕ್ಕ ಸಹಾ

ಯುವನ್ನೂ ಕೊಡಲು ಸಾಧ್ಯವಾಗುವುದು. (೩) ಒಂದೊಂದು ಶ್ರೇಣಿಯಲ್ಲೂ ೩೦೦ ಜನಕ್ಕಿಂತ ಹೆಚ್ಚಾಗಿಲ್ಲದಿರುವುದರಿಂದ ದಿವಾಳಿ ಆಗಬಹುದಾದ ಸಂಸಾರವನ್ನು ಸುಲಭವಾಗಿ ಕಂಡು ಹಿಡಿದು ಸಕಾಲದಲ್ಲಿ ದಿವಾಳಿ ತನದಿಂದ ಪಾರು ಮಾಡಲು ಸಾಧ್ಯವಾಗುತ್ತದೆ. (೪) ಇವೆಲ್ಲಕ್ಕಿಂತಲೂ ಜನರಲ್ಲಿ ಸ್ವಾವಲಂಬನೆಯನ್ನು ಸ್ಥಾಪಿಸಿದುದು ಈ ಕ್ರಮವು ಯಶಸ್ವಿಯಾಗಿ ನಡೆಯುವುದಕ್ಕೆ ಮುಖ್ಯಕಾರಣ.

೬. **ಅಮೇರಿಕದ ಏರ್ಪಾಡುಗಳು**—ಜರ್ಮನಿಯಲ್ಲಿ ಎಲ್ಬರ್ ಫೀಲ್ಡ್ ವ್ಯವಸ್ಥೆ ಪ್ರಖ್ಯಾತಿಪಡೆದಿರುವಂತೆಯೇ ಸಂಯುಕ್ತ ಸಂಸ್ಥಾನಗಳಲ್ಲಿ ಇಂಡಿಯಾನಾ ಪ್ರಾಂತದ ಶಿಸ್ತೂ ಬಫೆಲೊ ದಾನ ಪದ್ಧತಿಯೂ ಪ್ರಖ್ಯಾತಿಪಡೆದಿವೆ. ಅವುಗಳನ್ನು ಇಲ್ಲಿ ವಿವರಿಸಲು ಅವಕಾಶವಿಲ್ಲದಿದ್ದರೂ ದಾನ ಸಂಸ್ಥೆಗಳನ್ನು ಒಟ್ಟುಗೂಡಿಸಲು ಅಮೇರಿಕದವರು ಮಾಡಿರುವ ಪ್ರಯತ್ನದ ವಿಚಾರವಾಗಿ ಒಂದು ಮಾತನ್ನಾದರೂ ಹೇಳಬೇಕಾದುದು ಆವಶ್ಯಕ. ಒಂದೇ ಪಟ್ಟಣದಲ್ಲಿ ನೂರಾರು ಧಾನಧರ್ಮ ಸಂಸ್ಥೆಗಳಿರುವುದುಂಟು. ಇವುಗಳಲ್ಲಿ ಕೆಲವು ಪೋಟಾ ಸಂಸ್ಥೆಗಳಾಗಿರಬಹುದು; ಇನ್ನು ಕೆಲವು ಸಂಸ್ಥೆಗಳು ಹಣ ಸಂಕೋಚದಿಂದ ಸಾಕಾದಷ್ಟು ಸಹಾಯಮಾಡಲು ಅಶಕ್ತವಾದುವುಗಳಾಗಿರಬಹುದು; ಇತರ ಸಂಸ್ಥೆಗಳಲ್ಲಿ ಹಣ ಹೆಚ್ಚಾಗಿದ್ದರೂ ಕೆಲಸಮಾಡುವವರು ಕಡಮೆ ಇರಬಹುದು; ಅನೇಕ ಬಡವರಿಗೆ ಯಾವ ಸಂಸ್ಥೆಯಿಂದಲೂ ಸಹಾಯ ದೊರೆಯದಿರಬಹುದು; ಕೆಲವರಿಗೆ ನಾಲ್ಕಾರು ಸಂಸ್ಥೆಗಳಿಂದ ಅವರಿಗೆ ಬೇಕಾದುದಕ್ಕಿಂತ ಹೆಚ್ಚಾಗಿ ಸಹಾಯ ದೊರೆಯುತ್ತಿರಬಹುದು; ಇಂಥ ಕುಂದುಕೊರತೆಗಳನ್ನು ನೀಗುವುದಕ್ಕೂ ಪೋಟಾ

ಸಂಸ್ಥೆಗಳನ್ನು ಬಯಲಿಗೆಳೆದು ಸಾಚಾ ಸಂಸ್ಥೆಗಳನ್ನೆಲ್ಲ ಒಂದು ಗೂಡಿಸಿ ಒಂದು ಸಂಘವನ್ನು ಏರ್ಪಡಿಸಿರುವರು. ಈ ಸಂಘ ದವರು ಪಟ್ಟಣದಲ್ಲಿರುವ ದರಿದ್ರರ ಮತ್ತು ದಿವಾಳಿಗಳ ಸಂಖ್ಯೆ ಯನ್ನೂ ಅವರ ಸ್ಥಿತಿಗಳನ್ನೂ ಚೆನ್ನಾಗಿ ನಿರ್ಧರಿಸಿ ಯಾವ ಯಾವ ಸಂಸ್ಥೆಗಳಿಂದ ಎಂಥೆಂಥ ಸಹಾಯವಾಗಬಹುದು, ಯಾರು ಯಾರಿಗೆ ಎಷ್ಟೆಷ್ಟು ಸಹಾಯ ಕೊಡಬಹುದು ಎಂಬ ವಿಷಯ ಗಳನ್ನು ಪರಿಶೀಲಿಸಿ ದಾನಧರ್ಮಗಳ ನಿಧಿ ಪೋಲಾಗದಂತೆ ನೋಡಿಕೊಳ್ಳುತ್ತಿರುವರು.

ಜರ್ಮನಿ ಮತ್ತು ಅಮೇರಿಕ ದೇಶಗಳಲ್ಲಿ ದಾನಧರ್ಮಗಳನ್ನು ವ್ಯವಸ್ಥೆಗೊಳಿಸಿರುವಂತೆಯೇ ನಮ್ಮ ದೇಶದಲ್ಲೂ ಮಾಡಿದರೆ, ನಮ್ಮಲ್ಲಿರುವ ಅತಿಶಯವಾದ ದಾನಶೀಲತೆಯನ್ನೂ ದಾನ ಧರ್ಮಗಳ ಅಪಾರವಾದ ನಿಧಿಗಳನ್ನೂ ಸೌಕರ್ಯಗಳನ್ನೂ ವಿಚಕ್ಷಣೆಯಿಂದ ಸಮನ್ವಯ ಮಾಡಿದರೆ, ಬೆಟ್ಟದ ಹಾಗೆ ಬೆಳೆ ದಿರುವ ನಮ್ಮ ಬಡತನವೂ ಭಿಕಾರಿತನವೂ ಮಂಜಿನ ಹಾಗೆ ಕರಗುವುವು. ಬರಿಯ ಕಾನೂನಿನಿಂದ ಇವುಗಳನ್ನು ನಿವಾರಣೆ ಮಾಡಲು ಯತ್ನಿಸುವುದು ಸರ್ವಥಾ ಅನುಚಿತವೆಂಬುದು ಇಂಗ್ಲೆಂಡಿನ ಚರಿತ್ರೆಯಿಂದ ದೃಢಪಡುವುದು. ಇಂಗ್ಲೆಂಡನ್ನು ಅನುಕರಿಸಿ ನಮ್ಮ ದೇಶದ ರಾಜಕೀಯ ಮುಖಂಡರು ಭಿಕ್ಷುಕರ ಮತ್ತು ಭಿಕಾರಿಗಳ ವಿಚಾರವಾಗಿ ಕಾನೂನುಗಳನ್ನು ಏರ್ಪಡಿ ಸುವ ಪ್ರಯತ್ನ ಮಾಡುತ್ತಿರುವರು. ಇಂಥ ಕಾನೂನುಗಳು ನಮ್ಮ ದೇಶದಲ್ಲಿ ವಿನಾಶಕರವಾಗಿ ಪರಿಣಮಿಸುವುವು. ಇದಕ್ಕೆ ಬದಲು ಮುನಿಸಿಪಾಲಿಟಿಗಳು ಬಡವರ ರಕ್ಷಣೆಯ ಏರ್ಪಾ ಡನ್ನು ಕೈಕೊಳ್ಳುವುದೂ ನಮ್ಮಲ್ಲಿರುವ ದಾನಧರ್ಮ ವ್ಯವಸ್ಥೆ ಗಳನ್ನು ತಿದ್ದಿ ಬಲಪಡಿಸುವ ಪ್ರಯತ್ನಮಾಡುವುದೂ ನಮಗೆ

ಹೆಚ್ಚು ಶ್ರೇಯಸ್ಕರವಾದುದು. ಈ ವಿಚಾರದಲ್ಲಿ ಮುನಿಸಿಪಾಲಿಟಿಗಳನ್ನೂ ಮಠಾಧಿಪತಿಗಳನ್ನೂ ಮಹಾಂತರನ್ನೂ ಧರ್ಮದರ್ಶಿಗಳನ್ನೂ ಎಚ್ಚರಗೊಳಿಸುವುದು ಅತ್ಯಾವಶ್ಯಕ. ರಾಜಕೀಯ ಚಳುವಳಿಗಾಗಿ ಮಾಡುತ್ತಿರುವ ಪ್ರಯತ್ನದಲ್ಲಿ ನೂರರಲ್ಲಿ ಒಂದು ಪಾಲು ಇವರನ್ನು ಎಚ್ಚರಗೊಳಿಸಲು ನಡೆದರೆ ನಮ್ಮ ಸಮಾಜದ ಕುಂದುಕೊರತೆಗಳು ಬಹು ಮಟ್ಟಿಗೆ ನಿವಾರಣೆಯಾಗುವುವು. ಮತಸಂಸ್ಥೆಗಳನ್ನು ಎಚ್ಚರಗೊಳಿಸುವುದಕ್ಕಿಂತ ಹಳ್ಳಿಹಳ್ಳಿಯಲ್ಲೂ ಪಂಚಾಯತಿ ಸಂಸ್ಥೆಗಳನ್ನು ಪುನರುತ್ಥಾನಮಾಡಿ ಹಿಂದಿನಂತೆ ಅವುಗಳಿಂದ ಕೆಲಸಮಾಡಿಸುವುದು ಹೆಚ್ಚು ಫಲಪ್ರದಾಯಕವಾದದ್ದು. ಇವುಗಳನ್ನು ವ್ಯವಸ್ಥೆಗೊಳಿಸಲು ಮಾತ್ರ ನಾವು ಸರ್ಕಾರದ ಮತ್ತು ಕಾನೂನಿನ ಸಹಾಯವನ್ನು ಪಡೆಯುವುದು ನ್ಯಾಯವಾಗಿದೆ.

ಅಧ್ಯಾಯ ೩

ದುಷ್ಕೃತ್ಯ (Crime)

ಬಡತನವನ್ನು ಬಿಟ್ಟರೆ ದುಷ್ಕೃತ್ಯವು ಸಮಾಜದ ರೋಗಗಳಲ್ಲಿ ಎರಡನೆಯದು. ಇದರ ಪ್ರಮಾಣವನ್ನು ನಿರ್ಧರಿಸುವುದು ಕಷ್ಟ. ಕೋರ್ಟಿನಲ್ಲಿ ವಿಧಿಸಿದ ಜುಲ್ಮಾನೆ ಸಜಾಗಳಿಂದ ಸ್ವಲ್ಪ ಮಟ್ಟಿಗೆ ಇದರ ವ್ಯಾಪ್ತಿಯನ್ನು ನಿರ್ಧರಿಸಬಹುದು. ಪರಂಗಿಯವರಿಗೆ ಕ್ರಿಕೆಟ್ ಫುಟ್‌ಬಾಲ್ ಹಾಕಿ ಪಂದ್ಯಗಳಲ್ಲಿ ಎಷ್ಟು

ಉತ್ಸಾಹವೋ ನಮ್ಮ ಜನಗಳಿಗೆ ಕೋರ್ಟು ವ್ಯಾಜ್ಯಗಳಲ್ಲಿ ಅಷ್ಟೇ ಉತ್ಸಾಹ. ೧೯೩೩ರಲ್ಲಿ ಇಂಡಿಯಾ ದೇಶದ ಕೋರ್ಟುಗಳಲ್ಲಿ ದಾಖಲಾದ ದಾವಾಗಳಿಂದಲೂ ಕೇಸುಗಳಿಂದಲೂ ಈ ವಿಷಯ ವಿಶದವಾಗಿದೆ. ಆ ವರ್ಷ ದಾಖಲಾದ ಒಟ್ಟು ದಾವಾಗಳ ಸಂಖ್ಯೆ ೨,೭೮೭,೬೩೫. ಇವುಗಳಲ್ಲಿ ೧೦ರಿಂದ ೧೦೦ ರೂಪಾಯಿಗಳ ವರೆಗಿನ ಮೊಬಲಗುಗಳ ದಾವಾಗಳೇ ಹೆಚ್ಚು. ಇವುಗಳ ಸಂಖ್ಯೆ ೧,೩೮೫,೨೨೪; ೧೦೦ರಿಂದ ೫೦೦ ರೂಪಾಯಿಗಳ ದಾವಾಗಳು ೧,೨೩೨,೬೮೭; ೫೦೦ರಿಂದ ೫,೦೦೦ ರೂಪಾಯಿಗಳಿಗೆ ಮೇಲ್ಪಟ್ಟ ದಾವಾಗಳ ಸಂಖ್ಯೆ ೬೩,೪೯೭. ಈ ಎಲ್ಲ ದಾವಾಗಳ ಸಂಖ್ಯೆ ವರ್ಷೇ ವರ್ಷೇ ಹೆಚ್ಚುತ್ತಲೇ ಇದೆ. ೧೯೨೪ರಲ್ಲಿ ದಾಖಲಾದ ದಾವಾಗಳ ಸಂಖ್ಯೆ ೨,೧೮೭,೨೦೬. ಹತ್ತು ವರ್ಷಗಳಲ್ಲಿ ೬೦೦,೩೭೯ ದಾವಾಗಳು ಹೆಚ್ಚಿವೆ. ದಾವಾಗಳ ಒಟ್ಟು ಮೊಬಲಗು ಕೂಡ ೬೩೫,೬೪೮,೮೨೭ ರೂಪಾಯಿಗಳಿಂದ ೮೦೭,೪೨೧,೮೦೭ ರೂಪಾಯಿಗಳಿಗೆ ಏರಿದೆ. ಕ್ರಿಮಿನಲ್ ಮೊಕದ್ದಮೆಗಳು ಕೂಡ ಅತ್ಯಧಿಕವಾಗಿವೆ; ಇವುಗಳು ಅನೇಕ ವೇಳೆ ಸಿವಿಲ್ ದಾವಾಗಳ ಪರಿಣಾಮವಾಗಿರುತ್ತವೆ. ೧೯೩೩ರಲ್ಲಿ ದಾಖಲಾದ ಒಟ್ಟು ಕ್ರಿಮಿನಲ್ ಮೊಕದ್ದಮೆಗಳು ೧,೦೦೫,೧೫೭; ವಿಚಾರಣೆಯಾದ ಅಪರಾಧಿಗಳ ಸಂಖ್ಯೆ ೯೧೩,೧೯೮; ಶಿಕ್ಷೆ ಪಡೆದವರು ೭೬೫,೩೭೫ ಮಂದಿ; ಬಿಡುಗಡೆಯಾದವರ ಸಂಖ್ಯೆ ೧೪೩,೧೭೬. ಈ ಕ್ರಿಮಿನಲ್ ಮೊಕದ್ದಮೆಗಳ ಸಂಖ್ಯೆ ಕೂಡ ಹೆಚ್ಚುತ್ತಲೇ ಇದೆ. ೧೯೨೪ರಲ್ಲಿ ದಾಖಲಾದುವು ೮೮೭,೭೪೭ ಮೊಕದ್ದಮೆಗಳು. ಈ ಹತ್ತು ವರ್ಷಗಳಲ್ಲಿ ೧೧೭,೪೧೦ ಮೊಕದ್ದಮೆಗಳು ಹೆಚ್ಚಿವೆ.

೧೯೩೩ ರ ಕ್ರಿಮಿನಲ್ ಮೊಕದ್ದಮೆಗಳ ವಿವರಣೆ—

ರಾಜಕೀಯ ಅಪರಾಧಿಗಳು	ಖೂನಿ	ಮಾರಾಮಾರಿ, ಅತ್ಯಾಚಾರ
೧೫,೫೩೪	೬,೮೨೭	೬೭,೯೮೩
ಡಕಾಯಿತಿ	ದನಗಳ ಕಳವು	ಕಳವು
೪,೬೭೯	೨೦,೨೫೯	೧೩೬,೭೫೫

೧೯೩೩ ರಲ್ಲಿ ಜೈಲಿನಲ್ಲಿದ್ದವರು ೯೨೨,೧೨೨ ಅಪರಾಧಿಗಳು. ಇವರಿಗಾಗಿ ಸರ್ಕಾರದವರು ವರ್ಷ ಒಂದಕ್ಕೆ ೧೭,೭೯೧,೭೧೮ ರೂಪಾಯಿಗಳನ್ನು ಖರ್ಚುಮಾಡಿರುತ್ತಾರೆ.[1] ಪಾಶ್ಚಾತ್ಯ ದೇಶಗಳಲ್ಲೆಲ್ಲ ಸಂಯುಕ್ತ ಅಮೇರಿಕ ಸಂಸ್ಥಾನದಲ್ಲಿ ಪಾತಕಗಳು ಹೆಚ್ಚು ಎಂದು ಹೇಳುವರು. ಆದರೆ ನಮ್ಮ ದೇಶವು ಆ ದೇಶಕ್ಕೆ ಏನೂ ಕಡಮೆ ಇಲ್ಲ. ೧೯೨೩ ರಲ್ಲಿ ಆ ದೇಶದ ಜೈಲುಗಳಲ್ಲಿದ್ದವರ ಸಂಖ್ಯೆ ೧೦೯,೬೧೯ ಮಾತ್ರ.[2] ಅಲ್ಲಿ ಒಂದು ಲಕ್ಷ ಪ್ರಜೆಗಳಿಗೆ ೯೪·೭ ಜನ ಜೈಲಿನಲ್ಲಿರುತ್ತಾರೆ; ನಮ್ಮಲ್ಲಿ ಲಕ್ಷಕ್ಕೆ ೨೦೦ ರ ಮೇಲೆ ಇರುತ್ತಾರೆ.

ದೌರ್ಜನ್ಯದ ಕಾರಣಗಳು—ದೌರ್ಜನ್ಯಕ್ಕೆ ಅನೇಕ ಕಾರಣಗಳಿವೆ. ನಮ್ಮ ಭೌತವಾತಾವರಣ, ಅನುವಂಶಿಕವಾದ ಮತ್ತು ಆಗಂತುಕವಾದ ದೈಹಿಕ ಮಾನಸಿಕ ಲಕ್ಷಣಗಳು, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳು.

(೧) **ಭೌತಕಾರಣಗಳು**—ನಮ್ಮ ಭೂಮಿಯ ಗುಣಕ್ಕೂ ನಮ್ಮ ಚರ್ಯೆಗಳಿಗೂ ಸಂಬಂಧವಿದೆ ಎಂಬುದಾಗಿ ಯಾರೂ

---

[1] ಇಲ್ಲಿ ಕೊಟ್ಟಿರುವ ಅಂಕೆಗಳೆಲ್ಲಾ *The Indian Year Book* (1936–37) ನಿಂದ ತೆಗೆದುಕೊಂಡಿದೆ. ಪುಟ 407, 410–11.

[2] Blackmar and Gillin: *Outlines of Sociology*, p. 591.

ನಂಬುವುದಿಲ್ಲ. ಆದರೂ ಸಮಾಜ ಶಾಸ್ತ್ರಜ್ಞರು ಅವೆರಡಕ್ಕೂ ಸಂಬಂಧವನ್ನು ಕಂಡುಹಿಡಿದಿದ್ದಾರೆ. ಲೆಂಬ್ರೋಸೊ ಎಂಬುವನು ಮಲೆನಾಡಿನಲ್ಲಿ ಕೊಲೆಪಾತಕಗಳು ಹೆಚ್ಚು ಎಂದು ನಿರ್ಧರಿಸಿರುವನು. ಇತರರು ಚಳಿಪ್ರದೇಶಗಳಲ್ಲಿ ಕಳ್ಳತನ ಹೆಚ್ಚು; ಉಷ್ಣ ಪ್ರದೇಶಗಳಲ್ಲಿ ಕನ್ಯಾಪಹರಣ ಖೂನಿ ಮೊಕದ್ದಮೆಗಳು ಹೆಚ್ಚು ಎಂಬ ಅಂಶವನ್ನು ಕಂಡುಹಿಡಿದಿದ್ದಾರೆ. ಲಕಸ್ಸಾನಿ ಎಂಬಾತನು ತನ್ನ ದೌರ್ಜನ್ಯದ ಪಂಚಾಂಗದಲ್ಲಿ ಯಾವ ಯಾವ ತಿಂಗಳು ಎಂಥೆಂಥ ದೌರ್ಜನ್ಯಗಳು ಪ್ರಬಲವಾಗುವುವು ಎಂಬ ಭವಿಷ್ಯ ಹೇಳಿರುವನು. ಭ್ರೂಣಹತ್ಯೆ ಜನವರಿಯಿಂದ ಏಪ್ರಿಲ್ ವರೆಗೆ ಹೆಚ್ಚು; ಕೊಲೆ ಜುಲೈ ತಿಂಗಳಲ್ಲಿ ಹೆಚ್ಚು; ಕನ್ಯಾಪಹಾರ ಅತ್ಯಾಚಾರಗಳು ಮೇ ತಿಂಗಳಲ್ಲಿ ಹೆಚ್ಚು; ಕಳವು ಡಿಸೆಂಬರ್ ಜನವರಿ ತಿಂಗಳಲ್ಲಿ ಹೆಚ್ಚು. ಡೆಕ್ಸ್ಟರ್ ಎಂಬ ಮತ್ತೊಬ್ಬ ಶಾಸ್ತ್ರಜ್ಞನು ವಾಯುಮಾಪಕ ಯಂತ್ರದ ಮಟ್ಟ ಬಿದ್ದಹಾಗೆಲ್ಲ ದಸ್ತಗಿರಿ ವಾರಂಟುಗಳು ಹೆಚ್ಚುವುವು ಎಂದು ಹೇಳಿದ್ದಾನೆ. ಆದರೆ ಉಷ್ಣ, ಚಳಿ ಮುಂತಾದುವು ದೌರ್ಜನ್ಯಕ್ಕೆ ನೇರವಾದ ಕಾರಣಗಳೆಂದು ಹೇಳಲಾಗದು. ಚಳಿಗಾಲದಲ್ಲಿ ಕಳ್ಳತನ ಹೆಚ್ಚಾಗುವುದಕ್ಕೆ ಆ ಕಾಲದ ಆರ್ಥಿಕ ದುರವಸ್ಥೆಯೇ ಕಾರಣ. ಆಗ ಜನರು ಒಬ್ಬರನ್ನೊಬ್ಬರು ಭೇಟಿ ಮಾಡುವುದು ಕಡಮೆಯಾದುದರಿಂದ ಮೈಮೇಲೆ ಬೀಳುವುದೇ ಮುಂತಾದ ಅತ್ಯಾಚಾರಗಳೂ ಕಡಮೆ.[1]

(೨) **ದೈಹಿಕ ಮತ್ತು ಮಾನಸಿಕ ಗುಣಗಳು**—ನಾವು ಚೆನ್ನಾಗಿ ಬದುಕಿ ಬಾಳಬೇಕಾದರೆ ನಮ್ಮ ದೇಹವು ಬಲವಾಗಿರಬೇಕು; ಬುದ್ಧಿ ಚುರುಕಾಗಿರಬೇಕು; ಮದ, ಮಾತ್ಸರ್ಯ

[1] Blackmar and Gillin : *Outlines of Sociology*, pp. 597-98.

ಮುಂತಾದುವುಗಳ ಮೇಲೆ ಹತೋಟಿ ಇರಬೇಕು. ಇವುಗಳಲ್ಲಿ ಯಾವುದೊಂದು ತಪ್ಪಿದರೂ ನಮ್ಮ ಜೀವನವು ವ್ಯತ್ಯಸ್ತವಾಗುವುದು. ಬಲವಿಲ್ಲದವನಿಗೆ ದುಡಿದು ಜೀತ ಸಂಪಾದನೆಯಾಗುವ ಕಸಬುಗಳನ್ನು ಅವಲಂಬಿಸುವುದು ಕಷ್ಟ. ಬರಿಯ ದೇಹ ಶಕ್ತಿಯಿಂದಲೇ ಜೀವಿಸಬೇಕಾದವರಲ್ಲಿ ಕುಳ್ಳರೇ ವಿಶೇಷವಾಗಿ ಕಳ್ಳರಾಗುವುದು ಎಂಬುದು ಗೋರಿಂಗ್ ಎಂಬುವನ ಪರೀಕ್ಷೆಗಳಿಂದ ವಿಶದಪಡುವುದು. ಇಂಗ್ಲೆಂಡು ಮತ್ತು ಅಮೇರಿಕ ದೇಶದ ಜೈಲುಗಳಲ್ಲಿರುವ ಕಳ್ಳರ ಎತ್ತರವು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಎತ್ತರಕ್ಕಿಂತ ಎರಡು ಅಂಗುಲ ಕಡಮೆ[1] ಆದರೆ ಕುಳ್ಳತನವೇ ಕಳ್ಳತನಕ್ಕೆ ನೇರವಾದ ಕಾರಣವಲ್ಲ. ಕಷ್ಟಪಟ್ಟು ಕೆಲಸಮಾಡಿ ಸಾಕಾದಷ್ಟು ಸಂಪಾದನೆ ಮಾಡಲು ಅಶಕ್ತರಾಗಿರುವುದರಿಂದ ಕುಳ್ಳರು ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಲು ಕದಿಯುತ್ತಾರೆ. ನಮ್ಮ ಶರೀರದ ನಿರ್ನಾಳ ಗ್ರಂಥಿಗಳಲ್ಲಿ ದ್ರವ ಒಸರುವುದು ಹೆಚ್ಚು ಕಡಮೆಯಾಗುವುದರಿಂದಲೂ ಜನರು ದುಷ್ಟರಾಗಬಹುದೆಂಬುದನ್ನು ಶಾಸ್ತ್ರಜ್ಞರು ಕಂಡುಹಿಡಿದಿರುವರು.

(೩) **ಮಾನಸಿಕ ಕಾರಣಗಳು**—ಶರೀರದ ದೋಷಗಳಂತೆಯೇ ಕೆಲವು ಮನೋವಿಕಾರಗಳೂ ಪಾತಕಗಳಿಗೆ ಕಾರಣ. ಬುದ್ಧಿಮಾಂದ್ಯ, ಬುದ್ಧಿಭ್ರಮಣೆ, ಭಾವೋದ್ರೇಕ—ಇವು ಅವುಗಳಲ್ಲಿ ಮುಖ್ಯವಾದುವು. ಗೋರಿಂಗ್ ಎಂಬ ಮನಶ್ಶಾಸ್ತ್ರಜ್ಞನು ನಡೆಸಿದ ಪರೀಕ್ಷೆಗಳ ಫಲಿತಾಂಶವಾಗಿ ೯೪೮ ಜನ ಶಿಕ್ಷೆ ಹೊಂದಿದವರಲ್ಲಿ ಹುಲ್ಲು ಬಣಬೆಗೆ ಬೆಂಕಿ ಇಟ್ಟ ಮನೋವಿಕಾರಿಗಳು ವಿಪರೀತ ಸಂಖ್ಯೆಯಲ್ಲಿ ಕಂಡುಬಂದರು, ಕನ್ನ ಹಾಕುವವರಲ್ಲಿ ಮನೋವಿಕಾರಿಗಳು ತೀರ ಕಡಮೆಯಾಗಿದ್ದರು. ಡಾ|| ಆಂಡರ್

[1] ಅದೇ ಪುಸ್ತಕ, ಪುಟ 599.

ಸನ್ ಅವರು ನಡಸಿದ ಪರೀಕ್ಷೆಗಳಿಂದ ಪಾತಕಿಗಳಲ್ಲಿ ಶೇಕಡ ೧೦–೧೮ ಜನ ಬುದ್ಧಿಮಂದರಾಗಿದ್ದರೆಂದು ತಿಳಿದು ಬಂತು. ಮೂರ್ಛೆ ಬೀಳುವವರು ಕೂಡ ಪಾತಕಿಗಳಾಗುತ್ತಾರೆ ಎಂಬುದನ್ನು ಡಾ|| ಹೀಲಿ ಎಂಬಾತನು ಸೂಚಿಸಿದ್ದಾನೆ; ನೂರು ಪಾತಕಿಗಳ ಪರೀಕ್ಷೆಯಿಂದ ಅವರಲ್ಲಿ ೭೦ ಜನ ಮೂರ್ಛೆ ರೋಗಕ್ಕೆ ತುತ್ತಾಗಿದ್ದರೆಂದು ಆತನು ವರದಿಮಾಡಿದ್ದಾನೆ. ಇವೆಲ್ಲಕ್ಕಿಂತಲೂ ಬುದ್ಧಿಭ್ರಮೆ ಪಾತಕಗಳಿಗೆ ಬಹಳ ಮುಖ್ಯವಾದ ಕಾರಣವಾಗಿ ಕಂಡುಬಂದಿದೆ.[1]

(೪) **ಅನುವಂಶಿಕ ಕಾರಣಗಳು—**"ಇವನು ಹುಟ್ಟುಕಳ್ಳ" ಎಂದು ಸಾಮಾನ್ಯವಾಗಿ ಜನರು ಹೇಳುವುದನ್ನು ಎಲ್ಲರೂ ಬಲ್ಲರು. ಇದರಿಂದ ಕಳ್ಳತನವು ಅನುವಂಶಿಕವೇ ಎಂಬ ಪ್ರಶ್ನೆ ಹುಟ್ಟುತ್ತದೆ. ಆದರೆ ಕಳ್ಳತನವೇ ಅನುವಂಶಿಕವೆಂದು ಹೇಳುವುದು ಸರಿಯಲ್ಲ. ಅದರ ಪ್ರೇರಕವಾದ ದೈಹಿಕ ಮಾನಸಿಕ ಲಕ್ಷಣಗಳು ಅನುವಂಶಿಕವಾಗಿವೆ. ಹೀಗೆಯೇ ಜಾಗ್ರತೆಯಾಗಿ ಮೈನೆರೆಯುವುದು ಅನುವಂಶಿಕವಾದ ಗುಣ. ಶರೀರದ ಬೆಳವಣಿಗೆಗೆ ತಕ್ಕಂತೆ ಮನಸ್ಸು ಶೀಲಗಳೂ ಬೆಳೆಯುವುದಕ್ಕೆ ಮುಂಚಿತವಾಗಿಯೇ ಮೈನೆರೆದರೆ ಅಂಥವರು ಕೆಟ್ಟದಾರಿಗೆ ಬೀಳುವ ಸಂಭವ ಹೆಚ್ಚು. ನರಗಳ ದೌರ್ಬಲ್ಯವೂ ಮನೋದೌರ್ಬಲ್ಯವೂ ಅನುವಂಶಿಕವಾದುವು. ಇವುಗಳಿಂದ ದೌರ್ಜನ್ಯ ಹುಟ್ಟುವುದು ಸಹಜ.

ಕೆಲವು ಕುಟುಂಬ ಅಥವಾ ಬುಡಕಟ್ಟುಗಳಿಗೆ ಸೇರಿದ ಜನರು ಸ್ವಾಭಾವಿಕವಾಗಿ ದುಷ್ಟರೂ ಪಾತಕಿಗಳೂ ಆಗಿರುವುದು ಪ್ರತಿಯೊಂದು ದೇಶದಲ್ಲಿಯೂ ಉಂಟು. ಅಮೇರಿಕದಲ್ಲಿ ಪಿನಿಸ್, ಜೂಕ್ಸ್, ಇಷ್ಮೇಲ್, ಕಲ್ಲಿಕಾಕ್ ಮುಂತಾದ ಗುಂಪಿನವರು

[1] ಅದೇ ಪುಸ್ತಕ, ಪುಟ 600—602.

ಕಳ್ಳರೂ ದರೋಡೆಕಾರರೂ ಕೊಲೆಪಾತಕಿಗಳೂ ಎಂದು ಪ್ರಸಿದ್ಧಿ ಪಡೆದಿದ್ದಾರೆ. ನಮ್ಮ ದೇಶವಂತೂ ದುಷ್ಟರ ತಂಡ (Criminal Tribes)ಗಳಿಂದ ತುಂಬಿಹೋಗಿದೆ. ವಂಶಪಾರಂಪರ್ಯವಾಗಿ ಮೋಸ, ಕಳ್ಳತನ, ಕನ್ಯಾಪಹಾರ ಇವೇ ಇವರ ಕಸಬು. ಹುಟ್ಟಿದ ಬಾತುಗಳೆಲ್ಲ ಸ್ವಾಭಾವಿಕವಾಗಿ ನೀರಿನಲ್ಲಿ ಜೀವಿಸುವಂತೆ ಈ ಗುಂಪುಗಳಲ್ಲಿ ಹುಟ್ಟಿದವರೆಲ್ಲ ಮೋಸ ಕಳ್ಳತನಗಳಿಂದ ಜೀವಿಸುತ್ತಾರೆ. ನಾವು ಮಕ್ಕಳಿಗೆ ನಾಮಕರಣಮಾಡುವಂತೆ, ದಂಡಸಿ ಎಂಬ ಗುಂಪಿನ ಜನರು ಮಗು ಹುಟ್ಟಿದ ನಾಲ್ಕೈದು ದಿವಸಗಳಾಗುತ್ತಲೇ ಗೋಡೆಯಲ್ಲಿ ಕನ್ನವನ್ನು ಕೊರೆದು ಅದರಲ್ಲಿ ಮಗುವನ್ನು ಮೂರುಸಲ ತೂರಿಸಿ

"ತೂರೋ ತೂರೋ ಮಗನೆ
ತಂದೆಯ ಮೀರಿಸೊ ಮಗನೆ"

ಎಂದು ಲಾಲಿಯನ್ನು ಹಾಡುತ್ತಾರೆ. ನಮ್ಮ ದೇಶದಲ್ಲಿ ಇಂಥ ಗುಂಪಿನವರ ಜನಸಂಖ್ಯೆ ೪೦,೦೦೦,೦೦೦[1] ಎಂದು ಲೆಕ್ಕ ಮಾಡಿರುತ್ತಾರೆ. ಇವರಲ್ಲಿ ಒಂದೊಂದು ಗುಂಪಿನವರೂ ಒಂದೊಂದು ರೀತಿಯಾದ ಕಳವು ದರೋಡೆಗಳಲ್ಲಿ ನಿಪುಣರು. ಕೆಲವರು ಜೇರುಗುಣಿಕೆ ಕಳ್ಳರು; ಕೆಲವರು ಪಂಜುಗಳ್ಳರು; ಕೆಲವರು ಕತ್ತೆಯ ಕಳ್ಳರು; ಕೆಲವರು ದನಗಳ ಕಳ್ಳರು; ಕೆಲವರು ಮಕ್ಕಳ ಕಳ್ಳರು.

ಇವರು ಮಕ್ಕಳಿಗೆ ಕಳ್ಳತನವನ್ನು ಕ್ರಮವಾಗಿ ಅಭ್ಯಾಸ ಮಾಡಿಸುತ್ತಾರೆ. ಒಂದು ಗುಂಪಿನವರು ಮಗು ಹುಟ್ಟುತ್ತಲೆ ರೂಪಾಯಿಗೆ ದಾರಕಟ್ಟಿ ಅದನ್ನು ಮಗುವಿನ ಗಂಟಲೊಳಕ್ಕೆ

---

[1] Bejoy Shanker Haikerwal: *Economic and Social Aspects of Crime in India*, p. 144.

ಹಾಕಿ ಅದುಮುತ್ತಾರೆ. ಹೀಗೆ ನಿತ್ಯವೂ ಅದುಮಿ ಅದುಮಿ ಗಂಟಲಲ್ಲಿ ಚೀಲದಂತೆ ಒಂದು ಪೊಟರೆಯನ್ನು ಮಾಡುತ್ತಾರೆ. ಕೋತಿಯ ಗಂಟಲಿನ ಚೀಲದಂತೆ ಅದು ಆಗುತ್ತದೆ. ದೊಡ್ಡವನಾದ ಮೇಲೆ ಕದ್ದ ನಗನಾಣ್ಯಗಳನ್ನು ಬಚ್ಚಿಡಲು ಇದನ್ನು ಗೂಡಾಗಿ ಅವರು ಉಪಯೋಗಿಸುತ್ತಾರೆ. ಹುಡುಗನು ಸ್ವಲ್ಪ ದೊಡ್ಡವನಾಗುತ್ತಲೆ ದೊಡ್ಡವರು ತಾವು ಕದಿಯುವುದಕ್ಕೆ ಹೋದಾಗ ಅವನನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಾರೆ; ಹುಡುಗನನ್ನು ಪಹರೆಯವನನ್ನಾಗಿ ಉಪಯೋಗಿಸಿಕೊಳ್ಳುತ್ತಾರೆ. ಹುಡುಗಿಯರು ಕೂಡ ಕಳ್ಳತನಕ್ಕೆ ಸಹಾಯಕರಾಗುತ್ತಾರೆ. ಹಚ್ಚೆಹುಯ್ಯುವವರಂತೆ, ಕಣಿ ಹೇಳುವವರಂತೆ ವೇಷಹಾಕಿ ಅವರನ್ನು ಕದಿಯಬೇಕಾದ ಮನೆಗಳಿಗೆ ಕಳ್ಳರು ಕಳುಹಿಸುತ್ತಾರೆ. ಕಣಿಹೇಳುವ ನೆಪದಲ್ಲಿ ಅವರು ಯಾವ ಯಾವ ಸಾಮಾನು ಎಲ್ಲೆಲ್ಲಿದೆ, ಯಾವ ಕಡೆಯಿಂದ ಮನೆಯೊಳಕ್ಕೆ ಸುಲಭವಾಗಿ ಹೋಗಬಹುದು, ಯಾರು ಯಾರು ಎಲ್ಲೆಲ್ಲಿ ಮಲಗುತ್ತಾರೆ ಎಂಬ ವಿಚಾರಗಳನ್ನೆಲ್ಲ ಚೆನ್ನಾಗಿ ಗಮನಿಸಿ ಮನೆ ಬಿಟ್ಟುಹೋದ ಮೇಲೆ ಅವುಗಳನ್ನೆಲ್ಲ ಸಕ್ಷೆಗಳ ಮೂಲಕ ದೊಡ್ಡವರಿಗೆ ತಿಳಿಯಪಡಿಸುತ್ತಾರೆ.

(೫) **ಸಾಮಾಜಿಕ ಸನ್ನಿವೇಶಗಳು**—ಅನೇಕ ಸಾಮಾಜಿಕ ಸನ್ನಿವೇಶಗಳು ಜನರನ್ನು ದುಷ್ಕೃತ್ಯಗಳ ಕಡೆಗೆ ಎಳೆಯುತ್ತವೆ. ಇವುಗಳಲ್ಲಿ ಮುಖ್ಯವಾದುವು—(೧) ಮನೆಯ ಸನ್ನಿವೇಶ, (೨) ದುಷ್ಟಪದ್ಧತಿಗಳು, (೩) ಕೋಮುವಾರು ದ್ವೇಷಾಸೂಯೆಗಳು, (೪) ಕೋರ್ಟುಗಳು ಮತ್ತು ಜೈಲುಗಳು.

(೧) **ಮನೆಯ ಸನ್ನಿವೇಶ**—ನಮ್ಮಲ್ಲಿ ಕನ್ಯಾವಿವಾಹಗಳೇ ಹೆಚ್ಚು. ಇವು ಕೆಲವು ವೇಳೆ ಆತ್ಮಹತ್ಯಕ್ಕೆ ಕಾರಣವಾಗುವುವು.

ಮದುವೆಯಾದ ಹುಡುಗಿ ಗಂಡನ ಮನೆಗೆ ಹೋದಮೇಲೆ ಅಲ್ಲಿ ಅತ್ತೆಮಾವಂದಿರ ಸಿಸ್ತಿಗೆ ಒಳಪಡಬೇಕಾಗುವುದು. ಈ ಸಿಸ್ತು ಅನೇಕವೇಳೆ ಕಾಟವಾಗಿ ಪರಿಣಮಿಸಿ ಹುಡುಗಿ ಅದನ್ನು ಸಹಿಸಲಾರದೆ ಪ್ರಾಣವನ್ನು ಕಳೆದುಕೊಳ್ಳಬಹುದು. ನಮ್ಮ ಸಮಾಜದಲ್ಲಿ ವಿಧವೆಯರಿಗೆ ಮದುವೆ ಮಾಡಿಕೊಳ್ಳಲು ಅವಕಾಶವಿಲ್ಲದ್ದರಿಂದ ಅವರು ಭ್ರೂಣಹತ್ಯಾಪಾತಕಕ್ಕೆ ಒಳಗಾಗುವರು. ವರದಕ್ಷಿಣೆಯ ಪದ್ಧತಿ ಕೂಡ ಆತ್ಮಹತ್ಯಗಳಿಗೆ ಕಾರಣವಾಗಿದೆ. ತಮ್ಮ ಮದುವೆಗಾಗಿ ವರದಕ್ಷಿಣೆಯನ್ನು ಹೊಂದಿಸಲಾರದ ತಂದೆತಾಯಿಗಳ ಕಷ್ಟವನ್ನು ನೋಡಿ ಸಹಿಸಲಾರದೆ ಬಾವಿಯಲ್ಲಿ ಬಿದ್ದೊ ಮೈಗೆ ಬೆಂಕಿ ಹಚ್ಚಿಕೊಂಡೊ ಎಷ್ಟೋ ಹುಡುಗಿಯರು ಪ್ರಾಣಬಿಟ್ಟದ್ದುಂಟು. ಬಂಗಾಳಾ ದೇಶದಲ್ಲಿ ವರ್ಷಕ್ಕೆ ಇಂಥ ದುಷ್ಕೃತ್ಯಗಳು ಎಂಟು-ಹತ್ತು ನಡೆಯುವುವು.

ದೊಡ್ಡ ಪಟ್ಟಣಗಳಲ್ಲಿ ಕೂಲಿಗಾರರು ಒಂದೇ ಕೊಠಡಿಯಲ್ಲಿ ಐದಾರು ಜನರಿಂದ ಎಂಟು-ಹತ್ತು ಜನರ ವರೆಗೆ ವಾಸಿಸುವರು. ಇಂಥ ಮನೆಗಳಲ್ಲಿ ಹುಟ್ಟಿ ಬೆಳೆದ ಹುಡುಗ ಹುಡುಗಿಯರು ಕೆಟ್ಟ ವಿದ್ಯೆಗಳನ್ನು ಕಲಿಯುವುದು ಸ್ವಾಭಾವಿಕವಾಗಿದೆ. ಕೂಲಿಗಾರರಲ್ಲಿ ಕುಡುಕರೂ ಹೆಚ್ಚು. ಅವರು ಕೂಲಿಯ ಬಟವಾಡೆಯ ದಿವಸ ವಿಶೇಷವಾಗಿ ಕುಡಿದು ಹೊಡೆದಾಡುತ್ತಾರೆ; ಸಿಕ್ಕಿದ ಹೆಂಗಸರ ಮೇಲೆ ಅತ್ಯಾಚಾರ ನಡೆಸುತ್ತಾರೆ. ಬೊಂಬಾಯಿ ನಗರದಲ್ಲಿ ಹೆಂಗಸರ ಮೇಲೆ ಅತ್ಯಾಚಾರ ನಡೆಸಿದುದಕ್ಕಾಗಿ ತಿಂಗಳೊಂದಕ್ಕೆ ೩೦ ಜನ ಕೂಲಿಯವರು ಶಿಕ್ಷೆಗೆ ಗುರಿಯಾಗುತ್ತಾರೆ. ಒಂದು ವರ್ಷದಲ್ಲಿ ಈ ಅಪರಾಧಕ್ಕಾಗಿ ೬,೩೮೬ ಶಿಕ್ಷೆಗಳಾದುವು. ೧೯೩೦-೩೧ರಲ್ಲಿ ೯೩೦ ಮಂದಿ ಕುಡುಕರಿಗೆ ಲಕ್ನೋ ನಗರದಲ್ಲಿ ಶಿಕ್ಷೆಯಾಯಿತು. ಇವೆಲ್ಲಕ್ಕಿಂತಲೂ ಕಲ್ಕತ್ತೆ

ಯಲ್ಲಿ ಕುಡುಕತನದಿಂದ ನಡೆಯುವ ಅತ್ಯಾಚಾರಗಳು ಮಿತಿ ಮಿಾರಿ ಹೋಗಿವೆ.

(೨) **ದುಷ್ಟಪದ್ಧತಿಗಳು**—ನರಬಲಿ, ಹೆಣ್ಣುಮಕ್ಕಳನ್ನು ಸಾಯಿಸುವುದು, ರಾಸಕ್ರೀಡೆ, ನಿರ್ವಾಣ ಸ್ತ್ರೀಯರ ಪೂಜೆ—ಇವು ನಮ್ಮ ದೇಶದಲ್ಲಿ ಬಹಳ ಹಿಂದಿನ ಕಾಲದಿಂದಲೂ ನಡೆದು ಕೊಂಡು ಬಂದಿರುವ ಕೆಟ್ಟ ಪದ್ಧತಿಗಳು. ಇವುಗಳನ್ನು ನಿರ್ಮೂಲ ಮಾಡಲು ಎಷ್ಟೋ ಪ್ರಯತ್ನಗಳನ್ನು ಮಾಡುತ್ತಿದ್ದರೂ ಅಲ್ಲೊಂದು ಇಲ್ಲೊಂದು ಇನ್ನೂ ನಡೆಯುತ್ತಲೇ ಇದೆ.

(೩) **ಕೋಮುವಾರು ದ್ವೇಷ**—ನಮ್ಮ ದೇಶದಲ್ಲಿ ಹಿಂದುಗಳಿಗೂ ಮಹಮದೀಯರಿಗೂ ಇರುವ ವೈಮನಸ್ಯವು ಅನೇಕ ಕೊಲೆಗಳಿಗೂ ದೊಂಬಿಗಳಿಗೂ ಕಾರಣವಾಗಿರುವುದು ಎಲ್ಲರಿಗೂ ತಿಳಿದ ವಿಷಯ. ಇದನ್ನು ಪರಿಹರಿಸಲು ಸಂಧಿ ಸಂಧಾನಗಳು ನಡೆಯುತ್ತಲೇ ಇವೆ. ಆದರೆ ಇದು ಇನ್ನೂ ಹೆಚ್ಚುತ್ತಿದೆಯೇ ಹೊರತು ಕಡಮೆಯಾಗುತ್ತಿಲ್ಲ. ಇದನ್ನು ಪರಿಹರಿಸುವುದು ಅಸಾಧ್ಯವೆಂದು ಅನೇಕ ಉಜ್ವಲ ದೇಶಾಭಿಮಾನಿಗಳು ಕೂಡ ನಿರಾಶರಾಗಿರುತ್ತಾರೆ. ಇದು ಹೋದ ಹೊರತು ನಮಗೆ ವಿಮೋಚನೆಯೇ ಇಲ್ಲದುದರಿಂದ, ಇದರ ಸಾಧನೆಗಾಗಿ ಸರ್ವ ಪ್ರಯತ್ನವನ್ನು ಮಾಡಿಯೇ ತೀರಬೇಕು.

(೪) **ಕೋರ್ಟುಗಳು, ಜೈಲುಗಳು**—ನಮ್ಮಲ್ಲಿರುವ ನ್ಯಾಯವಿಚಾರಣೆಯ ಕ್ರಮ ಬಹಳ ತೊಡಕಾದುದು ಮತ್ತು ನಿಧಾನವಾದುದು. ಸಾಕ್ಷಿ ನುಡಿಯಲು ಬಂದವರನ್ನು ವಿಚಾರಣೆ ಮಾಡದೆ ಕೊಳೆ ಹಾಕುವುದು, ನಿರಪರಾಧಿಗಳನ್ನು ತಿಂಗಳು ಗಟ್ಟಳೆ ಅಪರಾಧಸ್ಥಾನದಲ್ಲಿ ನಿಲ್ಲಿಸುವುದು[1] ಮುಂತಾದುವು

[1] ಅದೇ ಪುಸ್ತಕ, ಪುಟ ೧೧೫–೧೨೩.

ಗಳಿಂದ ನಿರಪರಾಧಿಗಳಿಗೆ ಕಿರುಕುಳ ಹೆಚ್ಚು; ಅಪರಾಧಿಯೂ ತಪ್ಪಿಸಿಕೊಳ್ಳಲು ಅನುಕೂಲ. ಲಾಯರನ್ನು ಇಡಲು ಬೇಕಾದಷ್ಟು ಹಣವಿಲ್ಲದೆ ಇರುವವನು ನಿರಪರಾಧಿಯಾದರೂ ಶಿಕ್ಷೆಗೆ ಒಳಗಾಗುವ ಸಂಭವವುಂಟು. ಹಣವಂತನಾದವನು ಚತುರನಾದ ಲಾಯರನ್ನು ಇಟ್ಟು ತಾನೇ ಅಪರಾಧಿಯಾಗಿದ್ದರೂ ಬಿಡುಗಡೆ ಹೊಂದಬಹುದು. ಲಾಯರ ಸಹಾಯವಿಲ್ಲದೆ ಕೆಲವರು ಏನೇನೊ ಹೇಳಿಬಿಟ್ಟು ಶಿಕ್ಷೆ ಅನುಭವಿಸುವುದೂ ಉಂಟು. ಸಾಕ್ಷಿಗಳಾಗಿ ಬಂದವರನ್ನು ವಿಚಾರಣೆಮಾಡದೆ ಕೊಳೆ ಹಾಕುವುದರಿಂದಲೂ ಸಾಕ್ಷಿ ಸ್ಥಾನದಲ್ಲಿ ನಿಲ್ಲಿಸಿ ಸಿಕ್ಕಾಪಟ್ಟೆ ಪ್ರಶ್ನೆಗಳನ್ನು ಕೇಳುವುದರಿಂದಲೂ ಮಾನವಂತರು ಮತ್ತು ಕೆಲಸಕಾರ್ಯವಿರುವವರು ಕೋರ್ಟಿಗೆ ಸಾಕ್ಷಿಗಳಾಗಿ ಬರಲು ಹಿಂಜರಿಯುವರು. ಇದರಿಂದ ಕೆಲವುವೇಳೆ ಅಪರಾಧವನ್ನು ಸ್ಥಾಪಿಸುವುದಕ್ಕೆ ರುಜುವಾತನ್ನು ಒದಗಿಸುವುದು ಕಷ್ಟವಾಗಿ ಅಪರಾಧಿ ಬಿಡುಗಡೆ ಹೊಂದಲೂ ಬಹುದು. ಇನ್ನು ಕೆಲವು ಸಲ ನಿರಪರಾಧಿಯಾದರೂ ಸಾಕ್ಷಿಗಳನ್ನು ಒದಗಿಸಲಾರದೆ ಶಿಕ್ಷೆ ಅನುಭವಿಸಬೇಕಾಗಲೂ ಬಹುದು.

ನಮ್ಮ ಜೈಲುಗಳ ದುರವಸ್ಥೆಯೂ ದುರ್ಮಾರ್ಗಕ್ಕೆ ಕಾರಣವಾಗಿದೆ. ಸಣ್ಣ ಅಪರಾಧ ಮಾಡಿ ಜೈಲಿಗೆ ಬಂದವನನ್ನು ಖದೀಮ ಅಪರಾಧಿಗಳೊಡನೆ ಸೇರಿಸುವುದರಿಂದ ಜೈಲು ಬಿಡುವ ಹೊತ್ತಿಗೆ ಅವನೂ ಮಹಾ ದುಷ್ಟನಾಗಬಹುದು.

(೬) **ಪರಿಹಾರಗಳು—೧. ದುರ್ಜನರ ವಿಷಯದಲ್ಲಿ ಮರುಕ.** ಸಾಮಾನ್ಯವಾಗಿ ಕಳ್ಳಕಾಕರರನ್ನು ಸಮಾಜವು ನಿಕೃಷ್ಟವಾಗಿ ಕಾಣುವುದು. ಒಂದು ದೃಷ್ಟಿಯಿಂದ ಇದು ಸರಿಯೇ. ಆಧ್ಯಾತ್ಮ ದೃಷ್ಟಿಯಿಂದ ನೋಡಿದರೆ ಇವರ ವಿಷಯದಲ್ಲಿ

ಸಮಾಜವು ಮರುಕಪಡಬೇಕಾದುದು ಆವಶ್ಯಕ. ಕೆಲವು ವೇಳೆ ಮನುಷ್ಯನು ಬಹಳ ಕಷ್ಟವಾದ ಬಿಕ್ಕಟ್ಟಿಗೆ ಸಿಕ್ಕಿ ಪತಿತನಾಗುತ್ತಾನೆ; ಕೆಲವು ವೇಳೆ ಸರಿಯಾದ ಸಂಗ ಸನ್ನಿವೇಶಗಳಿಲ್ಲದೆ ಪಾಪಿಯಾಗುತ್ತಾನೆ; ಸಮಾಜದಲ್ಲಿರುವ ನ್ಯೂನಾತಿರೇಕಗಳು ಕೂಡ ಜನರು ದುಷ್ಟರಾಗುವುದಕ್ಕೆ ಕಾರಣವಾಗಿವೆ. ಪತಿತರನ್ನು ನಾವು ರೋಗಿಗಳಂತೆ ಕಂಡು ಅವರಿಗೆ ತಕ್ಕ ಚಿಕಿತ್ಸೆ ನಡೆಸುವುದು ನಾಗರಿಕಪದ್ಧತಿ. ಈಗೀಗ ಸರ್ಕಾರವೂ ಸಮಾಜವೂ ದುರ್ಜನರನ್ನು ತಿದ್ದಿ ಸತ್ಸಮಾಜಿಕರನ್ನಾಗಿ ಮಾಡಲು ಪ್ರಯತ್ನಿಸುತ್ತಿವೆ.

೨. **ಹುಡುಗರಿಗೆ ಬೇರೆ ಜೈಲುಗಳು, ಪಾಠಶಾಲೆಗಳು**—ಈಗ ಕೆಲವು ವರ್ಷಗಳಿಂದ ನಮ್ಮ ದೇಶದಲ್ಲಿ ಹುಡುಗರಿಗಾಗಿಯೇ ಬೇರೆಬೇರೆ ಜೈಲುಗಳಾಗುತ್ತಿವೆ. ಅವುಗಳಲ್ಲಿ ಬರೇಲಿ ಜೈಲು ಮುಖ್ಯವಾದುದು. ಆದಷ್ಟುಮಟ್ಟಿಗೆ ಹುಡುಗರನ್ನು ಸನ್ಮಾರ್ಗಕ್ಕೆ ತರಲು ಈ ಜೈಲಿನಲ್ಲಿ ಪ್ರಯತ್ನಮಾಡುತ್ತಿದೆ. ಆದರೆ ಜೈಲಿನ ವಾತಾವರಣವು ಹುಡುಗರ ಜೀವನ ಸುಧಾರಣೆಗೆ ಅಷ್ಟು ಯೋಗ್ಯವಾದುದೆಂದು ಹೇಳುವುದಕ್ಕಾಗುವುದಿಲ್ಲ. ಆದಕಾರಣ ಈ ಬಗೆಯ ಹುಡುಗರನ್ನು ತಿದ್ದುವುದಕ್ಕಾಗಿ ಬೇರೆ ಪಾಠಶಾಲೆಗಳನ್ನು ಏರ್ಪಡಿಸಿದ್ದಾರೆ. ಇವಕ್ಕೆ ಬೋರ್‌ಸ್ಟಲ್ ಪಾಠಶಾಲೆಗಳೆಂದು ಹೆಸರು. ಡಿಲ್ಲಿ, ಆಲಿಪುರ, ಮಾತುಂಗ, ಬೈಕಲ್ಲ, ಹೆರವ್ಡ ಮುಂತಾದ ಸ್ಥಳಗಳಲ್ಲಿ ಬೋರ್‌ಸ್ಟಲ್ ಶಾಲೆಗಳು ಸ್ಥಾಪನೆಯಾಗಿವೆ. ೧೨ ರಿಂದ ೧೮ ವರ್ಷ ವಯಸ್ಸಿನ ಹುಡುಗರನ್ನು ಈ ಶಾಲೆಗಳಲ್ಲಿ ತಿದ್ದುತ್ತಾರೆ. ಆದರೆ ೧೨ ವರ್ಷಗಳಾಗುವುದಕ್ಕೆ ಮುಂಚಿತವಾಗಿಯೇ ಹುಡುಗರಲ್ಲಿರುವ ದುರ್ಗುಣಗಳನ್ನು ತಿದ್ದುವುದು ಅತ್ಯುತ್ತಮವಾದ

ಮಾರ್ಗ. ಇದರ ಆವಶ್ಯಕತೆಯನ್ನರಿತು ಬೊಂಬಾಯಿ ಸರ್ಕಾರ ದವರು ೧೯೨೪ರಲ್ಲಿ ಮಕ್ಕಳ ಕಾನೂನೊಂದನ್ನು ರಚಿಸಿದರು. ಈಚೆಗೆ ಮದರಾಸ್ ಮತ್ತು ಬಂಗಾಳ ಆಧಿಪತ್ಯಗಳಲ್ಲೂ ಈ ಕಾನೂನು ಜಾರಿಗೆ ಬಂದಿದೆ. ಇವಿಷ್ಟು ಮಕ್ಕಳನ್ನೂ ಹುಡುಗ ರನ್ನೂ ಯುವಕರನ್ನೂ ತಿದ್ದುವ ಏರ್ಪಾಟುಗಳು.

೩. **ಬಂದಿಗಳಿಗೆ ವೃತ್ತಿಶಿಕ್ಷಣ**—ಇನ್ನು ದೊಡ್ಡವರನ್ನು ತಿದ್ದಲು ಏನು ಏರ್ಪಾಟುಗಳಾಗಿವೆಯೆಂಬುದನ್ನು ಕುರಿತು ವಿಚಾರಮಾಡೋಣ. ಸಾಮಾನ್ಯವಾಗಿ ನಮ್ಮಲ್ಲಿ ಕಳ್ಳತನವೇ ಹೆಚ್ಚು. ಇದಕ್ಕೆ ಬಡತನ ಮುಖ್ಯಕಾರಣ. ಶಿಕ್ಷೆಹೊಂದಿ ಜೈಲಿಗೆ ಬಂದವನಿಗೆ ಯಾವುದಾದರೂ ಒಂದು ಕಸಬನ್ನು ಕಲಿಸಿದರೆ ಅವನು ಕಳ್ಳತನವನ್ನು ಬಿಟ್ಟು ಯೋಗ್ಯವಾದ ರೀತಿಯಲ್ಲಿ ಜೀವಿಸ ಬಹುದು ಎಂದು ಈಗ ಖೈದಿಗಳಿಗೆ ಬಟ್ಟೆ ಹೊಲಿಯುವುದು, ಜೋಡು ಹೊಲಿಯುವುದು, ಸೆಯ್ಗೆ ಕೆಲಸ, ಜಮಖಾನೆ ಮಾಡು ವುದು, ಕಮ್ಮಾರನ ಕೆಲಸ, ಬಡಗಿಯ ಕೆಲಸ ಇವೇ ಮುಂತಾದ ಕಸಬುಗಳನ್ನು ಕಲಿಸುತ್ತಿರುವರು. ಅವರ ಶೀಲಸ್ವಭಾವಗಳನ್ನು ಮಾರ್ಪಡಿಸಲು ಪುರಾಣ ಪುಣ್ಯಕಥೆಗಳನ್ನು ಹೇಳಿಸುತ್ತಿರುವರು. ಹೀಗೆ ಕಸಬನ್ನು ಕಲಿತು ಧರ್ಮಬೋಧೆಪಡೆದು ಬಿಡುಗಡೆಯಾದ ಬಂದಿಗಳಿಗೆ ಸಹಾಯಮಾಡಲು ಉತ್ತರ ಆರ್ಕಾಟ್, ದಕ್ಷಿಣ ಆರ್ಕಾಟ್, ಕೊಯಮತ್ತೂರು, ಮಲಬಾರ್, ಸೇಲಂ, ತಿನ್ನವೆಲ್ಲಿ, ತಿರುಚನಾಪಳ್ಳಿ, ಪೂನ, ಅಹಮದಾಬಾದ್, ರಾಯಪುರ, ಸಿಯೋನಿ, ನರಸಿಂಗಪುರ ಮುಂತಾದ ಸ್ಥಳಗಳಲ್ಲಿ ಸಂಘಗಳು ಏರ್ಪಟ್ಟಿವೆ. ಬಿಡುಗಡೆಯಾದ ಬಂದಿಗಳಿಗೆ ಕೆಲಸ ಒದಗಿಸಿ ಕೊಡುವುದೂ ಅವರಿಗೆ ಸರಿಯಾದ ವಸತಿಗಳನ್ನು ಏರ್ಪಡಿಸು ವುದೂ ಈ ಸಂಘಗಳ ಮುಖ್ಯವಾದ ಉದ್ದೇಶವಾಗಿದೆ.

೪. **ಕ್ರಿಮಿನಲ್ ಟ್ರೈಬ್ಸ್ ಸೆಟಲ್ಮೆಂಟ್**—ಇವೆಲ್ಲಕ್ಕಿಂತಲೂ **ಕೊರಮ ಕೊರಚರ** ಗುಂಪುಗಳನ್ನು ವ್ಯವಸ್ಥೆಗೊಳಿಸಲು ಸರ್ಕಾರವೂ ಸಮಾಜವೂ ಮಾಡುತ್ತಿರುವ ಕೆಲಸಗಳು ಬಹಳ ಮುಖ್ಯವಾದುವು. ಸಾಮಾನ್ಯವಾಗಿ ಈ ಜನರಿಗೆ ನಿರ್ದಿಷ್ಟವಾದ ದೇಶವಿಲ್ಲ, ಸ್ಥಳವಿಲ್ಲ, ಮನೆಮಠವಿಲ್ಲ. ಸ್ಥಳದಿಂದ ಸ್ಥಳಕ್ಕೆ ಸಂಚಾರಮಾಡುತ್ತ ಸಮಯ ಸಿಕ್ಕಿದಾಗ ಅಲ್ಲಿ ಇಲ್ಲಿ ಕಳ್ಳತನ ಮಾಡಿ ಹೊಟ್ಟೆ ಹೊರೆಯುವುದೇ ಇವರ ಜೀವನದ ಪರಿಸ್ಥಿತಿ. ಸ್ಥಳದಿಂದ ಸ್ಥಳಕ್ಕೆ ತಿರುಗುವುದನ್ನು ತಪ್ಪಿಸಿ ಅವರಿಗೆ ನಿರ್ದಿಷ್ಟವಾದ ವಾಸ ಪ್ರದೇಶವನ್ನು ಗೊತ್ತುಮಾಡಿ ಮನೆಮಠಗಳನ್ನು ಕಟ್ಟಿಸಿ ಅಲ್ಲೇ ನಿಲ್ಲುವಂತೆ ಮಾಡಲು ೧೮೭೭ರಿಂದ ಇಂದಿನ ವರೆಗೂ ಇಂಡಿಯಾ ಸರ್ಕಾರದವರು ಪ್ರಯತ್ನಪಡುತ್ತಿರುವರು. ಈಗ ಹತ್ತಿಪ್ಪತ್ತು ವರ್ಷಗಳಿಂದ ಸ್ಯಾಲ್ವೇಷನ್ ಆರ್ಮಿ ಎಂಬ ಹೆಸರಿನ ಸೇವಾ ಸಂಘದ ಸಹಾಯ ಅವರಿಗೆ ದೊರೆತು ಈ ಕೆಲಸವು ಸುಮುಖವಾಗುತ್ತಿದೆ. ಈಚೀಚೆಗಂತೂ ಈ ಕೆಲಸದಲ್ಲಿ ಕೆನಡಿಯನ್ ಮಿಷನ್ನಿನವರು, ಖಲ್ಸ ದಿವಾನ್, ದೇವ್‌ಸಮಾಜ, ಅಂಜುಮನ್ ಇಸ್ಲಾಮಿಯ, ಅಹ್ಮದೀಯ ಸಂಘ, ಅಹ್ಮದೀಯ ಅಂಜುಮನ್ ಇಷದ್-ಇ-ಇಸ್ಲಾಂ, ಸನಾತನ ಧರ್ಮಸಭಾ, ಆರ್ಯಸಮಾಜ, ಪಂಜಾಬಿನ ಹಿಂದೂ ಸಭಾ ಮುಂತಾದ ಸಂಸ್ಥೆಗಳವರೂ ಸಹಕರಿಸುತ್ತಿರುವರು.

೫. **ಸಾಮಾಜಿಕ ಮತ್ತು ರಾಜಕೀಯ ಸುಧಾರಣೆಗಳು**—ಬಾಲ್ಯವಿವಾಹದಿಂದಲೂ ವೈಧವ್ಯದಿಂದಲೂ ಆಗುತ್ತಿರುವ ಆತ್ಮಹತ್ಯ ಭ್ರೂಣಹತ್ಯಾದಿ ಪಾತಕಗಳನ್ನು ತಪ್ಪಿಸುವುದಕ್ಕಾಗಿ ವಿವಾಹದ ವಯಸ್ಸನ್ನು ಹೆಚ್ಚಿಸುವ ಮತ್ತು ವಿಧವಾ ವಿವಾಹಕ್ಕೆ ಅವಕಾಶ ಕೊಡುವ ಹೊಸಹೊಸ ಕಾನೂನುಗಳು

ರಚನೆಯಾಗುತ್ತಿವೆ. ಇದರಿಂದ ಎಷ್ಟೋ ಜನ ವಿಧವೆಯರು ಮದುವೆಮಾಡಿಕೊಂಡು ಸುಖವಾಗಿ ಬದುಕಿ ಬಾಳುವರು. ಕಳ್ಳತನಕ್ಕೆ ಕಾರಣವಾದ ದಾರಿದ್ರ್ಯವನ್ನು ನೀಗುವುದಕ್ಕೂ ರೈತನ ಸಾಲದ ಹೊರೆಯನ್ನು ಇಳಿಸುವುದಕ್ಕೂ ಸರ್ಕಾರಗಳು ಬಹು ಶ್ರಮಪಡುತ್ತಿರುವುವು; ಹಳ್ಳಿಯ ಜನರು ತಮ್ಮ ವ್ಯಾಜ್ಯಗಳನ್ನೂ ತಪ್ಪುಗಳನ್ನೂ ತಮ್ಮ ಧರ್ಮಬುದ್ಧಿಗೆ ತಕ್ಕಂತೆ ಪಂಚಾಯತರ ಮೂಲಕ ಬಗೆಹರಿಸಿಕೊಳ್ಳಲು ಅವಕಾಶಮಾಡಿ ಕೊಡುತ್ತಿರುವರು; ಕೂಲಿಯವರ ವಾಸಕ್ಕೆ ಯೋಗ್ಯವಾದ ವಸತಿಗಳನ್ನೂ, ಅವರು ತಮ್ಮ ವಿರಾಮ ಕಾಲವನ್ನು ಉಚಿತವಾದ ರೀತಿಯಲ್ಲಿ ಕಳೆಯಲು ವಿಹಾರ ಸ್ಥಾನಗಳನ್ನೂ ಏರ್ಪಡಿಸುವ ಪ್ರಯತ್ನಗಳು ನಡೆಯುತ್ತಿವೆ. ಈ ಪ್ರಯತ್ನಗಳು ಈಗ ನಮ್ಮ ಕಣ್ಣಿಗೆ ಕಾಣುವಷ್ಟು ವಿಸ್ತಾರವಾಗಿಲ್ಲ; ಇನ್ನು ಇಪ್ಪತ್ತು-ಮೂವತ್ತು ವರ್ಷ ಕಳೆದರೆ ಇವು ದೊಡ್ಡದಾಗಿ ಕಾಣಬರುವುವು. ನಮ್ಮ ಸಮಾಜವು ಈಗ ಇರುವುದಕ್ಕಿಂತಲೂ ಅನೇಕ ವಿಧದಲ್ಲಿ ಪರಿಶುದ್ಧವಾಗುವುದೆಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಆದರೆ ನಮ್ಮ ಸಮಾಜಸುಧಾರಣೆಯಲ್ಲಿ ಹಿಂದೂಮತ ಸಂಸ್ಥೆಗಳು ಎಷ್ಟು ಚುರುಕಾಗಿರಬೇಕೋ ಅಷ್ಟು ಚುರುಕಾಗಿಲ್ಲದಿರುವುದು ಬಹಳ ಶೋಚನೀಯವಾದ ವಿಷಯ. ದೌರ್ಜನ್ಯವನ್ನು ತಿದ್ದಲು ಕ್ರೈಸ್ತಮತ ಸಂಸ್ಥೆಗಳು ಮಾಡುತ್ತಿರುವ ಪ್ರಯತ್ನಗಳಲ್ಲಿ ಹತ್ತರ ಒಂದು ಪಾಲನ್ನಾದರೂ ನಮ್ಮ ಧರ್ಮಸಂಸ್ಥೆಗಳು ಮಾಡುತ್ತಿಲ್ಲ. ಇವು ಸ್ವಲ್ಪ ಎಚ್ಚತ್ತು ಕೆಲಸಮಾಡಲು ಪ್ರಾರಂಭಿಸಿದರೆ ದೌರ್ಜನ್ಯವನ್ನು ತೊಲಗಿಸಬಹುದು.

ಅಧ್ಯಾಯ ೪

ಸಮಾಜದ ಕ್ಷೀಣದಶೆ (Social Degeneration)

ಬಹುಕಾಲ ರೋಗದಿಂದ ಸರಳಿದ ಶರೀರದಲ್ಲಿ ಕ್ಷಯ ಹುಟ್ಟು ವಂತೆಯೇ ಅನೇಕ ಕಾಲ ಅವ್ಯವಸ್ಥೆಗೆ ಒಳಗಾದ ಸಮಾಜದಲ್ಲಿ ಕೂಡ ಕ್ಷಯ ಹುಟ್ಟುತ್ತದೆ. ಸಮಾಜವು ಬಹುಕಾಲ ಕ್ಷೀಣ ದಶೆಯಲ್ಲಿದ್ದರೆ ಕೊನೆಗೆ ಅದು ಲುಪ್ತವಾಗುವುದು. ಲುಪ್ತವಾದ ಸಮಾಜಗಳಿಗೆ ಮೈಸಿನಿ, ಟ್ರ್ಯಾಯ್, ಈಜಿಪ್ಟ್, ಬ್ಯಾಬಿಲೋನಿಯ, ಮೊಹೆಂಜೊದಾರೊ, ಮೆಕ್ಸಿಕೊ—ಈ ಸಮಾಜಗಳು ಉದಾಹರಣೆಗಳು. ಕ್ಷೀಣದಶೆಯಲ್ಲಿರುವ ಸಮಾಜಗಳಿಗೆ ಗ್ರೀಸ್ ಹಿಂದು, ಜೈನ ಸಮಾಜಗಳು ನಿದರ್ಶನಗಳು. ಹೀಗೆ ಹೇಳಿದ ಮಾತ್ರಕ್ಕೆ ಇತರ ಸಮಾಜಗಳಲ್ಲಿ ಕ್ಷೀಣದಶೆಯ ಸೂಚನೆಗಳಿಲ್ಲ ಎಂದು ತಿಳಿಯಬಾರದು. ಎಲ್ಲಾ ಸಮಾಜಗಳಲ್ಲಿಯೂ ಅದರ ಚಿಹ್ನೆಗಳಿವೆ; ಕೆಲವೆಡೆ ಅಧಿಕ, ಕೆಲವೆಡೆ ಕಡಮೆ ಅಷ್ಟೇ. ಅವ್ಯವಸ್ಥೆ ಇಲ್ಲದಿರುವ ಸಮಾಜ ಎಲ್ಲಿಯೂ ಇಲ್ಲ; ಎಲ್ಲಿ ಅವ್ಯವಸ್ಥೆ ಇದೆಯೋ ಅಲ್ಲಿ ಬಡತನ, ಖಾಯಿಲೆ, ದೌರ್ಜನ್ಯ, ದುರಾಚಾರ, ಕುಡುಕತನ, ವ್ಯಭಿಚಾರ, ಸೂಳೆಗಾರಿಕೆ, ಉನ್ಮಾದದಶೆ, ನಿರಾಶೆ—ಇವು ಒಂದರ ಹಿಂದೆ ಒಂದು ಹುಟ್ಟುವುವು.

ಕೈಗಾರಿಕೆಯ ಕ್ರಾಂತಿಯ ಪರಿಣಾಮವಾಗಿ ನಮ್ಮ ಜೀವನವು ವೇಗವಾಗಿ ಬದಲಾವಣೆ ಹೊಂದುತ್ತಿದೆ. ಸಾಮಾನ್ಯ ಜನರು ಅದಕ್ಕೆ ಸರಿಯಾಗಿ ಹೆಜ್ಜೆ ಹಾಕಲು ಅಶಕ್ತರಾಗಿರುತ್ತಾರೆ. ಆಧುನಿಕ ಕೈಗಾರಿಕೆಯ ವ್ಯವಸ್ಥೆ ಬಹಳ ತೊಡಕಾಗಿದೆ. ಕೂಲಿ ಮಾಡುವವನು ಗಿರಣಿಗಳಲ್ಲಿ ಕೆಲಸಮಾಡಬೇ

ಕಾದರೆ ಎಂಟು-ಹತ್ತು ವರ್ಷಗಳು ವಿದ್ಯಾಭ್ಯಾಸ ಮಾಡಿ ಒಂದು ಕೆಲಸದಲ್ಲಿ ಚತುರನಾಗಬೇಕು. ಅಷ್ಟು ಶ್ರಮಪಟ್ಟ ಮೇಲೂ ಕೆಲಸ ಸಿಕ್ಕುತ್ತದೆ ಎಂಬ ಭರವಸೆ ಇಲ್ಲ; ಒಂದು ವೇಳೆ ಸಿಕ್ಕಿದರೆ ಅದು ಯಾವಾಗ ತಪ್ಪಿ ಹೋಗುವುದೋ ಎಂಬ ಭೀತಿ ನಿರಂತರವಾಗಿ ಬಾಧಿಸುತ್ತದೆ. ನಮ್ಮ ರಾಜಕೀಯ ಜೀವನವೂ ಬಹಳ ಬಿಕ್ಕಟ್ಟಿಗೆ ಬಂದಿದೆ. ಇದು ಪ್ರಜಾಸರ್ಕಾರದ ಯುಗ; ಪ್ರತಿಯೊಬ್ಬನಿಗೂ ತನ್ನ ದೇಶದ ಕಾನೂನುಗಳನ್ನು ಮಾಡುವ ಹಕ್ಕಿದೆ. ಆದರೆ ಯಾವ ಕಾನೂನಿನಿಂದ ಅನುಕೂಲ, ಯಾವುದರಿಂದ ಪ್ರತಿಕೂಲ ಎಂಬುದನ್ನು ತಿಳಿಯುವ ಶಕ್ತಿ ಸಾಮಾನ್ಯ ಜನರಿಗೆ ಸಾಲದು. ಇದರಿಂದ ಸರ್ಕಾರದ ಆಡಳಿತವು ಹೆಸರಿಗೆ ಮಾತ್ರ ಪ್ರಜೆಗಳದಾಗಿ ಅದರ ತಿರುಳು ಕೆಲವೇ ಕೆಲವು ಮಂದಿ ರಾಜಕಾರ್ಯ ಪಟುಗಳ ವಶವಾಗಿದೆ. ಆದುದರಿಂದ ಸಾಮಾನ್ಯರಿಗೆ ರಾಜಕೀಯ ವಿಚಾರಗಳಲ್ಲಿ ನಿರಾಶೆಯೂ ಜುಗುಪ್ಸೆಯೂ ಹುಟ್ಟಿವೆ. ಅಂತರ ರಾಷ್ಟ್ರೀಯ ಜೀವನದ ಅವ್ಯವಸ್ಥೆಯಂತೂ ಅತಿ ಸಂಕಟಕರವಾಗಿದೆ. ಯುದ್ಧದ ಉರಿಯೆದ್ದು ಯಾವಾಗ ಎಲ್ಲವೂ ಭಸ್ಮವಾಗುವುದೋ ಎಂಬ ಭಯದಿಂದ ಎಲ್ಲರೂ ನಡುಗುತ್ತಿದ್ದಾರೆ. ಯಾವ ಹೊತ್ತಿಗೆ ಏನೋ ಎಂಬ ಭೀತಿಯಲ್ಲಿರುವ ಸಮಾಜದಲ್ಲಿ ಕುಡುಕತನ, ವ್ಯಭಿಚಾರಗಳು ಹೆಚ್ಚಿ ಸಮಾಜವು ನಿತ್ರಾಣವಾಗುವುದೇನಾಶ್ಚರ್ಯ.

ಕುಡುಕತನ—ಅತಿಯಾಗಿ ಏನು ಮಾಡಿದರೂ ಅದರಿಂದ ನಿಸ್ಸತ್ವ ಹುಟ್ಟಿಯೇ ಹುಟ್ಟುತ್ತದೆ. ಕುಡುಕನ ಮಗ ಕುಡುಕನಾಗದಿರಬಹುದು; ಆದರೆ ಖಂಡಿತವಾಗಿ ಅವನ ಜೀವಸತ್ವ ಪುಷ್ಟಿಯಾಗಿರುವುದಿಲ್ಲ. ಅವನಿಗೆ ಪದೇ ಪದೇ ವಾಯುರೋಗ

ಬರಬಹುದು, ಬೀಳುವರೋಗ ಪ್ರಾಪ್ತವಾಗಬಹುದು, ಬುದ್ಧಿ ಮಾಂದ್ಯವೂ ಬುದ್ಧಿಭ್ರಮಣೆಯೂ ಉಂಟಾಗಬಹುದು. ಇವು ಯಾವುದೂ ಒಂದು ವೇಳೆ ಆಗದಿದ್ದರೂ ಅವನು ಜೀವನದ ಹೋರಾಟದಲ್ಲಿ ಇತರ ಮಕ್ಕಳಿಗಿಂತಲೂ ಹಿಂದೆ ಬೀಳುವುದಂತೂ ನಿಜ. ಸಮಾಜದ ಜೀವಸತ್ವ ಬೆಂಡಾಗುವುದೊಂದೇ ಅಲ್ಲ, ಕುಡಿತದಿಂದ ಆಗುವ ದುಷ್ಪರಿಣಾಮ; ಸಮಾಜದ ಶೀಲವು ಕೂಡ ಕೆಡುತ್ತದೆ. ಕುಡುಕನು ಜಗಳಗಂಟ, ಅವನ ಬಾಯಿ ಹೊಲಸು ಎಂದು ಸಭ್ಯರು ಯಾರೂ ಅವನ ಸಹವಾಸ ಮಾಡುವುದಿಲ್ಲ.

ಕುಡುಕತನಕ್ಕೆ ಅನೇಕವೇಳೆ ಬುದ್ಧಿಮಾಂದ್ಯ ಚಿತ್ತದೌರ್ಬಲ್ಯಗಳೇ ಕಾರಣಗಳಾಗಿ ಕಂಡುಬಂದಿವೆ. ಚಿತ್ತಸ್ಥೈರ್ಯವಿಲ್ಲದವನು ದಿಕ್ಸೂಚಿಯಿಲ್ಲದ ದೋಣಿಯ ಹಾಗೆ; ಹೋದದ್ದೇ ಜಾಡು. ಬುದ್ಧಿಮಾಂದ್ಯವು ಕುಡುಕತನಕ್ಕೆ ಕಾರಣವೇ ಅಥವಾ ಕುಡುಕತನ ಬುದ್ಧಿಮಾಂದ್ಯಕ್ಕೆ ಕಾರಣವೇ ಎಂಬುದನ್ನು ತಿಳಿದುಕೊಳ್ಳಲು ಅನೇಕ ಪರೀಕ್ಷೆಗಳು ನಡೆದಿವೆ. ಡಾ|| ಬ್ರಾತ್‌ವೈಟ್ ಅವರು ೨,೨೭೭ ಕುಡುಕರ ಮನಸ್ಸನ್ನು ಪರೀಕ್ಷಿಸಿದ್ದಾರೆ. ಇದರಿಂದ ಶೇಕಡ ೬೨ ಜನರ ಕುಡುಕತನಕ್ಕೆ ಅವರ ಬುದ್ಧಿಮಾಂದ್ಯವೇ ಕಾರಣವೆಂದು ಗೊತ್ತಾಯಿತು. ಕುಡುಕತನಕ್ಕಾಗಿ ಶಿಕ್ಷೆ ಪಡೆದ ೭೭೪ ಜನರನ್ನು ಪರೀಕ್ಷಿಸಿದ್ದರಿಂದ ಅವರಲ್ಲಿ ೪೨೭ ಜನರ ತಂದೆತಾಯಿಗಳು ಕುಡುಕರಾಗಿದ್ದರೆಂದು ಕಂಡುಬಂತು. ಅಮೇರಿಕದ 'ಮೆಡಿಕೊ-ಸೈಕಾಲಜಿಕಲ್ ಸಂಘ'ದವರು ೫,೧೪೫ ಜನ ಹುಚ್ಚರನ್ನು ಪರೀಕ್ಷಿಸಿದರು. ಇವರಲ್ಲಿ ಶೇಕಡ ೨೧ ಜನರ ಹುಚ್ಚಿಗೆ ಕುಡುಕತನವೇ ಕಾರಣವೆಂದು ನಿರ್ಧರವಾಯಿತು. ಪ್ರೊ|| ಹಾಡ್ಜ್ ಎಂಬಾತನು ನಾಯಿ ಮರಿಗಳಿಗೆ ಹೆಂಡಕುಡಿಸಿ

ಅವುಗಳಲ್ಲಿ ಉಂಟಾಗುವ ಬದಲಾವಣೆಗಳನ್ನು ಕಂಡುಹಿಡಿದಿದ್ದಾನೆ. ಹೆಂಡ ಕುಡಿದ ನಾಯಿಗಳಲ್ಲಿ ಹೆದರಿಕೆ ಬಹಳ ಹೆಚ್ಚಾಗಿ ಕಂಡುಬಂತು; ಹೆಂಡ ಕುಡಿಯದ ಅದೇ ಜಾತಿಯ ನಾಯಿಗಳಲ್ಲಿ ಹೆದರಿಕೆ ಕಾಣಬರಲಿಲ್ಲ. ಹೆಂಡ ಕುಡಿದ ನಾಯಿಗಳಿಗೆ ಮರಿಗಳಾಗುವುದೂ ಕಡಮೆ ಎಂಬ ವಿಷಯವೂ ಹೊರಬಿದ್ದಿತು. ಡೆಮ್ ಎಂಬಾತನು ಕುಡುಕರ ಹತ್ತು ಕುಟುಂಬಗಳನ್ನು ಪರಿಶೀಲಿಸಿದ್ದಾನೆ. ಕುಡುಕರ ಮಕ್ಕಳಲ್ಲಿ ಶೇಕಡ ೮೭ ಮಕ್ಕಳು ಮಂಕರಾಗಿದ್ದರು ಮತ್ತು ಹೆಳವರಾಗಿದ್ದರು. ಕುಡುಕರಲ್ಲದವರ ಮಕ್ಕಳಲ್ಲಿ ಶೇಕಡ ೮೮ ಜನರಿಗೆ ಯಾವ ಬಗೆಯಾದ ದುರ್ಲಕ್ಷಣವೂ ಇದ್ದಂತೆ ಕಂಡುಬರಲಿಲ್ಲ. ಇದರಿಂದ ಕುಡಿತವು ದುಷ್ಪರಿಣಾಮಕಾರಿಯಾದುದೆಂದು ಸ್ಥಿರಪಟ್ಟಿದೆ.

ಕುಡಿತದ ದುಷ್ಪರಿಣಾಮಗಳು—ಶರೀರ ಮನೋದೌರ್ಬಲ್ಯಗಳು ಮಾತ್ರವೇ ಅಲ್ಲ, ಸಮಾಜದ ದುಶ್ಶೀಲವೂ ದಿವಾಳಿತನವೂ ಕುಡುಕತನದ ಪರಿಣಾಮಗಳಾಗಿವೆ. ದಿವಾಳಿಗಳಲ್ಲಿ ಶೇಕಡ ೧೬ ಜನ ಕುಡುಕರು; ಪಾತಕರಲ್ಲಿ ಶೇಕಡ ೪೮. ಇಂಗ್ಲೆಂಡಿನಲ್ಲಿ ಶೇಕಡ ೬೦ ಕೊಲೆಪಾತಕಗಳಿಗೂ ಅತ್ಯಾಚಾರಗಳಿಗೂ ಕುಡುಕರೇ ಕಾರಣರು ಎಂದು ಸಲಿವನ್ ಎಂಬಾತನು ರುಜುವಾತು ಕೊಟ್ಟಿದ್ದಾನೆ. ನಮ್ಮ ದೇಶದಲ್ಲಿ ಈ ವಿಧವಾದ ಪರೀಕ್ಷೆಗಳು ನಡೆದಿಲ್ಲ. ಆದರೂ ಈ ಅಂಶಗಳು ನಮ್ಮ ದೇಶಕ್ಕೆ ಅನ್ವಯಿಸುತ್ತವೆ. ಏಕೆಂದರೆ ಇದು ಶಾಸ್ತ್ರದ ವಿಷಯ; ಒಂದು ದೇಶದಲ್ಲಿ ಸತ್ಯವೆಂದು ರುಜುವಾತಾದದ್ದು ಇನ್ನೊಂದು ದೇಶದಲ್ಲಿಯೂ ಸತ್ಯವಾಗುವುದರಲ್ಲಿ ಸಂಶಯವಿಲ್ಲ.

ವ್ಯಭಿಚಾರ—ಕುಡಿತದಂತೆಯೇ ವ್ಯಭಿಚಾರವು ಕೂಡ ದೇಹ ಮನಸ್ಸುಗಳ ಶಕ್ತಿಯನ್ನೂ ಸಾಮಾಜಿಕ ಶೀಲವನ್ನೂ ಕುಗ್ಗಿ

ಸುವುದಾಗಿದೆ. ವ್ಯಭಿಚಾರದಿಂದ ಮೇಹಜಾಡ್ಯಗಳು ಹುಟ್ಟುತ್ತವೆ; ಅದರಿಂದ ಅನೇಕ ದುಷ್ಪರಿಣಾಮಗಳುಂಟಾಗುವುವು. ಮೇಹರೋಗದಿಂದ ಹೆಂಗಸರಿಗೆ ಗರ್ಭಸ್ರಾವವಾಗುವುದು ಹೆಚ್ಚು. ಹುಟ್ಟಿದ ಮಕ್ಕಳಲ್ಲಿ ಶೇಕಡ ೨೦ರಷ್ಟು ಶೈಶವದಲ್ಲಿಯೇ ಸಾಯುವರು; ಉಳಿದವರಲ್ಲಿ ಶೇಕಡ ೪೦ರಷ್ಟು ಬುದ್ಧಿಮಂದರಾಗುವರು. ಮೇಹರೋಗವಿರುವ ಮಕ್ಕಳಿಗೆ ವಾಯು ಬರುವ ಸಂಭವವೂ ಹೆಚ್ಚು. ಮೇಹರೋಗಕ್ಕೂ ಹುಚ್ಚಿಗೂ ಸಂಬಂಧವಿದೆ ಎಂಬುದು ಶಾಸ್ತ್ರಸಿದ್ಧವಾಗಿದೆ.

ವ್ಯಭಿಚಾರದಿಂದ ಸಮಾಜಕ್ಕೆ ಬಹಳ ನಷ್ಟ; ಖಾಯಿಲೆಗಳ ಚಿಕಿತ್ಸೆಗೆ ಸರ್ಕಾರವು ಬಹಳ ಹಣ ಖರ್ಚುಮಾಡಬೇಕಾಗುವುದು; ಕೆಲಸಮಾಡಲು ಅಶಕ್ತಿ ಉಂಟಾಗುವುದರಿಂದ ಬಡತನ ಪ್ರಾಪ್ತವಾಗುವುದು; ಸಂಸಾರದ ಶಾಂತಿಗೆ ಭಂಗ ಬಂದು ಕೊನೆಯಲ್ಲಿ ದಾಂಪತ್ಯ ವಿಚ್ಛೇದದಲ್ಲಿ ಪರ್ಯವಸಾನಗೊಳ್ಳಬಹುದು. ಈ ದಾಂಪತ್ಯ ವಿಚ್ಛೇದದಿಂದ ದಂಪತಿಗಳಿಗೆ ಆಗುವ ಕೆಡುಕುಗಳಿಗಿಂತಲೂ ಅವರ ಸಂತಾನಕ್ಕೆ ಆಗುವ ಕೆಡುಕು ಹೆಚ್ಚು. ಕುಟುಂಬ ಜೀವನವು ಸಮಾಜ ಜೀವನದ ಮೂಲ ಆಧಾರವಾಗಿರುವುದರಿಂದ ಸಾಮಾಜಿಕ ಸಂಸ್ಥೆಗಳು ಮತ್ತು ಧ್ಯೇಯಗಳು ನ್ಯಾಯವಾಗಿ ಕುಟುಂಬ ಜೀವನದಿಂದ ಪುಷ್ಟಿ ಪಡೆಯಬೇಕು. ವ್ಯಭಿಚಾರದಿಂದ ಇದು ತಪ್ಪಿಹೋಗಿ ಸಂಸಾರ ಮುರಿದುಬಿದ್ದು ಸಮಾಜ ಜೀವನವು ಕೆಟ್ಟುಹೋಗುವುದು.

ಜನರು ಕೆಡುವುದಕ್ಕೆ ಅವರ ದುರ್ನಡತೆ, ಅವರ ತಂದೆತಾಯಿಗಳ ದುರ್ನಡತೆ—ಇವು ಮಾತ್ರವೇ ಕಾರಣವಲ್ಲ. ಸಮಾಜದ ಅವಿವೇಕ, ಅನಾದರಣೆ, ಅವ್ಯವಸ್ಥೆ, ಅನ್ಯಾಯಗಳೂ ಕಾರಣ. ಸಮಾಜದಲ್ಲಿ ಮೇಹಜಾಡ್ಯ ಹೆಚ್ಚುವುದಕ್ಕೆ ಸಮಾಜವು ಸೂಳೆ

ಗಾರಿಕೆಯನ್ನು ಒಂದು ಕಸಬನ್ನಾಗಿ ಒಪ್ಪಿಕೊಂಡಿರುವುದೇ ಕಾರಣ. ಅಲ್ಲದೆ ಗಣಿಗಳಲ್ಲಿಯೂ ಮಿಲ್ಲುಗಳಲ್ಲಿಯೂ ಆಗಾಗ ಸಂಭವಿಸುವ ಅನಾಹುತಗಳೂ ಕಾರಣವಾಗುತ್ತವೆ. ಗಣಿಯಲ್ಲಿ ಕೆಲಸಮಾಡುತ್ತಿರುವಾಗ ಸ್ಫೋಟನವಾದರೆ ನೂರಾರು ಮಂದಿ ಸಾಯುವರು; ಇದರಿಂದ ಆ ಸಂಸಾರಗಳೆಲ್ಲ ಅನಾಥರಾಗುವರು. ಹೀಗೆ ಅನಾಥರಾದವರಿಗೆ ಸಮಾಜವು ಸಾಕಾದಷ್ಟು ಸಹಾಯಮಾಡುತ್ತಿಲ್ಲ. ಇವರು ತಮ್ಮ ಜೀವನೋಪಾಯವನ್ನು ಸಂಪಾದಿಸಲು ಕೆಟ್ಟದಾರಿಗೆ ಬೀಳಬಹುದು.

ಆರ್ಥಿಕ ಮುಗ್ಗಟ್ಟು ಪ್ರಾಪ್ತವಾದಾಗ ಕೂಡ ನೂರಾರು ಮಂದಿ ಕೆಲಸ ತಪ್ಪಿದವರು ದೇಶಾಂತರ ಹೋಗುವರು. ದಾಂಪತ್ಯ ಜೀವನದಲ್ಲಿ ವ್ಯತ್ಯಾಸಗಳುಂಟಾಗುವುವು. ಇವರ ಹೆಂಡತಿ ಮಕ್ಕಳು ಹೊಟ್ಟೆಪಾಡಿಗಾಗಿ ಅನೇಕ ಮಾರ್ಗಗಳನ್ನು ಹುಡುಕಬೇಕಾಗುವುದು. ಸಮಾಜದಲ್ಲಿ ಬಡವರಿಗೂ ಬಂಡವಾಳಗಾರರಿಗೂ ಇರುವ ಅಗಾಧವಾದ ಆರ್ಥಿಕವ್ಯತ್ಯಾಸಗಳೂ ಜನರ ಪತನಕ್ಕೆ ಕಾರಣ. ಬಂಡವಾಳವಂತರಿಗೆ ಎಷ್ಟು ಐಶ್ವರ್ಯ ಬಂದರೂ ಸಾಲದು; ಅವರು ವಿಶೇಷವಾಗಿ ಸ್ವಾರ್ಥಚಿಂತನೆಯಲ್ಲಿ ಮಗ್ನರಾಗಿರುತ್ತಾರೆಯೇ ಹೊರತು ಸಮಾಜದ ಹಿತವನ್ನು ಬಯಸುವುದಿಲ್ಲ; ಕೋಟ್ಯಾಧೀಶರಾಗುವುದಕ್ಕಾಗಿ ಜನರ ಆರೋಗ್ಯಶೀಲ ಸ್ವಾತಂತ್ರ್ಯಗಳನ್ನು ಹಾಳುಮಾಡಲು ಹಿಂಜರಿಯುವುದಿಲ್ಲ. ಲಾಭ ಸಂಪಾದನೆಗಾಗಿ ಕುಡುಕತನವನ್ನೂ ಗಾಂಜಾ, ಅಫೀಮು, ಕೊಕೇನ್ ಸೇವನೆಯನ್ನೂ ಹೆಚ್ಚಿಸಲು ಸರ್ವಪ್ರಯತ್ನಮಾಡುವರು. ಕೆಲವು ದೇಶಗಳಲ್ಲಿ ಇವರಿಗೆ ಸರ್ಕಾರವೂ ಬೆಂಬಲವಾಗಿದೆ. ಹೀಗೆ ಸರ್ಕಾರದ ಪ್ರೋತ್ಸಾಹವಿಲ್ಲದ ಕೆಲವು ದೇಶಗಳಲ್ಲಿ ಆರಂಭವಾದ ಪಾನನಿರೋಧ ಚಳುವಳಿ

ಮುರಿದುಬಿದ್ದುದು ಬಹಳ ಮಟ್ಟಿಗೆ ಬಂಡವಾಳಗಾರರ ಸಾಹಸದಿಂದಲೇ. ಇಂಡಿಯಾ ದೇಶದಲ್ಲಿ ಕೊಕೇನ್ ಸೇವನೆ ಹೆಚ್ಚುತ್ತಿರುವುದು ಬೊಂಬಾಯಿ ಕಲ್ಕತ್ತ ನಗರಗಳಲ್ಲಿರುವ ಸಾಹುಕಾರರ ಕೃತ್ರಿಮದಿಂದ.[1] ಆಧುನಿಕ ವೈಜ್ಞಾನಿಕ ಪ್ರಯೋಗಗಳ ಬಲದಿಂದ ಪ್ರಪಂಚದ ಜನರೆಲ್ಲ ತಿಂದು ತೇಗುವಷ್ಟು ಬೆಳೆ ಬೆಳೆಯಲು ಸಾಧ್ಯವಾದರೂ ಕೆಟ್ಟ ಖಾಯಿಲೆಗಳನ್ನು ಸ್ವಲ್ಪ ಖರ್ಚಿನಲ್ಲೇ ವಾಸಿಮಾಡುವ ಔಷಧಿಗಳನ್ನು ತಯಾರು ಮಾಡಲು ಶಕ್ಯವಾದರೂ ಬಂಡವಾಳಗಾರರು ಅವನ್ನು ಆಗಗೊಡಿಸುವುದಿಲ್ಲ. ಹಿಟ್ಲರ್ ಮುಸಲೋನಿಗಳಿಗಿಂತ ಬಂಡವಾಳಗಾರರೇ ಪ್ರಪಂಚದ ಶಾಂತಿಭಂಗಕ್ಕೆ ಮುಖ್ಯವಾಗಿ ಕಾರಣರು. ಯುದ್ಧವಾಗುವುದಕ್ಕೆ ರಾಜಕೀಯ ಕಾರಣಗಳಿಗಿಂತಲೂ ಆರ್ಥಿಕ ಕಾರಣಗಳೇ ಪ್ರಬಲವಾದುವು. ಹೀಗೆ ಹೇಳಿದಾಗ ನೋಬೆಲ್, ಮಾರ್ಗೊನಿ, ಕಾರ್ನೆಗಿ ಮುಂತಾದ ಕೋಟ್ಯಾಧೀಶರು ಮಾಡುತ್ತಿರುವ ಧರ್ಮಕಾರ್ಯಗಳನ್ನು ಕೆಲವರು ನಮ್ಮ ನೆನಪಿಗೆ ತರಬಹುದು. ಆದರೆ ಎಲ್ಲ ಬಂಡವಾಳಗಾರರಲ್ಲಿಯೂ ಇಂಥ ಧರ್ಮ ಬುದ್ಧಿ ಇರುವುದು ಅಪರೂಪ. ಅದೂ ಅಲ್ಲದೆ ಇವರ ದಾನಧರ್ಮಗಳು ಬಹುಶಃ ಹಿಂದೆ ಇವರು ಮಾಡಿದ ಪಾಪಕೃತ್ಯಗಳಿಗೆ ಪ್ರಾಯಶ್ಚಿತ್ತವಿರಬಹುದೆ ಎಂಬ ಪ್ರಶ್ನೆಗೂ ಅವಕಾಶವಿದೆ.

೧. **ಕುಡುಕತನಕ್ಕೆ ಪರಿಹಾರಗಳು**—ಕುಡುಕತನವನ್ನು ಹೋಗಲಾಡಿಸಲು ಪ್ರತಿಯೊಂದು ನಾಗರಿಕ ಸಮಾಜವೂ ಪ್ರಯತ್ನಿಸುತ್ತಿದೆ. ಹಿಂದು, ಬೌದ್ಧ, ಕ್ರೈಸ್ತ,

---

[1] Bejoy Shanker Haikerwal: *Economic and Social Aspects of Crime in India*, p. 49.

ಮಹಮದೀಯ ಮುಂತಾದ ಎಲ್ಲ ಮತಗಳೂ ಕುಡಿತವನ್ನು ನಿಷೇಧಿಸಿವೆ. ಪಾಶ್ಚಾತ್ಯ ದೇಶಗಳಲ್ಲಿ ಕೆಲವೆಡೆ ಪಾನನಿರೋಧ ಚಳುವಳಿ ಕೆಲವು ವರ್ಷಗಳ ಕಾಲ ಪ್ರಬಲವಾಗಿ ನಡೆದು ಈಗ ಸ್ವಲ್ಪ ತಣ್ಣಗಾಗಿದೆ. ನಮ್ಮ ದೇಶದಲ್ಲಿ ಈಗ ಈ ಚಳುವಳಿ ಬಹಳ ಪ್ರಬಲವಾಗಿದೆ. ಆದರೆ ಅದು ಎಷ್ಟು ಮಟ್ಟಿಗೆ ಜಯಪ್ರದ ವಾಗುವುದೋ ತಿಳಿಯದು. ಮದ್ಯಪಾನವನ್ನು ಸಂಪೂರ್ಣವಾಗಿ ನಿರೋಧಿಸುವುದು ನ್ಯಾಯವೇ ಎಂಬುದು ಚರ್ಚಾಸ್ಪದವಾದ ವಿಷಯ. ಪಾನನಿರೋಧವನ್ನು ಮಿತಿಯಿಲ್ಲದೆ ವಿಧಿಸುವುದು ಸರಿಯೂ ಅಲ್ಲ, ಕ್ಷೇಮಕರವೂ ಅಲ್ಲ. ಯಾವುದನ್ನೇ ಆಗಲಿ ಅತಿಯಾಗಿ ಸೇವಿಸಿದರೆ ಅದರಿಂದ ಕೆಡುಕಾಗದೆ ಇರದು. ಇದು ಮದ್ಯಪಾನಕ್ಕೂ ಅನ್ವಯಿಸುತ್ತದೆ. ಮದ್ಯಪಾನವು ಎಲ್ಲೆ ಮೀರಿದಾಗ ಸರ್ಕಾರವು ಅದನ್ನು ನಿಬಂಧನೆಗೆ ಒಳಪಡಿಸ ಬೇಕಲ್ಲದೆ ಮಿತಿಯಲ್ಲಿರುವಾಗ ಅದನ್ನು ಕಾನೂನಿನ ಮೂಲಕ ತಡೆಯಲು ಪ್ರಯತ್ನಿಸುವುದು ನ್ಯಾಯವಾಗಿ ಕಾಣಿಸುವುದಿಲ್ಲ. ಅದೂ ಅಲ್ಲದೆ ಅದನ್ನು ಸಂಪೂರ್ಣವಾಗಿ ನಿರೋಧಮಾಡು ವುದರಿಂದ ಏನೇನು ದುಷ್ಪರಿಣಾಮಗಳುಂಟಾಗುವುವೋ ಎಂಬ ಶಂಕೆಗೂ ಅವಕಾಶವಿದೆ. ಸಮತೂಕವಾದ ಆಹಾರವಿಲ್ಲದೆ ಇರುವವರಿಗೆ ಮದ್ಯಪಾನದ ಅವಕಾಶ ದೊರೆಯದೆ ಹೋದರೆ ಅಂಥವರ ಮಕ್ಕಳು ಸಾಯುವುದು ಹೆಚ್ಚು ಎಂದು ಹಕ್ಸ್ಲೆ ಎಂಬ ಪ್ರಸಿದ್ಧ ಜೀವಶಾಸ್ತ್ರಜ್ಞನು ಅಭಿಪ್ರಾಯಪಟ್ಟಿರುವನು. ಆದರೂ ಕುಡುಕತನವನ್ನು ತಪ್ಪಿಸುವುದು ಸಮಾಜದ ಕರ್ತವ್ಯ ವೆಂಬುದನ್ನು ಎಲ್ಲರೂ ಒಪ್ಪಿರುತ್ತಾರೆ. ಕೆಲವರು ಹದ್ದುಮೀರಿದ ಕುಡಿತವನ್ನು ನಿರೋಧಿಸಲು ಮಾತ್ರ ಕಾನೂನನ್ನು ಉಪ ಯೋಗಿಸಬೇಕೆಂದೂ ಸ್ವಲ್ಪವಾಗಿ ಮತ್ತು ಮಿತವಾಗಿ ಕುಡಿಯು

ವವರ ಮೇಲೆ ಕಾನೂನನ್ನು ವಿಧಿಸಬಾರದೆಂದೂ ಅಭಿಪ್ರಾಯ ಪಡುತ್ತಾರೆ. ಇದಕ್ಕೆ ಬದಲಾಗಿ ಸಾಮಾಜಿಕ ಮತ್ತು ಮತ ಸಂಸ್ಥೆಗಳನ್ನು ಉಪಯೋಗಿಸಿಕೊಂಡರೆ ಉತ್ತಮ. ಇನ್ನು ಕೆಲವರು ಎಲ್ಲಕ್ಕೂ ಕಾನೂನೇ ಬ್ರಹ್ಮಾಸ್ತ್ರ ಎಂದು ಹೇಳುವರು. ಒಟ್ಟಿನಲ್ಲಿ ಮೊದಲನೆಯ ಮತವೇ ಸಾಧುವಾದುದೆಂದು ತೋರುವುದು; ಬಹುಶಃ ಕೊನೆಗೆ ನಿಲ್ಲುವುದೂ ಅದೇ.[1]

ಮಿತಿಮೀರಿದ ಕುಡಿತವನ್ನು ತಪ್ಪಿಸುವ ಕಾರ್ಯಕ್ಕೆ ಸಹಕಾರಿಯಾಗಿ ಜನರ ಆರ್ಥಿಕಸ್ಥಿತಿಯನ್ನೂ ತಿಳಿವಳಿಕೆಯನ್ನೂ ಶೀಲವನ್ನೂ ಉತ್ತಮಗೊಳಿಸುವ ಪ್ರಯತ್ನಗಳು ಹೆಚ್ಚಾಗಿ ನಡೆಯಬೇಕು. ಪೂರ್ಣವಾಗಿ ಪಾನನಿರೋಧ ಮಾಡದೆ ದುಷ್ಪರಿಣಾಮಕಾರಿಯಾದ ಕುಡಿತವನ್ನು ಮಾತ್ರ ಕಾನೂನಿನಿಂದ ತಡೆದು ಹೆಂಡದಿಂದ ಬರುವ ಉತ್ಪತ್ತಿಯನ್ನೆಲ್ಲ ಜನರ ಆರ್ಥಿಕ ನೈತಿಕ ಸ್ಥಿತಿಗಳನ್ನು ಮಾರ್ಪಡಿಸಲು ಉಪಯೋಗಿಸಿದರೆ ಸಂಪೂರ್ಣವಾದ ಮದ್ಯಪಾನ ನಿರೋಧ ಕಾರ್ಯವು ಕೈಗೂಡಿ ಜಯಪ್ರದವಾಗುವ ಸಂಭವ ಹೆಚ್ಚು.

ಕುಡುಕತನ ವ್ಯಭಿಚಾರಗಳನ್ನು ತಡೆಯಲು ಮೊದಲು ಜನರಿಗೆ ಸರಿಯಾದ ವಾಸದ ವಸತಿಗಳನ್ನು ಮಾಡಿಕೊಡಬೇಕು; ಅವರಿರುವ ಸನ್ನಿವೇಶ ಚೊಕ್ಕಟವಾಗಿರುವಂತೆ ಮಾಡಬೇಕು; ಹೆಚ್ಚು ಖರ್ಚಿಲ್ಲದೆ ವಿನೋದಕರವಾಗಿ ಕಾಲಕಳೆಯಲು ಅವಕಾಶಗಳನ್ನು ಏರ್ಪಡಿಸಬೇಕು. ಸಂಗೀತ, ಭಜನೆ, ಹರಿಕಥೆ, ಪುರಾಣ, ಸ್ವಾರಸ್ಯವಾದ ವಾಚನಗಳು, ಉಪನ್ಯಾಸಗಳು, ಚಿತ್ರ

---

[1] 'ಅರ್ಥಶಾಸ್ತ್ರ'ವನ್ನು ಬರೆದಿರುವ ಚಾಣಕ್ಯನು ಕುಡಿತದ ಮಿತಿಯನ್ನೂ ಅದನ್ನು ಹದ್ದುಬಸ್ತಿನಲ್ಲಿಡುವ ರೀತಿಯನ್ನೂ ಹೇಳಿದ್ದಾನೆ (ಭಾಗ II, ಅಧ್ಯಾಯ ೨೫).

ಪ್ರದರ್ಶನಗಳು, ಆಟಗಳು, ತೋಟದ ಕೆಲಸ, ವ್ಯಾಯಾಮ ಮುಂತಾದ ಹವ್ಯಾಸಗಳಿಗೆ ಮುನಿಸಿಪಾಲಿಟಿಯವರು ಸರಿಯಾದ ಅನುಕೂಲವನ್ನು ಮಾಡಿಕೊಡಬೇಕು.

೨. **ವ್ಯಭಿಚಾರ ಮತ್ತು ಮೇಹರೋಗ ನಿವಾರಣೆ—** ವ್ಯಭಿಚಾರವನ್ನು ತಪ್ಪಿಸುವುದಕ್ಕೂ ಅದರ ದುಷ್ಪರಿಣಾಮವಾದ ಮೇಹಜಾಡ್ಯದಿಂದ ಜನರನ್ನು ಪಾರುಮಾಡುವುದಕ್ಕೂ ಅನೇಕ ಸಲಹೆಗಳಿವೆ—(೧) ಮೇಹರೋಗದವರಿಗಾಗಿಯೇ ಪ್ರತ್ಯೇಕವಾಗಿ ಆಸ್ಪತ್ರೆಗಳನ್ನು ಸ್ಥಾಪಿಸುವುದು; (೨) ಸೂಳೆಗಾರಿಕೆಯನ್ನೂ ದೇವದಾಸಿತ್ವವನ್ನೂ ನಿರೋಧಿಸಲು ಕಾನೂನು ಮಾಡುವುದು; ಮೇಹರೋಗದವರು ರೋಗ ವಾಸಿಮಾಡಿಕೊಂಡು ಸರ್ಟಿಫಿಕೇಟನ್ನು ಪಡೆದ ಹೊರತು ಮದುವೆಯಾಗುವುದಕ್ಕಾಗಲಿ, ಕೆಲಸಕ್ಕೆ ಸೇರುವುದಕ್ಕಾಗಲಿ ಅವಕಾಶವಿಲ್ಲದಂತೆ ಕಾನೂನನ್ನು ಜಾರಿಗೆ ತರುವುದು; (೩) ಸಂಘಗಳನ್ನು ಸ್ಥಾಪಿಸಿ ವ್ಯಭಿಚಾರದಿಂದ ಆಗುವ ದುಷ್ಪರಿಣಾಮಗಳ ವಿಷಯವನ್ನು ಜನರಿಗೆ ತಿಳಿಸುವ ಪ್ರಚಾರಕಾರ್ಯಗಳನ್ನು ಕೈಕೊಳ್ಳುವುದು.

ಸೂಳೆಗಾರಿಕೆಯನ್ನೂ ದೇವದಾಸಿತ್ವವನ್ನೂ ನಿರೋಧಿಸಿ ಕಾನೂನುಗಳನ್ನು ಮಾಡುವುದು ಬಹಳ ಸುಲಭವಾದ ಸಲಹೆ; ಆದರೆ ಅದು ಎಷ್ಟು ಸುಲಭವೋ ಅಷ್ಟೇ ಅಪ್ರಯೋಜಕವಾದದ್ದು. ಸಾಮಾಜಿಕ ಸುಧಾರಣೆಯ ಕೆಲಸವು ಸುಲಭವೂ ಅಲ್ಲ, ಅವಸರದಲ್ಲಿ ಮಾಡುವಂಥದೂ ಅಲ್ಲ. ಈ ಕಾರ್ಯದಲ್ಲಿ ಮುಖ್ಯವಾಗಿ ಸಾಮಾಜಿಕ ಮತ್ತು ನೈತಿಕ ವಿಧಾನಗಳನ್ನು ಉಪಯೋಗಿಸಿಕೊಳ್ಳಬೇಕು; ಅದಕ್ಕೆ ಸಹಕಾರಿಯಾಗಿ ಸರ್ಕಾರವು ಕಾನೂನುಗಳನ್ನು ರಚಿಸಬೇಕು.

ದಾಂಪತ್ಯ ಜೀವನ, ಲೈಂಗಿಕ ಆರೋಗ್ಯ, ಸಂತಾನ ವಿಜ್ಞಾನ—ಇವುಗಳ ವಿಚಾರವಾಗಿ ಜನರಿಗೆ ಸರಿಯಾದ ತಿಳಿವಳಿಕೆಯನ್ನು ಉಂಟುಮಾಡಲು ಒಂದೊಂದು ಊರಿನಲ್ಲೂ ಸಮಾಜಾರೋಗ್ಯದ ಸಂಘಗಳು ಹುಟ್ಟಬೇಕು. ಪ್ರಚಾರ ಕಾರ್ಯವು ಆವಶ್ಯಕ. ಜೀವಶಾಸ್ತ್ರವನ್ನು ಸಾಮಾಜಿಕ ದೃಷ್ಟಿಯಿಂದ ಬೋಧಿಸುವುದನ್ನೇ ನಾಲ್ಕಾರು ವರ್ಷಗಳ ವರೆಗೆ ಅಭ್ಯಾಸ ಮಾಡಿದವರಿಗಲ್ಲದೆ ಜೀವಶಾಸ್ತ್ರವನ್ನು ಮಾತ್ರ ಓದಿದವರಿಗೆ ಈ ಪ್ರಚಾರಕಾರ್ಯವು ಸಾಧ್ಯವಿಲ್ಲ.[1] ನಮ್ಮ ದೇಶದಲ್ಲಿ ಇಂಥ ಸಮಾಜಾರೋಗ್ಯ ಸಂಘಗಳು ಅಲ್ಲಲ್ಲಿ ಹುಟ್ಟಿವೆ; ೧೯೨೭ ರಲ್ಲಿ ಬ್ರಿಟಿಷ್ ಸಾಮಾಜಿಕ ಆರೋಗ್ಯ ಸಮಿತಿಯವರು ಇಲ್ಲಿಗೆ ಬಂದಿದ್ದಾಗ ಅವರ ಉಪನ್ಯಾಸಗಳನ್ನು ಏರ್ಪಡಿಸಿ ಇವು ಕೆಲಸಮಾಡುತ್ತ ಎಚ್ಚತ್ತಿದ್ದವು; ಈಗ ಮಲಗಿ ನಿದ್ದೆಮಾಡುತ್ತಿವೆ. ಜನರಿಗೆ ತಿಳಿಯುವ ಭಾಷೆಯಲ್ಲಿಯೂ ರೀತಿಯಲ್ಲಿಯೂ ಉಪನ್ಯಾಸಗಳನ್ನು ಅವು ಏರ್ಪಡಿಸುತ್ತಿಲ್ಲ. ಸಿನಿಮಾ ಮಂದಿರಗಳಲ್ಲಿ ಈ ಜ್ಞಾನಪ್ರಚಾರ ಸಾಧಕವಾದ ಚಿತ್ರಗಳನ್ನು ತೋರಿಸುವ ಏರ್ಪಾಡು ಮಾಡುವುದು ಒಳ್ಳೆಯದು.

ಮೇಹರೋಗದವರಿಗೆ ಪ್ರತ್ಯೇಕವಾದ ಆಸ್ಪತ್ರೆಗಳನ್ನು ಸ್ಥಾಪಿಸುವುದಕ್ಕಾಗಿ ನಮ್ಮ ದೇಶದ ಧರ್ಮಪರಾಯಣರ

---

[1] ಈ ಪ್ರಚಾರದ ಉಪನ್ಯಾಸಗಳನ್ನು ಮಾಡುವವರ ಸಹಾಯಕ್ಕಾಗಿ ಒಂದು ವಿಷಯ ಸೂಚಿಯನ್ನು ಬ್ರಿಟಿಷ್ ಸಾಮಾಜಿಕ ಆರೋಗ್ಯ ಸಮಿತಿಯವರು ರಚಿಸಿರುತ್ತಾರೆ. ಇದು Henry Ernest Garle ಎಂಬವರು ಬರೆದಿರುವ *Social Hygiene Today* ಎಂಬ ಪುಸ್ತಕದ ಹನ್ನೊಂದನೆಯ ಪರಿಶಿಷ್ಟದಲ್ಲಿ ಕಾಣಿಸಿದೆ.

ಮತ್ತು ಧರ್ಮಪ್ರಕಾಶರ ಔದಾರ್ಯವೂ ಗಮನವೂ ಅತ್ತ ಕಡೆ ಹರಿಯಬೇಕು. ಸರ್ಕಾರವೂ ಸಾಧ್ಯವಾದಷ್ಟು ಪ್ರೋತ್ಸಾಹವನ್ನು ತೋರಿಸಬೇಕು.

ಇದರಿಂದ ಕ್ರಮಕ್ರಮವಾಗಿ ಜನರು ಯೋಗ್ಯವಾದ ರೀತಿಯಲ್ಲಿ ಸಂಸಾರಮಾಡುವಂತೆ ಆಗುವುದು. ಅವರ ಆರ್ಥಿಕ ಸಾಮಾಜಿಕ ಸ್ಥಿತಿಗಳು ಉತ್ತಮವಾಗುವುವು. ದೇವದಾಸಿತ್ವವೂ ಸೂಳೆಗಾರಿಕೆಯೂ ಕಡಮೆಯಾಗುವುವು. ಕುಟುಂಬ ಜೀವನವನ್ನು ಎಷ್ಟು ಉತ್ತಮಗೊಳಿಸಿದರೂ ಸ್ತ್ರೀಪುರುಷರನ್ನು ಎಷ್ಟು ಸಂಸ್ಕೃತರನ್ನಾಗಿ ಮಾಡಿದರೂ ಅವರು ಪರಪುರುಷರನ್ನೂ ಪರಸ್ತ್ರೀಯರನ್ನೂ ಕಣ್ಣೆತ್ತಿನೋಡದಂತೆ ಮಾಡಲು ಎಂದಿಗಾದರೂ ಸಾಧ್ಯವಾಗುತ್ತದೆಯೋ ಇಲ್ಲವೋ ಹೇಳುವುದಕ್ಕಾಗುವುದಿಲ್ಲ. ಆದರೆ ಅವರು ಬಹುಶಃ ವಿಟರನ್ನೂ ಸೂಳೆಯರನ್ನೂ ಆಶಿಸುವುದು ಕಡಮೆಯಾಗುವುದರಲ್ಲಿ ಸಂದೇಹಪಡಲು ಯಾವ ಕಾರಣವೂ ಇರುವುದಿಲ್ಲ. ಮನುಷ್ಯಪ್ರಯತ್ನವು ನಡೆಯುತ್ತಲೇ ಇರಬೇಕು.

ಪರಿಸಮಾಪ್ತಿ

ಹಿಂದಿನ ಅಧ್ಯಾಯಗಳಲ್ಲಿ ಬಡತನ, ದೌರ್ಜನ್ಯ, ಕ್ಷೀಣದಶೆ—ಇವೊಂದೊಂದನ್ನೂ ಬೇರೆ ಬೇರೆಯಾಗಿ ವಿವರಿಸಿ ಒಂದೊಂದಕ್ಕೂ ಪ್ರತ್ಯೇಕವಾಗಿ ಪರಿಹಾರಗಳನ್ನು ಸೂಚಿಸಿದೆವಷ್ಟೆ. ಇದನ್ನು ನೋಡಿ ಒಂದನ್ನು ಬಿಟ್ಟು ಒಂದನ್ನು ನಿವಾರಣೆಮಾಡಬಹುದೆಂದು ಭಾವಿಸಕೂಡದು. ರೋಗಗಳು ಬಲಿತು ಜಡ್ಡುಕಟ್ಟಿಕೊಂಡಿರುವ ನಮ್ಮ ಸಮಾಜದಲ್ಲಂತೂ ಅವನ್ನು ಬೇರೆ

ಬೇರೆಯಾಗಿ ಗುಣಪಡಿಸುವುದು ಅಸಾಧ್ಯ. ಆದುದರಿಂದಲೇ ಸರ್ ಎಂ. ವಿಶ್ವೇಶ್ವರಯ್ಯನವರಂಥ ಪ್ರಗತಿಗಾಮಿಗಳು ನಮ್ಮ ಸಮಾಜವನ್ನೆಲ್ಲ ಒಟ್ಟಾಗಿ ಪುನಃ ರಚಿಸಬೇಕೆಂದು ಸಾರುತ್ತಿರುವರು. ಈಗೇನೋ ಅವರ ಮಾತನ್ನು ನಾವು ಕಿವಿಯ ಮೇಲೆ ಹಾಕಿಕೊಳ್ಳುತ್ತಿಲ್ಲ; ಆದರೆ ಅದನ್ನು ನೆನೆದುಕೊಳ್ಳುವ ಕಾಲ ಜಾಗ್ರತೆಯಾಗಿಯೇ ಬರುವುದು.

ನಮ್ಮ ಜೀವನದ ಪುನರ್ಘಟನೆಗೆ ಎರಡು ತತ್ತ್ವಗಳು ಅಡಿಗಲ್ಲಾಗಿರಬೇಕು. ಒಂದು ಮಹಾತ್ಮ ಗಾಂಧಿಯವರ ಪ್ರೇಮ (ಅಹಿಂಸಾ) ತತ್ತ್ವ, ಎರಡನೆಯದು ಸರ್ ಎಂ. ವಿಶ್ವೇಶ್ವರಯ್ಯನವರ ಕೈಗಾರಿಕೆಯ ತತ್ತ್ವ. ಒಂದು ಆಧ್ಯಾತ್ಮಿಕವಾದುದು, ಇನ್ನೊಂದು ಆರ್ಥಿಕವಾದುದು. ಒಂದು ಪೌರ್ವಾತ್ಯ ತತ್ತ್ವ, ಇನ್ನೊಂದು ಪಾಶ್ಚಾತ್ಯ ತತ್ತ್ವ. ಒಂದು ಶಾಂತಿಯನ್ನು ಕೊಡುತ್ತದೆ, ಇನ್ನೊಂದು ಶಕ್ತಿಯನ್ನು ಕೊಡುತ್ತದೆ. ಈ ತತ್ತ್ವಗಳನ್ನು ಬೋಧಿಸುತ್ತಿರುವ ವ್ಯಕ್ತಿಗಳ ವಿರುದ್ಧ ಚಿತ್ರಗಳನ್ನು ಮರೆತು ಅವರ ಭಾವನೆಗಳನ್ನು ಮಾತ್ರ ಆಲೋಚಿಸಿದರೆ ಅವೆರಡೂ ಬೆರೆತು ಜೀವಿಗಳು ಮತ್ತು ಜೀವನೋಪಾಯ ಮಾರ್ಗಗಳು ಅನೇಕವಾದರೂ ಜೀವನದ ಚಿಲುಮೆ ಪ್ರೇಮವೊಂದೇ ಎಂಬ ತತ್ತ್ವ ವಿಕಾಸವಾಗುವುದು. ಇದನ್ನು ತಿಳಿದ ಸಮಾಜದಲ್ಲಿ ಎಲ್ಲರೂ ಸುಖಿಗಳಾಗುವರು; ಸರ್ಕಾರವು ಜನರನ್ನು ನ್ಯಾಯದಿಂದ ಪಾಲಿಸುವುದು; ಕೃಷಿ ಕೈಗಾರಿಕೆಗಳು ಅಭಿವೃದ್ಧಿಗೆ ಬರುವುವು; ಬಡವರು ಭಾಗ್ಯವಂತರಾಗುವರು; ನಿರಾಯುಧರು ಕೂಡ ನಿರ್ಭಯರಾಗಿರುವರು.

S

and
the

1641-3

ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರೋಪನ್ಯಾಸಮಾಲೆ

೧. ಖಗೋಳಶಾಸ್ತ್ರ ಪ್ರವೇಶ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.

೨. ಸಮಾಜದ ರೋಗರುಜಿನಗಳು—ಜಿ. ಹನುಮಂತ ರಾವ್, ಎಂ.ಎ.

೩. ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.

೪. ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.

೫. ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ, ಎಂ.ಎ.